ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಯಾರಿಗೆ ಬಂತು ಅಚ್ಛೇ ದಿನ್?

ಸಂಪುಟ 12 | ಸಂಚಿಕೆ 17 | ಏಪ್ರಿಲ್ 23-29, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಸವಾಲುಗಳ ನಿರೀಕ್ಷೆಗಳ ನಡುವೆ

ಸಿಪಿಐ(ಎಂ) 22ನೇ ಮಹಾಧಿವೇಶನ

ಕರ್ನಾಟಕ ಜನಮತ 2018

ಕರ್ನಾಟಕದ ಮತದಾರರಿಗೆ ಯಾರು ಹಿತವರು?





ಜನಪರ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ ಆರಂಭ

ನಿಗದಿತ ಅವಧಿಯ ಉದ್ಯೋಗ - ಕಾರ್ಮಿಕರನ್ನು ಬಡಿದು ಮಾಲಿಕರಿಗೆ ಉಡುಗೊರೆ





ಮತ್ತೆ ನಗದಿಗೆ ಪರದಾಟ

ಈ ಬಾರಿ ಯಾರ ಕಲ್ಯಾಣಕ್ಕಾಗಿ?

ದೌರ್ಜನ್ಯ ತಡೆ ಕಾಯ್ದೆ

ಕೇರಳದಿಂದ ಮರು ವಿಮರ್ಶೆ ಅರ್ಜಿ

ಮಧ್ಯಪ್ರದೇಶದಲ್ಲಿ ದುರ್ಬಲ ಕಾಯ್ದೆ ಜಾರಿ

ಮಕ್ಕಾ ಮಸೀದಿ ಸ್ಫೋಟದ ತೀರ್ಪು: ನ್ಯಾಯದ ಮತ್ತೊಂದು ಅಪಹಾಸ್ಯ

–ಸಿಪಿಐ(ಎಂ)ನ 22ನೇ ಮಹಾಧಿವೇಶನದ ವಿಮರ್ಶೆ



ಸಿಪಿಐ(ಎಂ)ನ 22ನೇ ಮಹಾಧಿವೇಶನ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‍ಐಎ) ವಿಶೇಷ ನ್ಯಾಯಾಲಯ ಎಪ್ರಿಲ್ 16 ರಂದು ಮಕ್ಕಾ ಮಸೀದಿ ಬಾಂಬ್ ಸ್ಫೋಟದ ಕೇಸಿನಲ್ಲಿ ಬಂಧಿತರಾದ ಎಲ್ಲರನ್ನೂ ಖುಲಾಸೆಗೊಳಿಸಿರುವುದರ ಬಗ್ಗೆ ಆಘಾತವನ್ನು ವ್ಯಕ್ತಪಡಿಸಿದೆ. ಅಪರಾಧಗಳ ತನಿಖೆ ಮತ್ತು ವಿಚಾರಣೆಗಳ ಹೊಣೆಯಿರುವ ಕೇಂದ್ರೀಯ ಸಂಸ್ಥೆಗಳು ಹಿಂದುತ್ವ ಶಕ್ತಿಗಳ ಪರವಾಗಿ ಪಕ್ಷಪಾತ ನಡೆಸುತ್ತಿರುವುದು ಹೆಚ್ಚುತ್ತಿದೆ ಎಂದು ಅದು ಆಳವಾದ ಆತಂಕವನ್ನು ವ್ಯಕ್ತಪಡಿಸಿದೆ. ಮೇ 18, 2007ರಂದು ಹೈದರಾಬಾದಿನ ಮಕ್ಕಾ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದ ಒಂಭತ್ತು ಜನ ಕೊಲ್ಲಲ್ಪಟ್ಟರು, 58 ಮಂದಿ ಗಾಯಗೊಂಡರು. ನಂತರ ನಡೆದ ಪ್ರತಿಭಟನೆಗಳಲ್ಲಿ ಇನ್ನೂ ಐದು ಮಂದಿಯನ್ನು ಪೋಲೀಸರು ಗುಂಡಿಕ್ಕಿ ಸಾಯಿಸಿದರು. ಅವರೆಲ್ಲ ಮುಸ್ಲಿಮರು ಎಂದು ಮಹಾಧಿವೇಶನ ಅಂಗೀಕರಿಸಿದ ಒಂದು ನಿರ್ಣಯ ಹೇಳಿದೆ.

ತೆಲಂಗಾಣದ ಪ್ರತಿನಿಧಿ ಟಿ.ಜ್ಯೋತಿ ಇದನ್ನು ಮಂಡಿಸಿದರು ಮತ್ತು ಪೊಲಿಟ್‍ಬ್ಯುರೊ ಸದಸ್ಯ ಮಹಮ್ಮದ್ ಸಲೀಂ ಇದನ್ನು ಬೆಂಬಲಿಸಿದರು.

"ಸಾಕ್ಷ್ಯಗಳ ಅಭಾವ"ದ ಆಧಾರದಲ್ಲಿ ಖುಲಾಸೆಯಾಗಿದೆ ಎಂದು ತೀರ್ಪು ಹೇಳಿದೆ. ನಭ್‌ಕಿಶೋರ್ ಸರ್ಕಾರ್ ಯಾನೆ ಸ್ವಾಮಿ ಅಸೀಮಾನಂದ ಮತ್ತು ಇತರ ನಾಲ್ಕು ಮಂದಿ ಎಲ್ಲರೂ ಸಂಘ ಪರಿವಾರದೊಂದಿಗೆ ಸಂಬಂಧ ಇರುವವರು. ಅವರನ್ನು ಕೂಡಲೇ ಬಿಡುಗಡೆ ಮಾಡಲಾಗಿದೆ. ಅಸೀಮಾನಂದ ಸಮ್‍ಝೌತಾ ಎಕ್ಸ್‌ಪ್ರೆಸ್ ಮತ್ತು ಅಜ್ಮೇರ್ ದರ್ಗಾ ಬಾಂಬ್ ಸ್ಫೋಟ ಕೇಸುಗಳಲ್ಲಿಯೂ ಒಬ್ಬ ಆಪಾದಿತ. ಮಾಲೆಗಾಂವ್ ಸ್ಫೋಟದ ಆರೋಪಿಗಳನ್ನು ಖುಲಾಸೆಗೊಳಿಸಿದಾಗಲೂ ಇಂತಹುದೇ ಅನ್ಯಾಯ ನಡೆದಿದೆ.

ಆರೋಪಿಗಳೆಲ್ಲ ಖುಲಾಸೆಯಾಗುತ್ತಿದ್ದರೆ, ಈ ಭೀಕರ ಕೊಲೆಗಳನ್ನು ನಡೆಸಿರುವವರಾದರೂ ಯಾರು ಎಂದು 22ನೇ ಮಹಾಧಿವೇಶನ ಪ್ರಶ್ನಿಸಿದೆ.

ಭಯೋತ್ಪಾದನೆ ಮತ್ತು ಬಾಂಬ್ ಸ್ಫೋಟಗಳ ವಿವಿಧ ಮೊಕದ್ದಮೆಗಳಲ್ಲಿ ಸಂಘ ಪರಿವಾರಕ್ಕೆ ನಿಷ್ಠರಾಗಿರುವ ಆರೋಪಿಗಳು ಖುಲಾಸೆಗೊಳ್ಳುತ್ತಿರುವುದರಲ್ಲಿ ಒಂದು ನಿರ್ದಿಷ್ಟ ವಿಧಾನ ಇದೆ ಎಂದು ಸಿಪಿಐ(ಎಂ) ಮಹಾಧಿವೇಶನ ಗಮನಿಸಿದೆ. ಈ ತೀರ್ಪಿನೊಂದಿಗೆ ಈಗ ಎಲ್ಲ ಆರೋಪಿಗಳೂ "ಸಾಕ್ಷ್ಯಗಳ ಅಭಾವ" ದಿಂದ ಮತ್ತು ಸಾಕ್ಷಿಗಳು ತಿರುಗಿ ಬಿದ್ದುದರಿಂದ ಖುಲಾಸೆಗೊಂಡಿದ್ದಾರೆ. ಮಕ್ಕಾ ಮಸೀದಿ ಮೊಕದ್ದಮೆಯಲ್ಲಿ ಕನಿಷ್ಟ 64 ಸಾಕ್ಷಿಗಳು ತಿರುಗಿ ಬಿದ್ದು ತಮ್ಮ ಸಾಕ್ಷ್ಯವನ್ನು ಬದಲಿಸಿದರು. ಆರಿಸಿ–ಆರಿಸಿ ನ್ಯಾಯ ನೀಡುವುದು ಖಂಡನಾರ್ಹ ಮಾತ್ರವೇ ಅಲ್ಲ, ಅದು ಎಲ್ಲ ರೀತಿಯ ಭಯೋತ್ಪಾದಕ ಚಟುವಟಿಕೆಗಳ ವಿರುದ್ಧ ಹೋರಾಟಕ್ಕೆ ನಮ್ಮ ಬದ್ಧತೆಯನ್ನು ಅಪಹಾಸ್ಯಕ್ಕೆ ಈಡು ಮಾಡುತ್ತದೆ ಎಂದು ಸಿಪಿಐ(ಎಂ)ನ 22ನೇ ಮಹಾಧಿವೇಶನ ಅಂಗೀಕರಿಸಿದ ಈ ನಿರ್ಣಯ ಹೇಳಿದೆ.

ತನ್ನ ತೀರ್ಪನ್ನು ನೀಡಿದ ಕೂಡಲೇ ನ್ಯಾಯಾಧೀಶ ಕೆ. ರವೀಂದ್ರ ರೆಡ್ಡಿ ಯವರು ರಾಜೀನಾಮೆ ಪ್ರಕಟಿಸಿರುವುದು ಆಗಲೇ ಪ್ರಶ್ನಾರ್ಹವಾಗಿರುವ ತೀರ್ಪಿನ ವಿಷಯದಲ್ಲಿ ಹೊಸ ಪ್ರಶ್ನೆಗಳನ್ನು ಸೇರಿಸಿದೆ ಎಂದೂ ಮಹಾಧಿವೇಶನದ ನಿರ್ಣಯ ಅಭಿಪ್ರಾಯ ಪಟ್ಟಿದೆ.

ದೇಶದಲ್ಲಿ ಹೆಚ್ಚೆಚ್ಚು ಧ್ರುವೀಕರಣ ನಡೆಯುತ್ತಿರುವ ಸನ್ನಿವೇಶದಲ್ಲಿ ಈ ಹೀನ, ಭಯೋತ್ಪಾದಕ ಕೃತ್ಯಗಳನ್ನು ಎಸಗುವವರನ್ನು ಶಿಕ್ಷೆಗೆ ಗುರಿಪಡಿಸಬೇಕಾಗಿದೆ. ಸಂಘ ಪರಿವಾರ ಮತ್ತು ಅದರ ಸಿದ್ಧಾಂತಕ್ಕೆ ನಿಷ್ಠೆ ಘೋಷಿಸುವವರು ಶಿಕ್ಷೆಯಿಲ್ಲದೆ ತಪ್ಪಿಸಿಕೊಳ್ಳುತ್ತಾರೆ ಎಂಬ ಭಾವನೆ ಹಲವು ವಲಯಗಳಲ್ಲಿ ಬೆಳೆಯುತ್ತಿದೆ. ಇದನ್ನು ನಿವಾರಿಸಬೇಕಾಗಿದೆ ಎಂದಿರುವ ಸಿಪಿಐ(ಎಂ) 22ನೇ ಮಹಾಧಿವೇಶನ ಈ ತೀರ್ಪಿನ ವಿರುದ್ಧ ಎನ್‍ಐಎ ಒಂದು ಮನವಿ ಸಲ್ಲಿಸಬೇಕು ಮತ್ತು ಜನತೆ ನ್ಯಾಯದ ಅಪಹಾಸ್ಯದ ಇತ್ತೀಚಿನ ಈ ಘಟನೆಗೆ ಪ್ರತಿಭಟನೆ ವ್ಯಕ್ತಪಡಿಸಬೇಕು ಎಂದು ಮಹಾಧಿವೇಶನದ ನಿರ್ಣಯ ಮನವಿ ಮಾಡಿಕೊಂಡಿದೆ.

ಸುಪ್ರಿಂ ಕೋರ್ಟಿನಲ್ಲಿ ನ್ಯಾ||ಲೋಯ ಸಾವಿನ ಸ್ವತಂತ್ರ ತನಿಖೆಯ ಅರ್ಜಿಗಳ ವಜಾ ದುರದೃಷ್ಟಕರ

ಸೊಹ್ರಬುದ್ದಿನ್ ಹುಸಿ ಎನ್‍ಕೌಂಟರ್ ಕೇಸಿನ ವಿಚಾರಣೆ ನಡೆಸುತ್ತಿದ್ದ ಸಿಬಿಐ ನ್ಯಾಯಾಧೀಶ ನ್ಯಾ||ಲೋಯ ಸಾವಿನ ಸ್ವತಂತ್ರ ತನಿಖೆ ನಡೆಸಬೇಕೆಂದು ಸಲ್ಲಿಸಿದ್ದ ಎಲ್ಲ ಅರ್ಜಿಗಳನ್ನು ಸುಪ್ರಿಂ ಕೋರ್ಟ್ ಎಪ್ರಿಲ್ 19ರಂದು ತಿರಸ್ಕರಿಸಿದೆ. ಈ ಅರ್ಜಿಗಳು 'ಹಗರಣಕಾರ' ಎಂದು ಮೂವರು ನ್ಯಾಯಾಧೀಶರ ಪೀಠ ಹೇಳಿರುವುದು ದುರದೃಷ್ಟಕರ ಎಂದು ಹೈದರಾಬಾದಿನಲ್ಲಿ ಸೇರಿರುವ ಸಿಪಿಐ(ಎಂ)ನ 22ನೇ ಮಹಾಧಿವೇಶನ ಟಿಪ್ಪಣಿ ಮಾಡಿದೆ. ನ್ಯಾಯಮೂರ್ತಿ ಲೋಯರ ಸಾವಿನ ಸಂದರ್ಭಗಳು ಹಲವು ಪ್ರಶ್ನೆಗಳನ್ನು ಎತ್ತಿವೆ. ಈ ವಿಷಯವನ್ನು ಸುಪ್ರಿಂ ಕೋರ್ಟಿನ ಒಂದು ದೊಡ್ಡ ಪೀಠ ಮರುವಿಮರ್ಶೆ ಮಾಡಬೇಕು ಎಂದು ಮಹಾಧಿವೇಶನ ಅಭಿಪ್ರಾಯ ಪಟ್ಟಿದೆ.

ಕಠುವಾದಲ್ಲಿ ಆಘಾತಕಾರಿ ಹೀನ ಕೃತ್ಯದ ಕೋಮುವಾದೀಕರಣ ಉತ್ತರಪ್ರದೇಶದಲ್ಲಿ ಕ್ರಿಮಿನಲ್‍ಗಳಿಗೆ ರಕ್ಷಣೆ ನೀಡುವ ಆಡಳಿತ

ಸಿಪಿಐ(ಎಂ) ಪೊಲಿಟ್‍ಬ್ಯುರೊ ಖಂಡನೆ

ಜಮ್ಮುವಿನ ಕಠುವಾದಲ್ಲಿ ಎಂಟು ವರ್ಷದ ಬಾಲಕಿಯನ್ನು ಒಂದು ಗಂಡಸರ ಪಡೆ ಕೂಡಹಾಕಿ, ಪ್ರಜ್ಞೆ ತಪ್ಪಿಸಿ, ಅತ್ಯಾಚಾರ ನಡೆಸಿ ಕೊಂದು ಹಾಕಿರುವ ಭಯಾನಕ ಪ್ರಕರಣ ದೇಶದಲ್ಲಿ ಭಾರೀ ಆಕ್ರೋಶವನ್ನುಂಟು ಮಾಡಿದೆ. ಈ ಹೀನ ಕೃತ್ಯದ ಕೋಮುವಾದೀಕರಣ, ಬಂಧಿತರಾದ ಆರೋಪಿಗಳ ರಕ್ಷಣೆಯ ಪ್ರಯತ್ನ, ಇದರಲ್ಲಿ ಜಮ್ಮು ಮತ್ತು ಕಾಶ್ಮೀರ ಸರಕಾರದ ಬಿಜೆಪಿಯ ಇಬ್ಬರು ಮಂತ್ರಿಗಳಿರುವುದು ಅದಕ್ಕಿಂತಲೂ ಆಘಾತಕಾರಿ ಮತ್ತು ಆತಂಕವುಂಟು ಮಾಡುವ ಸಂಗತಿ ಎಂದು ಸಿಪಿಐ(ಎಂ) ಪೊಲಿಟ್‍ಬ್ಯುರೊ ಹೇಳಿದೆ. ಸ್ಥಳೀಯ ಬಾರ್ ಅಸೋಸಿಯೇಷನ್ ವಕೀಲರುಗಳು ನ್ಯಾಯಾಲಯದಲ್ಲಿ ಈ ಕೇಸನ್ನು ಸಲ್ಲಿಸದಂತೆ ತಡೆದಿರುವುದು ಇನ್ನೊಂದು ಆಕ್ರೋಶಕಾರಿ ಕೃತ್ಯ ಎಂದು ಅದು ಹೇಳಿದೆ.

ಆ ಇಬ್ಬರು ಮಂತ್ರಿಗಳು ಈಗ ರಾಜೀನಾಮೆ ಕೊಟ್ಟಿದ್ದಾರೆ. ಆದರೆ ಇದು ಸಾಲದು. ನ್ಯಾಯ ನೀಡಿಕೆಯಲ್ಲಿ ತಡೆ ಒಡ್ಡಿದ್ದಾರೆಂದು ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಬೇಕು. ಅದೇ ರೀತಿ, ಬಾರ್ ಅಸೋಸಿಯೇಷನ್‍ನ ಪದಾಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‍ಬ್ಯರೊ ಹೇಳಿದೆ.

ಉತ್ತರಪ್ರದೇಶದ ಆದಿತ್ಯನಾಥ ಸರಕಾರ ಒಬ್ಬ ಅಪ್ರಾಪ್ತ ವಯಸ್ಸಿನ ಹುಡುಗಿಯ ಮೇಲೆ ಅತ್ಯಾಚಾರದ ಆರೋಪವಿರುವ ಆಳುವ ಪಕ್ಷದ ಉನ್ನಾವ್ ಶಾಸಕ, ಕುಲದೀಪ್ ಸಿಂಗ್ ಸೆಂಗರ್ ವಿರುದ್ಧ ಕ್ರಮ ಕೈಗೊಳ್ಳಲು ನಿರಾಕರಿಸಿ ಕುಖ್ಯಾತಿಗೆ ಪಾತ್ರವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‍ಬ್ಯುರೊ ಹೇಳಿದೆ. ಅಲ್ಲದೆ ಈ ಹುಡುಗಿಯ ತಂದೆಯನ್ನು ಸುಳ್ಳು ಆರೋಪಗಳ ಮೇಲೆ ಬಂಧಿಸಿ ಪೋಲೀಸ್ ಕಸ್ಟಡಿಯಲ್ಲಿ ಆತನ ಸಾವು ಉಂಟಾಗಿರುವ ರೀತಿ ರಾಜ್ಯ ಆಢಳಿತವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದೆ. ಶಾಸಕನ ಸೋದರ ಮತ್ತು ಆತನ ಚೇಲಾಗಳ ಕೃತ್ಯದಿಂದಾಗಿ ಆತನ ತಲೆಗೆ ಗಂಭೀರ ಗಾಯಗಳಾಗಿದ್ದವು. ಅತ್ಯಾಚಾರದ ಆರೋಪಿ ಶಾಸಕನನ್ನು ಅಲಹಾಬಾದ್ ಹೈಕೋರ್ಟ್ ಆಡಳಿತ ಕಟು ಟೀಕೆ ಮಾಡಿ, ಆತನನ್ನು ಬಂಧಿಸಬೇಕು ಎಂದು ಆದೇಶ ನೀಡಿದ ಮೇಲೆಯೇ ವಶಕ್ಕೆ ತಗೊಳ್ಳಲಾಗಿದೆ ಎಂಬ ಸಂಗತಿಯತ್ತ ಪೊಲಿಟ್‍ಬ್ಯುರೊ ಗಮನ ಸೆಳೆದಿದೆ.

ಈ ಶಾಸಕನಿಗೆ ರಕ್ಷಣೆ ಕೊಡುತ್ತ ಬಂದ ಆದಿತ್ಯನಾಥ ಸರಕಾರಕ್ಕೆ ಈ ಮೊದಲು ಸಪ್ಟಂಬರ್ 2013ರ ಮುಝಫ್ಫರ್‌ನಗರ ಗಲಭೆಗಳಲ್ಲಿ ಕೊಲೆ ಮತ್ತು ಇತರ ಗಂಭೀರ ಅಪರಾಧಗಳ ಆರೋಪಗಳಿರುವ 131 ಕೇಸುಗಳನ್ನು ಹಿಂತೆಗೆದುಕೊಳ್ಳುವಲ್ಲಿಯೂ ಯಾವುದೇ ಅಳುಕು ಉಂಟಾಗಿರಲಿಲ್ಲ. ಈ ಮೂಲಕ ಬಿಜೆಪಿ ಸರಕಾರ ಯಾವುದೇ ಹಿಂಜರಿಕೆಯಿಲ್ಲದೆ ಅಪರಾಧ ಮಾಡಬಹುದು ಎಂಬ ಸಂಕೇತ ನೀಡಿದಂತಾಗಿದೆ ಎಂದು ಟೀಕಿಸಿರುವ ಪೊಲಿಟ್‍ಬ್ಯುರೊ ಉನ್ನಾವ್ ಅಪರಾಧ ಕ್ರಿಮಿನಲ್ ಅಪರಾಧಗಳನ್ನು ಮಾಡುವವರಿಗೆ ರಕ್ಷಣೆ ನೀಡುತ್ತಿರುವುದರ ಒಂದು ನೇರ ಪರಿಣಾಮ ಎಂದು ಹೇಳಿದೆ.

ವ್ಯಾಪಾರೀಕರಣ–ಖಾಸಗೀಕರಣಕ್ಕಾಗಿ ಬುಡಕಟ್ಟು ಹಕ್ಕುಗಳನ್ನು ನಿರ್ಮೂಲ ಮಾಡುವ ಕರಡು ರಾಷ್ಟ್ರೀಯ ಅರಣ್ಯ ಧೋರಣೆ, 2018ನ್ನು ಹಿಂತೆಗೆದುಕೊಳ್ಳಬೇಕು–ಸಿಪಿಐ(ಎಂ)

2018ರ ಕರಡು ರಾಷ್ಟ್ರೀಯ ಅರಣ್ಯ ಧೋರಣೆಯನ್ನು ಹಿಂತೆಗೆದುಕೊಳ್ಳಬೇಕು, ಏಕೆಂದರೆ ಅದರ ಮುಖ್ಯ ಒತ್ತು ಅರಣ್ಯಗಳ ಖಾಸಗೀಕರಣ ಮತ್ತು ವ್ಯಾಪಾರೀಕರಣ ಎಂದು ಈ ಕರಡಿಗೆ ಸಿಪಿಐ(ಎಂ) ತನ್ನ ಕಡುವಿರೋಧವನ್ನು ವ್ಯಕ್ತಪಡಿಸಿದೆ. ಈ ಕುರಿತ ಒಂದು ಟಿಪ್ಪಣಿಯನ್ನು ಪೊಲಿಟ್‍ಬ್ಯುರೊ ಸದಸ್ಯರಾದ ಬೃಂದಾ ಕಾರಟ್‍ರವರು ಅರಣ್ಯಗಳು, ಪರಿಸರ ಮತ್ತು ಹವಾಮಾನ ಬದಲಾವಣ 'ಮಂತ್ರಾಲಯಕ್ಕೆ ಸಲ್ಲಿಸಿದ್ದಾರೆ.

ಸಿಪಿಐ(ಎಂ) ಈ ಧೋರಣಾ ದಸ್ತಾವೇಜನ್ನು ಪರಿಹಾರಾತ್ಮಕ ಅರಣೀಕರಣ ನಿಧಿ ಕಾಯ್ದೆ(ಸಿಎಎಫ್‍ಎ) ಸ್ಥಾಪಿಸಿರುವ ಅನ್ಯಾಯಪೂರ್ಣ ಮತ್ತು ಕಾರ್ಪೊರೇಟ್–ಪರ ಪ್ರಕ್ರಿಯೆಯ ಒಂದು ಮುಂದುವರಿಕೆಯೆಂದೇ ಕಾಣುತ್ತದೆ. ಈ ಅತ್ಯಂತ ದೋಷಪೂರ್ಣ ಕಾಯ್ದೆ ಬುಡಕಟ್ಟು ಸಮುದಾಯಗಳು ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳು ಮತ್ತು ಗ್ರಾಮಸಭೆಗಳ ಅರಣ್ಯಗಳು ಮತ್ತು ಅವುಗಳ ಉತ್ಪನ್ನಗಳ ಲಭ್ಯತೆ ಮತ್ತು ನಿರ್ವಹಣೆಯ ಹಕ್ಕುಗಳನ್ನು ನಿರ್ಮೂಲನಗೊಳಿಸಿತು. ಕರಡು ಧೋರಣೆ ಈ ನಿಲುವನ್ನು ಇನ್ನೂ ಮುಂದಕ್ಕೆ ಒಯ್ದಿದೆ. ನಿಜಸಂಗತಿಯೆಂದರೆ, 'ಬುಡಕಟ್ಟು' ಎಂಬ ಪದ ಇಡೀ ದಸ್ತಾವೇಜಿನಲ್ಲಿ ಕೇವಲ ಒಂದು ಬಾರಿ ಕಾಣ ಸಿಗುತ್ತದೆ. ಇದು ಬುಡಕಟ್ಟು ಜನಗಳು ತಮ್ಮ ಸ್ವಂತ ಅರಣ್ಯ ಭೂಮಿಗಳ 'ಒತ್ತುವರಿದಾರರು' ಎಂಬ ಬ್ರಿಟಿಶ್ ವಸಾಹತುಶಾಹೀ ಮನೋಭಾವವನ್ನೇ ಬಿಂಬಿಸುತ್ತದೆ ಎಂದು ಸಿಪಿಐ(ಎಂ) ಟಿಪ್ಪಣಿ ಹೇಳಿದೆ.

ಈ ಕರಡು ಇಂಗಾಲದ ಜಪ್ತಿ ಮತ್ತು ಹವಾಮಾನ ಬದಲಾವಣೆಯ ಉಪಶಮನದಲ್ಲಿ ಅರಣ್ಯಗಳ ಪಾತ್ರವನ್ನು ಒತ್ತಿ ಹೇಳುತ್ತದಾದರೂ, ವಾಸ್ತವವಾಗಿ ಅರಣ್ಯಗಳು ಮತ್ತು ಮರಗಳ ಆವರಣ ಎರಡೂ ಒಂದೇ ಎಂಬಂತೆ ಪರಿಗಣಿಸಿ ನೈಸರ್ಗಿಕ ಅರಣ್ಯಗಳು ಮತ್ತು ಅವುಗಳ ಇತರ ಪರಿಸರ ಮತ್ತು ಸಾಮಾಜಿಕ ಸೇವೆಗಳ ಮಹತ್ವವನ್ನು ಶಿಥಿಲಗೊಳಿಸುತ್ತದೆ. ದಸ್ತಾವೇಜಿನಲ್ಲಿ ಈ ಎರಡು ಪದಗಳನ್ನು ಪರ್ಯಾಯವಾಚಕವಾಗಿ ಬಳಸಲಾಗಿದೆ. ನೈಸರ್ಗಿಕ ಅರಣ್ಯಗಳು ಇಂಗಾಲ ಗುಂಡಿಗಳಾಗಿ ಕೆಲಸ ಮಾಡುತ್ತವೆ ಮಾತ್ರವಲ್ಲ, ಇನ್ನೂ ವ್ಯಾಪಕವಾದ ಸೌಲಭ್ಯಗಳನ್ನು ಒದಗಿಸುತ್ತವೆ ಎಂಬುದನ್ನು ಇದು ನಿರ್ಲಕ್ಷಿಸುತ್ತದೆ. ಇದು ಮುಖ್ಯವಾಗಿ ಅರಣ್ಯೀಕರಣ ಕಾರ್ಯಕ್ರಮಗಳ ಭಾಗವಾಗಿ ಮರಗಳ ಆವರಣದ ಹೆಸರಿನಲ್ಲಿ ವಾಣಿಜ್ಯ ತೋಟಗಾರಿಕೆಗೆ ಉತ್ತೇಜನ ನೀಡಲಿಕ್ಕಾಗಿಯೇ. ಅರಣ್ಯೀಕರಣ ಮಾಡಬೇಕಾಗಿ ಬಂದಿರುವುದೇ ಅಭಿವದ್ಧಿಯ ಹೆಸರಿನಲ್ಲಿ ವಾಣಿಜ್ಯ ಪ್ರಾಜೆಕ್ಟುಗಳಿಗೆ ನೈಸರ್ಗಿಕ ಅರಣ್ಯಗಳನ್ನು ನಾಶಪಡಿಸಿದರಿಂದಾಗಿ. ಈಗ ಮೆಗಾ ಪ್ರಾಜೆಕ್ಟ್‌ಗಳಿಗೆ ಅರಣ್ಯ ಭೂಮಿಯನ್ನು ತಿರುಗಿಸುವುದನ್ನು ತೀವ್ರಗೊಳಿಸಿರುವುದ್ನು ಪ್ರಶ್ನಿಸುವ ಪ್ರಯತ್ನವನ್ನೂ ಈ ದಸ್ತಾವೇಜು ಮಾಡುವುದಿಲ್ಲ ಎಂದಿರುವ ಸಿಪಿಐ(ಎಂ) ಟಿಪ್ಪಣಿ ತನ್ನ ಆಕ್ಷೇಪಗಳಲ್ಲಿ ಈ ಕೆಲವನ್ನು ವಿಶದಪಡಿಸಿದೆ. ಅವುಗಳ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ:

1. **ಇದು ಅರಣ್ಯಗಳ ವ್ಯಾಪಾರೀಕರಣ ಮತ್ತು ಖಾಸಗೀಕರಣದ ನೀಲನಕ್ಷೆ.** ಇದು 1988ರ ಅರಣ್ಯ ಧೋರಣೆಯ ದಸ್ತಾವೇಜಿಗೆ ತದ್ವಿರುದ್ಧವಾಗಿದೆ. ನೈಸರ್ಗಿಕ ಅರಣ್ಯಗಳನ್ನು ಉತ್ಪಾದನಾ ಅಥವ ಪ್ಲಾಂಟೇಶನ್ ಅರಣ್ಯಗಳಾಗಿ ಮಾಡುವುದು ಇದರ ಆಶಯ. 'ವುಡ್ ಈಸ್ ಗುಡ್' ಎಂಬ ಘೋಷಣೆಯಡಿಯಲ್ಲಿ ಇದನ್ನು ಮಾಡಲಾಗುತ್ತಿದೆ. ಈ ಪ್ರಕ್ರಿಯೆಯಲ್ಲಿ ಜಲಪೂರಣ, ಮಣ್ಣಿನ ಸವೆತ ತಡೆಯುವುದು, ಅರಣ್ಯವಾಸಿ ಸಮುದಾಯಗಳಿಗೆ ಸೌದೆ, ಜಾನುವಾರುಗಳಿಗೆ ಮೇವು ಮತ್ತಿತರ ಉತ್ಪನ್ನಗಳನ್ನು ಒದಗಿಸುವ ಅದರ ಪಾತ್ರವನ್ನು ಗೌಣಗೊಳಿಸಲಾಗಿದೆ.
2. **ಅರಣ್ಯೀಕರಣದ ಹೆಸರಿನಲ್ಲಿ ವಾಣಿಜ್ಯ ತೋಟಗಾರಿಕೆ:** ಈ ಕರಡಿನ ವಿಭಾಗ 3 ರಲ್ಲಿ ಹೇಳಿರುವ ಮರಮುಟ್ಟು ಬಳಕೆಗೆ ಉತ್ತೇಜನೆ, ತೇಗ, ನೀಲಗಿರಿ, ಸಾಲ್ ಮುಂತಾದವುಗಳನ್ನು ನಡೆಬೇಕು ಎನ್ನುತ್ತಲೇ 'ಅರಣ್ಯೀಕರಣವನ್ನು ನಡೆಸಲು ಖಾಸಗಿ ಭಾಗವಹಿಸುವಿಕೆಯ ಮಾದರಿಗಳನ್ನು ಬೆಳೆಸುವುದು, ಅರಣ್ಯ–ಆಧಾರಿತ ಉದ್ದಿಮೆಯ ಬೆಳವಣಿಗೆಗೆ ಉತ್ತೇಜನೆ ಮುಂತಾದವುಗಳು ನೈಸರ್ಗಿಕ ಸಂಪನ್ಮೂಲಗಳನ್ನು ತಮ್ಮ ಲಾಭಗಳನ್ನು ಹೆಚ್ಚಿಸಿಕೊಳ್ಳಲು ಬಳಸುವ ಕಾರ್ಪೊರೇಟ್ ನಿರೀಕ್ಷೆಗಳನ್ನು ಈಡೇರಿಸುವುದು ಇದರ ಉದ್ದೇಶ ಎನ್ನುವುದನ್ನು ತೋರಿಸುತ್ತವೆ. 1988ರ ದಸ್ತಾವೇಜು ವಿದೇಶಿ ಮರ–ಗಿಡಗಳನ್ನು ವ್ಯಾಪಕ ವೈಜ್ಞಾನಿಕ ಪರೀಕ್ಷಣೆಯಿಲ್ಲದೆ ನಡೆಸಬಾರದು ಎಂಬ ಎಚ್ಚರಿಕೆಯನ್ನು ಅವು ಸ್ಥಳೀಯ ಮರ–ಗಿಡಗಳ ನಾಶಕ್ಕೆ ಕಾರಣವಾಗಬಹುದು ಎಂಬ ಕಾರಣಕ್ಕೆ ನೀಡಿತ್ತು. ಆದರೆ ಈ ದಸ್ತಾವೇಜಿನಲ್ಲಿ

ಪುಟ 7 ಕ್ಕೆ

2018ರ ಚುನಾವಣೆಗಳಲ್ಲಿ ಯಾರು ಹಿತವರು ಕರ್ನಾಟಕದ ಮತದಾರರಿಗೆ ?

ಸೌಹಾರ್ದ ಕರ್ನಾಟಕಕ್ಕೆ ಮಾರಕವಾದ ಬಿಜೆಪಿ! ನುಡಿದಂತೆ ನಡೆಯದ ಕಾಂಗ್ರೆಸ್! ಅಥವ ವಿಶ್ವಾಸಾರ್ಹ ಪರ್ಯಾಯವಲ್ಲದ ಜೆಡಿ(ಎಸ್)!

ಜಿ.ವಿ.ಶ್ರೀರಾಮರೆಡ್ಡಿ

ಕರ್ನಾಟಕ ವಿಧಾನಸಭೆ ಚುನಾವಣೆ ಮೇ 12ರಂದು ನಡೆಯಲಿದ್ದು, ಒಂದೇ ಹಂತದಲ್ಲಿ ಚುನಾವಣೆ ನಡೆಯಲಿವೆ. ಈ ಬಾರಿಯ ಕರ್ನಾಟಕ ವಿಧಾನಸಭೆ ಚುನಾವಣೆ ರಾಜ್ಯಕ್ಕೆ ಮಾತ್ರವಲ್ಲ, ರಾಷ್ಟ್ರೀಯ ಮಹತ್ವವನ್ನು ಪಡೆದಿದೆ. ಅದರಲ್ಲೂ ತ್ರಿಪುರಾದಲ್ಲಿ ಬಿಜೆಪಿ ಗೆಲುವು, ಆ ಮೇಲೆ ಉತ್ತರ ಪ್ರದೇಶ ಮತ್ತು ಬಿಹಾರ ಉಪಚುನಾವಣೆಗಳಲ್ಲಿ ತೀವ್ರ ಹಿನ್ನಡೆಯ, ಬಿಜೆಪಿಯ 'ಕಾಂಗ್ರೆಸ್-ಮುಕ್ತ' (ನಿಜವಾಗಿಯೂ ಯಾವುದೇ ವಿರೋಧ ಪಕ್ಷಗಳಿಂದ ಮುಕ್ತವಾದ) ಭಾರತದ ಘೋಷಣೆಯ, ಮೋದಿ ಮ್ಯಾಜಿಕ್ ಕರಗುತ್ತಿರುವ, ಮುಂಬರುವ ಉತ್ತರ ಭಾರತದ ರಾಜ್ಯಗಳ ಮತ್ತು ಪಾರ್ಲಿಮೆಂಟ್ ಚುನಾವಣೆ ಹಿನ್ನೆಲೆಯಲ್ಲಿ ಈ ರಾಷ್ಟ್ರೀಯ ಮಹತ್ವ ಬಂದಿದೆ.

ಸಿ.ಪಿ.ಐ.(ಎಂ) ದುಡಿಯುವ ಜನವರ್ಗಗಳ ಪಕ್ಷಪಾತಿಯಾಗಿದೆ. ದುಡಿಯುವ ಜನರ ಹಿತವೇ ಅದರ ಆದ್ಯತೆಯಾಗಿದೆ. ಜನಪರ ಹೋರಾಟಗಳೇ ಅದರ ಉಸಿರಾಗಿದೆ. ಆರ್ಥಿಕ ಶೋಷಣೆ ಮತ್ತು ಸಾಮಾಜಿಕ ದಮನದ ವಿರುದ್ಧ ನಡೆಸಲಾಗುತ್ತಿರುವ ನಿರಂತರ ಆಂದೋಲನ ಅದಾಗಿದೆ. ಚುನಾವಣೆಗಳನ್ನು ಸಹ ಶೋಷಕ ಮತ್ತು ಶೋಷಿತರ ನಡುವಿನ ಸಂಘರ್ಷದ ಭಾಗವೆಂದೇ ಪರಿಗಣಿಸುವ ಜನಾಂದೋಲನವನ್ನು ಬಲಪಡಿಸುವ ಉದ್ದೇಶದಿಂದ ಮಾತ್ರ ಚುನಾವಣೆಗಳಲ್ಲಿ ಪಾಲ್ಗೊಳ್ಳುತ್ತದೆ.

ರಾಜ್ಯದ ರಾಜಕಾರಣದಲ್ಲಿ ಜನಪರ, ಪ್ರಗತಿಪರ ಬದಲಾವಣೆಯನ್ನು ಬಯಸುವವರಿಗೆ ಪ್ರಸಕ್ತ ಚುನಾವಣೆ ಮತ್ತೊಂದು ಅವಕಾಶವನ್ನು ಒದಗಿಸಿದೆ ಎಂದು ಸಿ.ಪಿ.ಐ.(ಎಂ) ಭಾವಿಸುತ್ತದೆ. ರಾಜ್ಯದ ದುಡಿಯುವ ಜನವಿಭಾಗಗಳ ಅಂದರೆ ರೈತರ, ಕೃಷಿಕೂಲಿಕಾರರ, ಕಾರ್ಮಿಕರ, ಮಧ್ಯಮ ವರ್ಗದ ನೌಕರರ ಮತ್ತು ಇತರ ಶ್ರಮಜೀವಿಗಳ ಹಿತದೃಷ್ಟಿಯಿಂದ ಈ ಅವಕಾಶದ ಸದ್ಬಳಕೆ ಮಾಡಿಕೊಳ್ಳಬೇಕಾಗಿದೆ.

ಸೌಹಾರ್ದ ಕರ್ನಾಟಕದ ಉಳಿವಿಗೆ ಬಿಜೆಪಿಯನ್ನು ಸೋಲಿಸಬೇಕು

ಕೇಂದ್ರದಲ್ಲಿ ಮೋದಿ ನಾಯಕತ್ವದ ಬಿಜೆಪಿ ಸರಕಾರ ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಬಲಪಂಥೀಯ ಸಂವಿಧಾನದ ಮೂಲ ಆಶಯಗಳನ್ನು ಮತ್ತು ಪ್ರಜಾಪ್ರಭುತ್ವವನ್ನು ನಾಶ ಮಾಡುವ ಒಂದು ಸರ್ವಾಧಿಕಾರಶಾಹಿ-ಕೋಮುವಾದಿ ಆಳ್ವಿಕೆಯತ್ತ ಹೊರಳಿರುವ ಗಂಭೀರ ಸ್ಥಿತಿಯಲ್ಲಿ ಈ ಚುನಾವಣೆಗಳು ನಡೆಯುತ್ತಿವೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಎಂದಿನಂತೆ ಜನ-ವಿರೋಧಿ ನವ-ಉದಾರವಾದಿ ಚೌಕಟ್ಟಿನೊಳಗಿನ ಆರ್ಥಿಕ ನೀತಿಗಳನ್ನು ಅನುಸರಿಸುತ್ತಾ ಜನರ ನಿರೀಕ್ಷೆಗಳನ್ನು ಆಶೋತ್ತರಗಳನ್ನು ಈಡೇರಿಸುವುದರಲ್ಲಿ ವಿಫಲವಾಗಿದೆ. ಆದ್ದರಿಂದ ಬಿಜೆಪಿ ಮುಂದಿನ ರಾಜ್ಯ ಸರಕಾರ ತನ್ನದೇ ಎಂದು ಆಕ್ರಾಮಕವಾಗಿ ಬಿಂಬಿಸುತ್ತಿದೆ. ಸಾಮಾನ್ಯವಾಗಿ ರಾಜ್ಯದ ಚುನಾವಣೆಗಳಲ್ಲಿ ಹಾಲಿ ರಾಜ್ಯ ಸರಕಾರದ, ಸ್ಪರ್ಧಿಸುತ್ತಿರುವ ವಿರೋಧ ಪಕ್ಷಗಳ ಹಿಂದಿನ ಸರಕಾರಗಳ ಸಾಧನೆ-ವೈಫಲ್ಯಗಳೇ ಮುಖ್ಯ ಮಾನದಂಡವಾಗಬೇಕು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಕೇಂದ್ರದ ಬಿಜೆಪಿ ಸರಕಾರದ ಗಂಭೀರ ವೈಫಲ್ಯಗಳನ್ನು ಆ ಪಕ್ಷ ರಾಜ್ಯದಲ್ಲೂ ಅಧಿಕಾರ ಹಿಡಿದರೆ ಮುಂಬರುವ ಭೀಕರ ಅಪಾಯಗಳನ್ನು ಮತದಾರ ಪರಿಗಣಿಸಲೇಬೇಕಾದ ಪರಿಸ್ಥಿತಿ ಇದೆ.

ಕಥುವಾ ಮತ್ತು ಉನ್ನಾವಿನ ಅಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳ ಮೇಲಿನ ಬರ್ಬರ ಅತ್ಯಾಚಾರದ ಭೀಕರ ಪ್ರಕರಣಗಳಲ್ಲಿ ಬಿಜೆಪಿ ಶಾಸಕ-ಮಂತ್ರಿಗಳ ಪಾತ್ರ ಮತ್ತು ಅಪರಾಧಿಗಳ ರಕ್ಷಣೆಗೆ ಬಿಜೆಪಿ ಸರಕಾರಗಳ ಪ್ರಯತ್ನ ಮಹಿಳೆಯರ ಬಗ್ಗೆ ಅದರ ಧೋರಣೆಯ ಬೆಚ್ಚಿಬೀಳಿಸುವ ರೂಪಕ. ಇನ್ನೊಂದೆಡೆಯಲ್ಲಿ ನೋಟುರದ್ದತಿಯ ಕರಾಳ ದಿನಗಳ ನಮತರ ಮತ್ತೊಮ್ಮೆ ನಗದಿನ ಅಭಾವ ಜನಸಾಮಾನ್ಯರನ್ನು ಕಂಗೆಡಿಸುತ್ತಿರುವುದು ಬಿಜೆಪಿಯ ಜನ-ವಿರೋಧಿ ಸ್ವರೂಪದ ಇತ್ತೀಚಿನ ಒಂದು ಉದಾಹರಣೆ.

ಕರ್ನಾಟಕದಲ್ಲಿ ಬಿಜೆಪಿ –ಭ್ರಷ್ಟಾಚಾರಿ ಆಳ್ವಿಕೆ ಹೊಣೆಗೇಡಿ 'ಪ್ರತಿಪಕ್ಷ'

ಪ್ರೊ. ಎಂ.ಎಂ. ಕಲ್ಬುರ್ಗಿ ಮತ್ತು ಗೌರಿ ಲಂಕೇಶ್ ಕೊಲೆಗಳನ್ನು ಕಂಡಿರುವ ಕರ್ನಾಟಕದಲ್ಲಿ ಬಿಜೆಪಿಯ ಹಿಂದಿನ ಅಧಿಕಾರಾವಧಿಯಾಗಲಿ, ಕಳೆದ 5 ವರ್ಷಗಳಲ್ಲಿ ವಿರೋಧ ಪಕ್ಷವಾಗಿ ಅದರ ರೆಕಾರ್ಡು ಕೂಡ ತೀವ್ರ ವೈಫಲ್ಯಗಳ ಸರಣಿಯೇ. 2008ರ ಚುನಾವಣೆಯಲ್ಲಿ ಬಹುಮತ ಸಿಗದೆ ಬಳ್ಳಾರಿ ಗಣಿಧಣಿಗಳ ದುಡ್ಡಿನ ಅನೈತಿಕ "ಆಪರೇಷನ್ ಕಮಲ"ದಿಂದ ಅಧಿಕಾರಕ್ಕೆ ಬಂದು, ಅದರ ಬಲದಿಂದಲೇ ಅಧಿಕಾರಕ್ಕೆ ಅಂಟಿಕೊಂಡಿದ್ದ, ಕರ್ನಾಟಕದ ಚರಿತ್ರೆಯಲ್ಲೇ ನಂಬರ್ 1 ಭ್ರಷ್ಟಾಚಾರಿ ಸರ್ಕಾರವಾಗಿತ್ತು. ಅಧಿಕಾರಕ್ಕಾಗಿ ಸತತ ಕಚ್ಚಾಟ, ಮುಖ್ಯಮಂತ್ರಿ ಸೇರಿ 7 ಮಂತ್ರಿಗಳು ಭ್ರಷ್ಟಾಚಾರದ ಪ್ರಕರಣಗಳಲ್ಲಿ ಜೈಲಿಗೆ ಹೋಗಿದ್ದು, 3 ಮುಖ್ಯಮಂತ್ರಿಗಳು ಬದಲಾಗಿ ಸತತ ಅಬಧ್ರತೆ ಕಾಡಿದ, ಮುಸ್ಲಿಮರು-ಕ್ರಿಶ್ಚಿಯನ್ನರ ಮೇಲೆ ಹಿಂಸಾತ್ಮಕ ದಾಳಿಗಳು, ರೈತ-ಕಾರ್ಮಿಕರಿಗೆ ದ್ರೋಹ, ಮಹಿಳೆ-ದಲಿತರ ಮೇಲೆ ದೌರ್ಜನ್ಯಗಳ ಹೆಚ್ಚಳ, ಅಭಿವೃದ್ಧಿಗೆ ತಿಲಾಂಜಲಿ- ಇವುಗಳಿಂದ ಗುರುತಿಸಲ್ಪಟ್ಟ ಕರ್ನಾಟಕದ ಚರಿತ್ರೆಯಲ್ಲೇ ಕರಾಳ ಅಧ್ಯಾಯವಾಗಿದ್ದ ಸರಕಾರವಾಗಿತ್ತು.

ತನ್ನ ಕುಕೃತ್ಯಗಳಿಂದ ಅಧಿಕಾರ ಕಳೆದುಕೊಂಡು ವಿರೋಧ ಪಕ್ಷವಾದ ಬಿಜೆಪಿ, ಕಳೆದ 5 ವರ್ಷಗಳಲ್ಲಿ ಆ ಜವಾಬ್ದಾರಿಯನ್ನು ಸಹ ನಿರ್ವಹಿಸಲಿಲ್ಲ. ರೈತ ಕಾರ್ಮಿಕರ ಸಮಸ್ಯೆಗಳು, ಮಹದಾಯಿ-ಕಾವೇರಿ ಸಮಸ್ಯೆ ಪರಿಹಾರಕ್ಕೆ ಕೇಂದ್ರದ ಮಧ್ಯಪ್ರವೇಶ, ರಾಜ್ಯದ ಯೋಜನೆ ಅನುದಾನಗಳಲ್ಲಿ ಕಡಿತ, ಅಭಿವೃದ್ಧಿಯ ವಿಷಯುಗಳು – ಇವು ಯಾವುದರ ಬಗ್ಗೆ ಬಿಜೆಪಿ ತಲೆಕೆಡಿಸಿಕೊಳ್ಳಲಿಲ್ಲ. ಕೋಮು-ಧ್ರುವೀಕರಣ, "ಹಿಂದೂ ಕಾರ್ಯಕರ್ತರ ಮೇಲೆ ದಾಳಿ-ಕೊಲೆ" ಮತ್ತಿತರ ಹುಸಿ ಕಾನೂನು-ಸುವ್ಯವಸ್ಥೆ ಸಮಸ್ಯೆ ಸೃಷ್ಟಿಸಿ ಅದರ ಬಗ್ಗೆ ಹುಯಿಲಿಡುವ "ಡೆಡ್ ಬಾಡಿ ಪೊಲಿಟಿಕ್ಸ್", ಕರ್ನಾಟಕದ "ಯೋಗಿ" ಅಗುವ ಕನಸು ಕಾಣುತ್ತಿರುವ ಕೇಂದ್ರ ಮಂತ್ರಿಯೊಬ್ಬರು ಸಂವಿಧಾನ ಬದಲಾಯಿಸುವ ಮುಂತಾದ ಉದ್ರೇಕಕಾರಿ ಹೇಳಿಕೆಗಳು-ಇವುಗಳಲ್ಲೇ ಮಗ್ನವಾದ ಬಿಜೆಪಿ ವಿರೋಧ ಪಕ್ಷದ ಪ್ರಾಮಾಣಿಕ ಪಾತ್ರವನ್ನೂ ವಹಿಸಲಿಲ್ಲ.

ಜನ-ವಿರೋಧಿ ನವ-ಉದಾರವಾದಿ ನೀತಿಗಳನ್ನು ಅತ್ಯಂತ ಆಕ್ರಾಮಕ ರೀತಿಯಲ್ಲಿ ಜಾರಿ ಮಾಡುತ್ತಾ, ಜನರ ಮೇಲೆ ಸರ್ವತೋಮುಖ ಪ್ರಹಾರಗಳನ್ನು ಮಾಡುತ್ತಾ, ಪ್ರಜಾಪ್ರಭುತ್ವ ವ್ಯವಸ್ಥೆಯ ಎಲ್ಲಾ ಸಂಸ್ಥೆಗಳ ಮೇಲೆ ದಾಳಿ ಮಾಡುತ್ತಾ, ಸಂವಿಧಾನದ ಆಶಯಗಳನ್ನು ಗಾಳಿಗೆ ತೂರಿ ಖಾಸಗಿ ಸೈನ್ಯಗಳ ಹಿಂಸಾಚಾರದಿಂದ ಆಳುತ್ತಾ, ಹಿಂದೂ ರಾಷ್ಟ್ರ ಸ್ಥಾಪನೆಯತ್ತ ಭರದಿಂದ ಸಾಗುತ್ತಿರುವ, ರಾಜ್ಯದಲ್ಲೂ ಅತ್ಯಂತ ಬೇಜವಾಬ್ದಾರಿ ರಾಜಕಾರಣ ನಡೆಸುತ್ತಿರುವ ಬಿಜೆಪಿಯನ್ನು, ರಾಜ್ಯದಲ್ಲಿ ಸೋಲಿಸಿ ಅದರ ಮುನ್ನಡೆಯನ್ನು ತಡೆಯುವುದು ದುರ್ಬಲಗೊಳಿಸುವುದು ಆದ್ಯತೆಯ ಕೆಲಸ ಎಂಬುದರ ಬಗ್ಗೆ ಅನುಮಾನವಿಲ್ಲ.

ಆದ್ದರಿಂದ, **ಪ್ರಜಾಪ್ರಭುತ್ವದ ಉಳಿವಿಗಾಗಿ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯಲು, ಸೌಹಾರ್ದ ಕರ್ನಾಟಕ ಉಳಿಸಲು, ಜನ-ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಬಿಜೆಪಿ ಅಭ್ಯರ್ಥಿಗಳನ್ನು ಸೋಲಿಸಬೇಕೇಂದು ಸಿಪಿಐ(ಎಂ) ಕರ್ನಾಟಕದ ಮತದಾರರಿಗೆ ಕರೆ ನೀಡುತ್ತದೆ.**

ನುಡಿದಂತೆ ನಡೆಯದ ಕಾಂಗ್ರೆಸ್ ಸರಕಾರ

ಬಿಜೆಪಿ ಸರಕಾರದ ದುರಾಡಳಿತ, ಭ್ರಷ್ಟಾಚಾರ, ಕೋಮುವಾದೀಕರಣದಿಂದ ಬೇಸತ್ತ ಕರ್ನಾಟಕದ ಜನತೆ ಸಿಧ್ಧರಾಮಯ್ಯ ನೇತೃತ್ವದ ಕಾಂಗ್ರೆಸನ್ನು ಆರಿಸಿತು. ಮುಖ್ಯ ಮಂತ್ರಿಯಾಗಿ ಅವರು ಪ್ರಮಾಣ ವಚನ ಸ್ವೀಕರಿಸಿದ ದಿನವೇ ರಾಜ್ಯದ ಬಿಪಿಎಲ್ ಕುಟುಂಬಗಳಿಗೆ ತಿಂಗಳಿಗೆ 30 ಕೆಜಿ ಅಕ್ಕಿಯನ್ನು ಕೆಜಿಗೆ 1 ರೂ. ದರದಲ್ಲಿ ಕೊಡುವುದಾಗಿ ನೀಡಿದ ಘೋಷಣೆ ಜಾರಿಗೆ ಬಂದಾಗ ರಾಜ್ಯದ ಬಡಜನರಲ್ಲಿ ಹೊಸ ನಿರೀಕ್ಷೆಗಳನ್ನು ಮೂಡಿಸಿದ್ದು ಸುಳ್ಳಲ್ಲ. ಆದರೆ, ಇದೇ ಸಿದ್ದರಾಮಯ್ಯನವರು ತಿಂಗಳಿಗೆ 30 ಕೆ.ಜಿ. ಅಕ್ಕಿಯನ್ನು ವಿತರಿಸುವ ಕಾರ್ಯಕ್ರಮವನ್ನು ಕೈಬಿಟ್ಟು ವ್ಯಕ್ತಿಗೆ 5 ಕೆ.ಜಿ. ಅಕ್ಕಿ/ಗೋದಿಯನ್ನು ಉಚಿತವಾಗಿ ಕೊಡುವ ಕಾರ್ಯಕ್ರಮವನ್ನು ಜಾರಿಗೆ ತಂದಾಗ ರಾಜ್ಯದ ಜನತೆಗೆ ನುಡಿದಂತೆ ನಡೆಯುವ ಸರಕಾರದ ಮೊದಲ ಅನುಭವವಾಯಿತು. ಅದು ಈ ವರ್ಷಗಳ ಕಾಲವೂ ಮುಂದುವರೆದಿದೆ.

ಬರ ನಿರ್ವಹಣೆಯ ಎಲ್ಲಾ ಕೆಲಸಗಳಲ್ಲಿ, ಹೊಸ ಕೈಗಾರಿಕೆಯ ಸ್ಥಾಪನೆ ಮತ್ತು ಉದ್ಯೋಗ ಸೃಷ್ಟಿಯಲ್ಲಿ ಕಾಂಗ್ರೆಸ್ ವಿಫಲಗೊಂಡಿದೆ. ನೇಮಕಾತಿಯ ಮೇಲೆ ನಿರ್ಬಂಧ, ಸ್ಕೀಮ್‌ಗಳಲ್ಲಿ ದುಡಿಸಿಕೊಳ್ಳುತ್ತಿರುವವರಿಗೆ ಕಾರ್ಮಿಕ ಕಾನೂನುಗಳ ರಕ್ಷಣೆ ಕೊಡಲು ನಿರಾಕರಣೆ, ರೂ. 18 ಸಾವಿರ ಕನಿಷ್ಟ ಕೂಲಿ ಜಾರಿ ಮಾಡದಿರುವುದು – ಕಾಂಗ್ರೆಸ್ ಸರ್ಕಾರದ ಕಾರ್ಮಿಕ ವಿರೋಧಿ ನೀತಿ ಬದಲಾಗಿಲ್ಲ ಎಂಬುದಕ್ಕೆ ಉದಾಹರಣೆಗಳು. ಸರಕಾರವನ್ನೇ ನಿಯಂತ್ರಿಸುವಷ್ಟು ಪ್ರಬಲವಾಗಿರುವ ಖಾಸಗಿ ಲಾಬಿಯಿಂದಾಗಿ ಶಿಕ್ಷಣ ಮತ್ತು ಆರೋಗ್ಯ ಬಡವರ ನಿಲುಕಿನಿಂದ ಹೊರಗೆ ಹೋಗುತ್ತಿದೆ.

ರಾಜ್ಯದಲ್ಲಿ ಹಿಂದುತ್ವ ಶಕ್ತಿಗಳ ಆಕ್ರಮಣಕಾರಿ ಆರ್ಭಟಕ್ಕೆ ನಿಯಂತ್ರಣ ಹಾಕುವಲ್ಲಿ, ದೃಢವಾದ ಕ್ರಮಗಳನ್ನು ಕೈಗೊಳ್ಳುವಲ್ಲಿ , ಬಿಜೆಪಿ-ಸಂಘಪರಿವಾರದ ಕೋಮುವಾದಿ ಸವಾಲನ್ನು ರಾಜಕೀಯವಾಗಿಯೂ ಆಡಳಿತಾತ್ಮಕವಾಗಿಯೂ ಎದುರಿಸುವುದರಲ್ಲಿ ಕೂಡ ಕಾಂಗ್ರೆಸ್ ಸರಕಾರ ಪೂರ್ಣವಾಗಿ ಸೋತಿದೆ.

ಗಣಿಧಣಿಗಳ ವಿರುದ್ಧ ಹೋರಾಟದಲ್ಲಿ ಅಧಿಕಾರಕ್ಕೆ ಬಂದ ಸಿದ್ಧರಾಮಯ್ಯ ಸರಕಾರ ಕಾಲಹರಣ ಮಾಡಿ ಸಂತೋಷ ಹೆಗಡೆ ವರದಿಯ ಜಾರಿಯಿಂದ ಜಾರಿಕೊಂಡಿರುವ ಕಾಂಗ್ರೆಸಿನ 'ಭ್ರಷ್ಟಾಚಾರ-ವಿರೋಧಿ" ಪೋಸು ಕೂಡ ಬಯಲಾಗಿದೆ. ರಾಜಕೀಯ ದೃಢತನ ತೋರದ ಕಾಂಗ್ರೆಸಿನ ಆಡಳಿತಾತ್ಮಕ ವೈಫಲ್ಯಗಳೂ ರಾಜಕೀಯ ಅವಕಾಶವಾದಿತನದ ಪಾಲೂ ಇದೆ.

ಕಾಂಗ್ರೆಸ್ ಸಹ ದೊಡ್ಡ ಬಂಡವಾಳಶಾಹಿ-ಭೂಮಾಲಕ ವರ್ಗಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತದೆ. ಕಳೆದ 25ಕ್ಕೂ ಹೆಚ್ಚು ವರ್ಷಗಳಿಂದ ಜನತೆಯನ್ನು ತೀವ್ರವಾಗಿ ಬಾಧಿಸುತ್ತಿರುವ ಜನ-ವಿರೋಧಿ ನವ ಉದಾರವಾದಿ ಕಾರ್ಯಸೂಚಿಯ ಪ್ರವರ್ತಕ ಕಾಂಗ್ರೆಸ್. ನೋಟು ನಿಷೇಧ ಬಿಟ್ಟರೆ ಬಿಜೆಪಿ ಕೇಂದ್ರ ಸರಕಾರ ಅನುಸರಿಸುತ್ತಿರುವ ಹೆಚ್ಚು ಕಡಿಮೆ ಎಲ್ಲಾ ನೀತಿಗಳನ್ನು ಆರಂಭಿಸಿದ್ದು ಕಾಂಗ್ರೆಸ್ ಸರಕಾರಗಳೇ. ಬಿಜೆಪಿ ಅದನ್ನು ಹೆಚ್ಚು ಆಕ್ರಾಮಕವಾಗಿ ಕ್ರೂರವಾಗಿ ಜಾರಿ ಮಾಡುತ್ತಿದೆ. ಈಗಲೂ ಕಾಂಗ್ರೆಸ್ ಈ ನೀತಿಗಳನ್ನು ಪ್ರತಿಪಾದಿಸುವುದನ್ನು ಮುಂದುವರೆಸಿದೆ. **ಬಿಜೆಪಿಯಂತಹ ಒಂದು ಪಕ್ಷ ಬೆಳೆದು ಅಧಿಕಾರಕ್ಕೆ ಬಂದಿದ್ದು ಕಾಂಗ್ರೆಸ್ ನೀತಿಗಳು ದೇಶದಲ್ಲಿ ನಿರ್ಮಿಸಿದ ಪರಿಸ್ಥಿತಿಯಿಂದ. ಆದ್ದರಿಂದ ಕಾಂಗ್ರೆಸ್ ಈ ನೀತಿಗಳನ್ನು ಬದಲಾಯಿಸದೆ ಜನ-ಪರ ಪರ್ಯಾಯವಾಗುವುದು ಸಾಧ್ಯವಿಲ್ಲ.**

ಜೆಡಿ(ಎಸ್) ವಿಶ್ವಾಸಾರ್ಹ ಪರ್ಯಾಯ ಅಲ್ಲ

ಅಧಿಕಾರದ ಕನಸು ಕಾಣುತ್ತಿರುವ ಜೆಡಿ(ಎಸ್) ಒಂದು ವಿಶ್ವಾಸಾರ್ಹ ಪಕ್ಷವಾಗಿ ಉಳಿದಿಲ್ಲ. ಕಾಂಗ್ರೆಸಾಗಲಿ, ಬಿಜೆಪಿಯಾಗಲಿ ಅನುಸರಿಸುತ್ತಿರುವ ಜನ-ವಿರೋಧಿ ನವ-ಉದಾರವಾದಿ ನೀತಿಗಳ ವಿಷಯದಲ್ಲಿ ಜೆಡಿಎಸ್‌ಗೆ ಯಾವ ತಕರಾರು ಇಲ್ಲ. ಅದರ ಕಾರ್ಯಾಧ್ಯಕ್ಷರು ಒಂದು ಬಾರಿ ಜಾತ್ಯತೀತತೆ ಎಂದರೇನು ಎಂದು ಕೇಳುವ ಮೂಲಕ ಅದೂ ಈ ಪಕ್ಷದ ಗುರುತು ಅಲ್ಲ ಎಂದು ಸ್ಪಷ್ಟ ಪಡಿಸಿದ್ದರು. ಬಿಜೆಪಿ ಜತೆ ಮೈತ್ರಿಕೂಟದಲ್ಲಿ ಸರಕಾರ ಮಾಡಿ ಪ್ರಾಯೋಗಿಕವಾಗಿಯೂ ಜಾತ್ಯತೀತತೆ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ ಎಂದು ತೋರಿಸಿಕೊಟ್ಟಿದೆ. ಅದು ರಾಷ್ಟ್ರೀಯ ಪಕ್ಷಗಳು ಕರ್ನಾಟಕದ ಹಿತವನ್ನು ಕಾಯಲಾರವು. ತನ್ನಂತಹ ಪ್ರಾದೇಶಿಕ ಪಕ್ಷ ಮಾತ್ರ ಅದನ್ನು ಮಾಡಬಲ್ಲುದು ಎಂದು ವಾದಿಸುತ್ತಾರೆ. ಆದರೆ ಒಕ್ಕೂಟವಾದದ ಅಥವಾ ರಾಜ್ಯದ ಭಾಷೆ-ಸಂಸ್ಕೃತಿಗಳ ಮೇಲೆ ಪ್ರಹಾರಗಳ ಬಗೆಗಾಗಲಿ ಈ ಪಕ್ಷ ಇದು ವರೆಗೆ ಚಕಾರವೆತ್ತಿಲ್ಲ. ಅದು ಕಾಂಗ್ರೆಸ್ ಮತ್ತು ಬಿಜೆಪಿ ಜತೆ ಜಂಟಿ ಸರಕಾರ ರಚಿಸಿ ಹೇಗಾದರೂ ಅಧಿಕಾರ-ಗ್ರಹಣ ಒಂದೇ ಅದರ ನೀತಿ ಎಂದೂ ತೋರಿಸಿಕೊಟ್ಟಿದೆ. ತನ್ನ ನೀತಿ-ಹೀನತೆಯಿಂದ ಮತ್ತು ಸಮಯ ಸಾಧಕತನದಿಂದ ರಾಜ್ಯದಲ್ಲಿ ಕಾಂಗ್ರೆಸಿಗೆ ಮತ್ತು ಬಿಜೆಪಿಗೆ ಪರ್ಯಾಯವಾಗಿ ಬೆಳೆದು ಬರಲು ಇರುವ ಅವಕಾಶವನ್ನು ಅದು ಕಳೆದುಕೊಂಡಿದೆ. ಆಧ್ದರಿಂದ ಕಾಂಗ್ರೆಸ್ ಮತ್ತು ಬಿಜೆಪಿಗಳಿಗೆ ಇದು ಪರ್ಯಾಯವಾಗಲಾರದು.

ಧೋರಣೆಗಳ ಪರ್ಯಾಯ ಎಡ ಪಕ್ಷಗಳಿಂದ ಮಾತ್ರ ಸಾಧ್ಯ

ಕಾಂಗ್ರೆಸ್ ಮತ್ತು ಬಿ.ಜೆ.ಪಿ. ಪಕ್ಷಗಳು ಬಂಡವಾಳಗಾರ ಮತ್ತು ಜಮಿನ್ದಾರ ವರ್ಗಗಳ ಪಕ್ಷಗಳಾಗಿರುವುದರಿಂದ ಅವುಗಳ ದೋರಣೆಯಲ್ಲಿ ವ್ಯತ್ಯಾಸ ಇಲ್ಲ. ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಕರ್ನಾಟಕವನ್ನು ಇಂದು ಆಳುವುದು ಆ ಪಕ್ಷಗಳಲ್ಲಿ ತುಂಬಿರುವ – ಗಣಿ, ರೀಯಲ್ ಎಸ್ಟೇಟ್ ಮಾಫಿಯಾಗಳು, ಶಿಕ್ಷಣ ಮತ್ತು ಆಸ್ಪತ್ರೆಗಳ ಲಾಬಿಗಳು. ಆದ್ದರಿಂದಲೇ ಶಾಸಕರು ಅಭ್ಯರ್ಥಿಗಳು ಮೂರು ಪಕ್ಷಗಳ ನಡುವೆ ಅಷ್ಟು ಸಲೀಸಾಗಿ ಓಡಾಡಬಲ್ಲರು. ಆದ್ದರಿಂದಲೇ ಈ ಪಕ್ಷಗಳು ಪರಸ್ಪರ ಪರ್ಯಾಯವಾಗಲಾರವು. ಬಂಡವಾಳಶಾಹಿ ಭೂಮಾಲಿಕ ವರ್ಗಗಳು ದೇಶದಲ್ಲಿ ಈ ಎರಡು ಪಕ್ಷಗಳು ಅಥವ ಅವುಗಳ ನೇತೃತ್ವದ ಎರಡೇ ರಂಗಗಳು ಇರಬೇಕೆಂದು ಬಯಸುತ್ತವೆ. ಅದು ಅಮೇರಿಕ ಮಾದರಿಯ ಪ್ರಜಾಪ್ರಭುತ್ವವೂ ಆಗಿದೆ. ಜನಗಳಿಗೆ ಕಾಂಗ್ರೆಸ್ ಬೇಡವಾದರೆ ಬಿ.ಜೆ.ಪಿ.ಯನ್ನು ಅಧಿಕಾರಕ್ಕೆ ತರುತ್ತಾರೆ. ಬಿ.ಜೆ.ಪಿ. ಬಗ್ಗೆ ಬೇಸತ್ತಾಗ ಮತ್ತೆ ಕಾಂಗ್ರೆಸನ್ನು ಆಯ್ಕೇ ಮಾಡಿಕೊಳ್ಳುತ್ತಾರೆ. ಎರಡೂ ಪಕ್ಷಗಳು ಜನ-ವಿರೋಧಿ ನವ-ಉದಾರೀಕರಣದ ಧೋರಣೆಗಳನ್ನೇ ಜಾರಿ ಮಾಡುತ್ತವೆ.

ರಾಜ್ಯದ ಜನತೆ ಬಂಡವಾಳಗಾರರ ಮತ್ತು ಜಮಿನ್ದಾರರ ಈ ಸಂಚನ್ನು ಅರ್ಥಮಾಡಿಕೊಂಡು ವ್ಯಕ್ತಿಗಳಲ್ಲಿ, ಪಕ್ಷಗಳ ನಡುವೆ ಪರ್ಯಾಯವನ್ನು ಹುಡುಕದೆ ದೋರಣೆಗಳ ಪರ್ಯಾಯವನ್ನು ಕಂಡುಕೊಳ್ಳಲು ಸಾಧ್ಯವಾಗಬೇಕು. ಸಿ.ಪಿ.ಐ(ಎಂ) ಒಳಗೊಂಡಂತೆ ಎಡ ಪಕ್ಷಗಳು ಮಾತ್ರ ಕಾಂಗ್ರೆಸ್‌ಸಿಗೆ ಮತ್ತು ಬಿ.ಜೆ.ಪಿ.ಗೆ ಧೋರಣಾತ್ಮಕ ಪರ್ಯಾಯವನ್ನು ನೀಡಬಲ್ಲವು. ಅದನ್ನೇ ಎಡ ಪರ್ಯಾಯ ಎಂದು ಕರೆಯಲಾಗುತ್ತದೆ.

ಪಶ್ಚಿಮ ಬಂಗಾಳ ರಾಜ್ಯದಲ್ಲಿ 34 ವರ್ಷಗಳ ಕಾಲ ನಿರಂತರವಾಗಿ, ಕೇರಳದಲ್ಲಿ ಹಲವು ಬಾರಿ ಅಧಿಕಾರಕ್ಕೆ ಬಂದ ಮತ್ತು ತ್ರಿಪುರ ರಾಜ್ಯದಲ್ಲಿ 25 ವರ್ಷಕ್ಕೂ ಹೆಚ್ಚು ಕಾಲ ಸಿ.ಪಿ.ಐ.(ಎಂ) ನೇತೃತ್ವದ ಎಡರಂಗ ಸಕಾರಗಳು ಈ ಎಡ ಧೋರಣಾತ್ಮಕ ಪರ್ಯಾಯವನ್ನು ಇಡೀ ದೇಶದ ಮುಂದೆ ಇಟ್ಟಿವೆ.

ಎಡರಂಗ ಸರ್ಕಾರಗಳು ಅಧಿಕಾರದಲ್ಲಿ ಇದ್ದಷ್ಟು ಕಾಲ ರೈತರ ಆತ್ಮಹತ್ಯೆಗಳು ನಡೆಯಲಿಲ್ಲ.. ಕೂಲಿಕಾರರ ಹಸಿವಿನ ಸಾವುಗಳು ಸಂಭವಿಸಲಿಲ್ಲ. ಈ ಮೂರು ರಾಜ್ಯಗಳಲ್ಲಿ ಎಡರಂಗ ಸರ್ಕಾರಗಳು 3 ಹಂತಗಳ ಪಂಚಾಯತ್ ಪದ್ಧತಿಯ ಮೂಲಕ ಅಧಿಕಾರ ವಿಕೇಂದ್ರೀಕರಣವನ್ನು ಯಶಸ್ವಿಯಾಗಿ ಜಾರಿಗೊಳಿಸಿವೆ. ಎಡರಂಗ ಸರ್ಕಾರಗಳು ಜನಪರ ಹೋರಾಟಗಳನ್ನು ದಮನ ಮಾಡುವ ಪೋಲಿಸ್ ನೀತಿಯನ್ನು ಅನುಸರಿಸುತ್ತಿರಲಿಲ್ಲ. ಕೋಮು ದಂಗೆಗಳನ್ನು ತಡೆಗಟ್ಟಲು ದೃಢವಾದ ಕ್ರಮಗಳನ್ನು ಅನುಸರಿಸಲಾಗುತ್ತಿತ್ತು. ಸಾರ್ವಜನಿಕ ರೇಷನ್ ವ್ಯವಸ್ಥೆಯನ್ನು ಬಲಪಡಿಸಲು ವಿಶೇಷ ಗಮನ ನೀಡಲಾಗುತ್ತಿತ್ತು. ಬೇರೆ ರಾಜ್ಯಗಳಿಗೆ ಹೋಲಿಸಿದರೆ, ಇಲ್ಲಿ ಎಡರಂಗ ಸರ್ಕಾರಗಳ ಅಧಿಕಾರವಧಿಯಲ್ಲಿ ಮಹಿಳೆಯರ ಮೇಲೆ, ದಲಿತರ ಮೇಲೆ ದೌರ್ಜನ್ಯಗಳು ನಡೆದಿದ್ದು ತೀರಾ ವಿರಳ.

ಪುಟ 4 ನೋಡಿ

ಯಾರು ಹಿತವರು?

ಪುಟ 3 ರಿಂದ

ಕರ್ನಾಟಕದಲ್ಲಿ ಎಡಪರ್ಯಾಯ ರೂಪಿಸುವಲ್ಲಿ ಸಿಪಿಐ(ಎಂ) ಪಾತ್ರ

ಕರ್ನಾಟಕದಲ್ಲಿ ಎಡ ರಾಜಕೀಯ ಪರ್ಯಾಯವನ್ನು ಜನರ ಮುಂದಿಡಲು ಸಿಪಿಐ(ಎಂ) ಮತ್ತು ಇತರ ಎಡ ಪಕ್ಷಗಳು ರೈತರು, ಕಾರ್ಮಿಕರು, ಕೃಷಿ ಕೂಲಿಕಾರರು ಮತ್ತಿತರ ದುಡಿಯುವ ಜನರ ಹಕ್ಕುಗಳಿಗಾಗಿ ಹೋರಾಡುತ್ತಾ ಅವರ ರಾಜಕೀಯ ಪ್ರಜ್ಞೆಯನ್ನು ಎತ್ತರಿಸುವ ಅವರ ತಿಳುವಳಿಕೆಯನ್ನು ಸುಸಂಬದ್ಧಗೊಳಿಸುವ ಕೆಲಸವನ್ನು ಮಾಡುತ್ತಾ ಬಂದಿವೆ. ಈ ನಿಟ್ಟಿನಲ್ಲಿ ಕಳೆದ ಐದು ವರ್ಷಗಳಲ್ಲಿ ನಡೆದ ಹೋರಾಟಗಳಲ್ಲಿ– ಸೆಪ್ಟೆಂಬರ್ 14, 2017ರಂದು ಬೆಂಗಳೂರಿನ ಮಹಾಧರಣಿಯಲ್ಲಿ ಕೊನೆಗೊಂಡ ಕನಿಷ್ಟ ಕೂಲಿ ಮತ್ತಿತರ ಸಾಮಾನ್ಯ ಕಾರ್ಮಿಕ ಪ್ರಶ್ನೆಗಳ ಹಲವು ಹೋರಾಟಗಳು, ಅಂಗನವಾಡಿ ಮತ್ತು ಇತರ ಸ್ಕೀಂ ಕಾರ್ಮಿಕರ ಐತಿಹಾಸಿಕ ಹೋರಾಟಗಳು; ಬಗರ್ ಹುಕುಂ ಸಾಗುವಳಿ ಸಕ್ರಮಗೊಳಿಸಲು; ಭೂಮಿ, ವಸತಿ–ನಿವೇಶನಗಳ ಇತರ ಹಕ್ಕೊತ್ತಾಯಗಳಿಗೆ ನಡೆದ ಹೋರಾಟಗಳು; ರೇಗಾ ಜಾರಿಗೆ ನಡೆದ ಹೋರಾಟಗಳು – ಕೆಲವು ಪ್ರಮುಖವಾದವುಗಳು. ಸಿಪಿಐ(ಎಂ) ಸಾಮಾಜಿಕ ದಮನಕ್ಕೆ ಒಳಗಾದ ದಲಿತರು, ಆದಿವಾಸಿಗಳು, ಮುಸ್ಲಿಮರು, ಮಹಿಳೆಯರ ಪ್ರಶ್ನೆಗಳನ್ನು ಎತ್ತಿಕೊಂಡು ಹೋರಾಟ ನಡೆಸಿವೆ. ಜಾತಿ ತಾರತಮ್ಯ, ಅಸ್ಪೃಶ್ಯತೆ, ಕೋಮುವಾದ, ಪುರುಷ–ಅಹಂಕಾರ, ಮೂಢನಂಬಿಕೆಗಳ ಬಗ್ಗೆ ಅರಿವು ಮೂಡಿಸಿ ಅವನ್ನು ದುಡಿಯುವ ಜನಮಾನಸದಿಂದ ತೊಡೆಯುತ್ತಾ, ದುಡಿಯುವ ಜನರ ಐಕ್ಯತೆ ಕಾಪಾಡಲು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಮಡೆಸ್ನಾನ ಪದ್ಧತಿಯ ವಿರುದ್ಧ, ಸಿಗರನಹಳ್ಳಿ ದೇವಾಲಯ ಪ್ರವೇಶ, ಮರಕುಂಬಿ ಮುಂತಾದ ಹಲವು ದಲಿತ ದೌರ್ಜನ್ಯಗಳ ವಿರುದ್ಧ, ಕೋಮು ಸಾಮರಸ್ಯಕ್ಕಾಗಿ ಜಾಥಾಗಳು, ಮಂಗಳೂರು ಸೌಹಾರ್ದ ಸಮಾವೇಶ, ಮೈಸೂರಿನ ದೇಶಪ್ರೇಮಿ ಸಮಾವೇಶ, ಸೌಹಾರ್ದಕ್ಕಾಗಿ ಕರ್ನಾಟಕ ರಾಜ್ಯವ್ಯಾಪಿ ಮಾನವ ಸರಪಣಿ – ಇವು ಪಕ್ಷ ಸಂಘಟಿಸಿದ ಪ್ರಮುಖ ಹೋರಾಟಗಳು. ಮೌಢ್ಯ ಪ್ರತಿಬಂಧಕ ಕಾನೂನಿಗಾಗಿ, ಕಲಬುರ್ಗಿ–ಗೌರಿ ಹತ್ಯೆಗಳ ವಿರುದ್ಧ, ರಾಘವೇಶ್ವರ ಸ್ವಾಮಿಯ ರೇಪ್ ಪ್ರಕರಣಗಳ ವಿರುದ್ಧ – ನಡೆದ ಹೋರಾಟಗಳಲ್ಲಿ ಸಿಪಿಐ(ಎಂ) ಇತರ ಸಂಘಟನೆಗಳ ಜತೆ ಕೈಜೋಡಿಸಿತು

ರಾಜ್ಯದ ವಿವಿಧ ಜನ ಸಮೂಹಗಳ ತುರ್ತುಸಮಸ್ಯೆಗಳ ಹಾಗೂ ರಾಜ್ಯದ ಒಟ್ಟಾರೆ ಜನತೆಯ ಪ್ರಜಾಸತ್ತಾತ್ಮಕ ಬೇಡಿಕೆಗಳಿಗಾಗಿ ಸಿಪಿಐ(ಎಂ) ನಡೆಸುತ್ತಾ ಬಂದಿರುವ ಹೋರಾಟಗಳ ಬಗ್ಗೆ ಪಕ್ಷಕ್ಕೆ ತೃಪ್ತಿ ಇಲ್ಲ. ಮಾಡಬೇಕಾದದ್ದು ತುಂಬಾ ಬಾಕಿ ಇದೆ. ಆರಂಭಿಸಿದ ಹೋರಾಟಗಳನ್ನು ಮುಂದುವರೆಸಬೇಕಾಗಿದೆ.

ಜನರ ಹೋರಾಟಗಳು ಶಾಸನ ಸಭೆಯೊಳಗೂ ಪ್ರತಿಧ್ವನಿಸುವುದು ಆಗತ್ಯವಾಗಿದೆ. ಚಳುವಳಿಗಳು ಶಾಸನ ಮಾಡುವವರ ಮೇಲೆ ಪ್ರಭಾವ ಬೀರಬೇಕು. ಶಾಸನ ಸಭೆಗಳ ಚರ್ಚೆಗಳಲ್ಲಿ ಜನಪರ ಹೋರಾಟಗಳನ್ನು ಪ್ರಸ್ತಾಪಿಸುವಂತಹ, ಹೋರಾಡುವ ಜನ ಸಮೂಹಗಳ ನ್ಯಾಯಸಮ್ಮತ ಬೇಡಿಕೆಗಳನ್ನು ಬೆಂಬಲಿಸುವಂತಹ ಜನಪ್ರತಿನಿಧಿಗಳು ಆಯ್ಕೆಯಾಗಬೇಕು. 2004ರ ವಿಧಾನಸಭಾ ಚುನಾವಣೆಯಲ್ಲಿ ಬಾಗೇಪಲ್ಲಿ ಕ್ಷೇತ್ರದಿಂದ ಜಯಗಳಿಸಿದ್ದ ಸಿಪಿಐ(ಎಂ) ಅಭ್ಯರ್ಥಿ ಸಂಗಾತಿ ಜಿ.ವಿ. ಶ್ರೀರಾಮರೆಡ್ಡಿ ರಾಜ್ಯ ವಿಧಾನಸಭೆಯಲ್ಲಿ ದುಡಿಯುವ ಜನರ ಏಕೈಕ ಪ್ರತಿನಿಧಿಯಾಗಿ ಅತ್ಯಂತ ಸಮರ್ಥವಾಗಿ ಕೆಲಸ ಮಾಡಿದ್ದನ್ನು ರಾಜ್ಯದ ಜನತೆ ಈಗಲೂ ಸ್ಮರಿಸುತ್ತಾರೆ. ಆದರೆ ಕಳೆದ 10 ವರ್ಷಗಳಿಂದ ರಾಜ್ಯ ವಿಧಾನಸಭೆಯಲ್ಲಿ ದುಡಿಯುವ ವರ್ಗದ ಒಬ್ಬ ಪ್ರತಿನಿಧಿಯೂ ಇರಲಿಲ್ಲ.

ಈ ನ್ಯೂನತೆಯನ್ನು ನೀಗಿಸಲು ಈ ಸಲ ಕರ್ನಾಟಕದ ಮತದಾರರು, ಅದರಲ್ಲೂ ದುಡಿಯುವ ಜನವಿಭಾಗಗಳು ಸಿಪಿಐ(ಎಂ) ಮತ್ತು ಎಡಪಕ್ಷಗಳ ಅಭ್ಯರ್ಥಿಗಳನ್ನು ಚುನಾಯಿಸಿ ಕರ್ನಾಟಕ ವಿಧಾನಸಭೆಯಲ್ಲಿ ದುಡಿಯುವ ಜನರ ದನಿ ಮೊಳಗಿಸಬೇಕು.

ಸಿಪಿಐ(ಎಂ) ಕರ್ನಾಟಕದ ಮತದಾರರ ಮುಂದಿಡುತ್ತಿರುವ ಜನಪರ ಪರ್ಯಾಯ ಕಾರ್ಯಕ್ರಮ

ದುಡಿಯುವ ಜನಸಾಮಾನ್ಯರ ಕಟು ಅನುಭವಗಳ ಹಿನ್ನೆಲೆಯಲ್ಲಿ ಕಾರ್ಮಿಕರ ಪಕ್ಷವಾದ ಸಿಪಿಐಎಂ, ಕರ್ನಾಟಕದ ರೈತರು, ಕೂಲಿಕಾರರು, ಕಾರ್ಮಿಕರು, ಆದಿವಾಸಿಗಳು, ದಲಿತರು, ಹಿಂದುಳಿದ ಜಾತಿಗಳ ಬಡವರು, ಮಹಿಳೆಯರು, ಮಧ್ಯಮ ವರ್ಗದ ಅಸಂಖ್ಯಾತ ಜನ ಸಮುದಾಯದ ಬದುಕಿನ ಬವಣೆಗಳನ್ನು ನೀಗಿಸಲು, ರಾಜ್ಯದಲ್ಲಿ ಮುಂದಿಟ್ಟಿರುವ ಜನಪರ ಪಯಾಯ ಕಾರ್ಯಕ್ರಮ ಹೀಗಿದೆ:

ಆಹಾರ ಭದ್ರತೆ

? ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ತಡೆಗಟ್ಟುವುದು.

? ರೇಷನ್ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವುದು; ಎಲ್ಲಾ ಕುಟುಂಬಗಳಿಗೆ ಎ.ಪಿ.ಎಲ್., ಬಿ.ಪಿ.ಎಲ್, ಎಂಬ ಭೇದ ಮಾಡದೆ ಒಂದೇ ರೀತಿಯ ರೇಷನ್ ಕಾರ್ಡುಗಳನ್ನು ವಿತರಿಸಿ ಕೆ.ಜಿ.ಗೆ 2ರೂ. ಮೀರದ ದರಗಳಲ್ಲಿ ತಿಂಗಳಿಗೆ 35 ಕೆ.ಜಿ. ಅಕ್ಕಿ–ಗೋಧಿ ನೀಡುವುದು; ಬೇಳೆಕಾಳುಗಳು, ಉಪ್ಪು, ಔಷಧಿ, ಬಟ್ಟೆ ಇತ್ಯಾದಿ 16 ಜೀವನಾವಶ್ಯಕ ಪದಾರ್ಥಗಳನ್ನು ಸಹ ಕಡಿಮೆ ಬೆಲೆಗೆ ನೀಡುವುದು; ಆಧಾರ್ ಜೋಡಣೆ ಮುಂತಾದ ಕಡ್ಡಾಯ ಶರತ್ತುಗಳನ್ನು ಕೈಬಿಡುವುದು

? ಆಹಾರ ಧಾನ್ಯಗಳ ವ್ಯಾಪಾರದಲ್ಲಿ ಮುಂಗಡ ವ್ಯಾಪಾರಕ್ಕೆ ನೀಡಲಾದ ಅನುಮತಿಯನ್ನು ಹಿಂಪಡೆಯುವುದು.

? ಆಹಾರ ಸಬ್ಸಿಡಿಯೂ ಸೇರಿದಂತೆ ಇನ್ನಿತರ ಸಬ್ಸಿಡಿಗಳನ್ನು 'ನೇರ ನಗದು ವರ್ಗಾವಣೆ' ಯೊಜನೆಯ ಅಡಿಯಲ್ಲಿ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡುವ ಉದ್ದೇಶವನ್ನು ಕೈಬಿಡುವುದು.

ಕೃಷಿ/ರೈತ/ಕೂಲಿಕಾರರು ಸಮಸ್ಯೆಗಳು

? ಕೃಷಿ ಬೆಳೆಗಳಿಗೆ ಸ್ವಾಮಿನಾಥನ್ ಆಯೋಗ ಶಿಫಾರಸು ಮಾಡಿದಂತೆ ಒಟ್ಟು ಖರ್ಚಿನ ಒಂದುವರೆ ಪಟ್ಟು ಕನಿಷ್ಟ ಬೆಂಬಲ ಬೆಲೆಯನ್ನು ನಿಗದಿ ಪಡಿಸುವುದು ಮತ್ತು ಆ ಬೆಲೆಯಲ್ಲಿ ಸರಕಾರ ಖರೀದಿ ಮಾಡುವಂತೆ ಕಾನೂನಾತ್ಮಕವಾಗಿ ಖಾತರಿ ಪಡಿಸುವುದು

? ರೈತರ ಎಲ್ಲಾ ಸಾಲಗಳನ್ನು ಒಂದು ಬಾರಿ ಮನ್ನಾ ಮಾಡುವ ಕೇರಳ ಎಲ್.ಡಿ.ಎಫ್. ಮಾದರಿಯ ಋಣಭಾರ ವಿಮೋಚನಾ ಕಾಯಿದೆ ಜಾರಿಗೆ ತರುವುದು

? ಬರಗಾಲ ಪೀಡಿತ ಪ್ರದೇಶಗಳಿಗೆ ಶಾಶ್ವತ ನೀರಾವರಿ ಮತ್ತು ಕುಡಿಯುವ ನೀರಿನ ಯೋಜನೆಗಳನ್ನು ರೂಪಿಸುವುದು; ಬಯಲು ಸೀಮೆಯ 7 ಜಿಲ್ಲೆಗಳಿಗಾಗಿ ಪರಮಶಿವಯ್ಯ ವರದಿ ಆಧಾರದಲ್ಲಿ ಶಾಶ್ವತ ನೀರಾವರಿ ಯೋಜನೆಯನ್ನು ರೂಪಿಸುವುದು

? ಮಹದಾಯಿ ಕಾವೇರಿ ನೀರು ಹಂಚಿಕೆಯ ಅಂತರ–ರಾಜ್ಯ ವಿವಾದಗಳನ್ನು ಮಾತುಕತೆಗಳ ಮೂಲಕ ಪರಿಹರಿಸಿ ಶೀಘ್ರ ನೀರು ಬಳಕೆಗೆ ಅನುವು ಮಾಡುವುದು

? ನೀರಿನ ಖಾಸಗೀಕರಣವನ್ನು ತಡೆಯುವುದು

? ಸಮಗ್ರ ಭೂಸುಧಾರಣೆ, ಗೇಣೀದಾರ ರಕ್ಷಣೆ; ಉಚಿತ ವಸತಿ ನಿವೇಶನ ನೀಡಿಕೆ; ಭೂ ಸುಧಾರಣಾ ಕಾನೂನಿಗೆ ತಂದ ರೈತ ವಿರೋಧಿ ತಿದ್ದುಪಡಿಗಳನ್ನು ತೆಗೆದುಹಾಕುವುದು; ನಗರಾಸ್ತಿ ಮಿತಿ ಕಾಯಿದೆ ಮತ್ತೆ ರೂಪಿಸುವುದು.

? ಎ.ಪಿ.ಎಂ.ಸಿ. ಕಾಯ್ದೆಗೆ ಮಾಡಲಾಗಿರುವ ಆನ್ ಲೈನ್ ಟ್ರೇಡಿಂಗ್ ಇತ್ಯಾದಿ ರೈತ ವಿರೋಧಿ ತಿದ್ದುಪಡಿಗಳನ್ನು ಕೈಬಿಡುವುದು.

? ರೈತರ ಒಪ್ಪಿಗೆ ಇಲ್ಲದೆ, ಅವರ ಕೃಷಿ ಭೂಮಿಯನ್ನು ಕೈಗಾರಿಕೆಗಳಿಗಾಗಿ ಸ್ವಾಧೀನಪಡಿಸುವುದನ್ನು ನಿಲ್ಲಿಸುವುದು.

? ರೈತರಿಗೆ ಶೇ. 1ರ ಬಡ್ಡಿ ದರದಲ್ಲಿ ಬ್ಯಾಂಕ್ ಸಾಲ ಒದಗಿಸುವುದು.

? ಕೃಷಿ ಕೂಲಿಕಾರರಿಗೆ ಕಾರ್ಮಿಕರಿಗೆ ಕನಿಷ್ಠ ವೇತನ ಹಾಗು ಸಾಮಾಜಿಕ ಭದ್ರತೆಯನ್ನು ಒದಗಿಸುವ ಪ್ರತ್ಯೇಕ ಕಾಯ್ದೆ ರೂಪಿಸಿ ಜಾರಿಗೊಳಿಸುವುದು.

? ಉದ್ಯೋಗ ಖಾತ್ರಿ ಯೋಜನೆಯನ್ನು ಎಲ್ಲಾ ಗ್ರಾಮಗಳಲ್ಲಿ ಸಮರ್ಪಕವಾಗಿ ಜಾರಿಗೊಳಿಸುವುದು; ದಿನಗೂಲಿಯನ್ನು ರೂ. 600ಕ್ಕೆ ಏರಿಸುವುದು; ವರ್ಷದಲ್ಲಿ 250 ದಿನ ಕೆಲಸ ಒದಗಿಸುವುದು.

ಬಗರ್ ಹುಕುಂ/ವಸತಿ/ನಿವೇಶನ

? ಬಡವರ ಎಲ್ಲ ಬಗರ್‌ಹುಕುಂ ಸಾಗುವಳಿ ಪ್ರಕರಣಗಳನ್ನು ಸಕ್ರಮಗೊಳಿಸುವ ಬಗ್ಗೆ ಇತ್ತೀಚೆಗೆ ಮಾಡಿರುವ ಸರಕಾರದ ನಿರ್ಣಯವನ್ನು ಸಮಗ್ರವಾಗಿ ಜಾರಿಗೊಳಿಸಿ ಸಾಗುವಳಿ ಚೀಟಿ ಕೊಡುವುದು.

? ವಸತಿರಹಿತರು ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ ಅವರಿಗೆ ನಿವೇಶನಗಳನ್ನು ಒದಗಿಸಲು ಸಮಗ್ರವಾದ ಕಾರ್ಯ ಯೋಜನೆಯನ್ನು ಸಿದ್ಧಪಡಿಸಿ ಜಾರಿಗೊಳಿಸುವುದು.

? ಅನೇಕ ವರ್ಷಗಳಿಂದ ಅರಣ್ಯ ಭೂಮಿಯನ್ನು ಸಾಗುವಳಿ ಮಾಡುತ್ತಿರುವ ಬಡವರನ್ನು ಅಥವ ಭೂಮಿಯಲ್ಲಿ ಮನೆಕಟ್ಟಿಕೊಂಡು ವಾಸ ಇರುವ ಬಡವರನ್ನು ಒಕ್ಕಲೆಬ್ಬಿಸದಂತೆ ತಡೆಯುವುದು. ಮತ್ತು ಹಕ್ಕುಪತ್ರ ವಿತರಿಸುವುದು

? ಶ್ರೀಮಂತರು ಕಬಳಿಸಿದ ಸರ್ಕಾರಿ ಭೂಮಿಯನ್ನು ವಶಪಡಿಸಿಕೊಂಡು ಬಡವರಿಗೆ ವಿತರಣೆ ಮಾಡುವುದು.

ಕಾರ್ಮಿಕರು/ಕೈಗಾರಿಕೆ

? ಅಸಂಘಟಿತ ವಲಯದ ಎಲ್ಲಾ ಕಾರ್ಮಿಕ–ನೌಕಕರಿಗೆ ತಿಂಗಳಿಗೆ ರೂ. 18,000 ಕನಿಷ್ಠ ಕೂಲಿಯನ್ನು ನಿಗದಿ ಪಡಿಸುವುದು.

? ಗುತ್ತಿಗೆ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ/ಸೌಲಭ್ಯಗಳನ್ನು ನೀಡಬೇಕು ಎಂದು ನಿರ್ದೇಶಿಸುವ ಸುಪ್ರೀಂ ಕೋರ್ಟಿನ ತೀರ್ಪನ್ನು ಜಾರಿ ಮಾಡುವುದು

? ಕರ್ನಾಟಕ ಸರಕಾರದ ವಿವಿಧ ಇಲಾಖೆ ಮತ್ತು ಸಂಸ್ಥೆಗಳಲ್ಲಿ ದುಡಿಯುತ್ತಿರುವ ಗುತ್ತಿಗೆ ಮತ್ತು ಇತರೆ ಖಾಯಮೇತರ ಕಾರ್ಮಿಕರನ್ನು ಖಾಯಂ ಮಾಡುವುದು

? ಸ್ಕೀಂ ನಲ್ಲಿ ದುಡಿಯುವ ನೌಕರರನ್ನು 2012ರಲ್ಲಿ ನಡೆದ 45 ನೇ ಬಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸ್ಸಿನ ಪ್ರಕಾರ ಕಾರ್ಮಿಕರು ಎಂದು ಪರಿಗಣಿಸಿ ಕನಿಷ್ಠ ಕೂಲಿ ನೀಡಬೇಕು

? ಕಾರ್ಮಿಕ ಕಾನೂನುಗಳ ಸಮರ್ಪಕ ಜಾರಿಗಾಗಿ ಒತ್ತಾಯಿಸುವುದು; ಮಾಲಿಕ–ಪರ ತಿದ್ದುಪಡಿಗಳನ್ನು ಹಿಂತೆಗೆಯುವುದು; ಕಾರ್ಮಿಕರ ಹಿತದೃಷ್ಟಿಯಿಂದ ಆಗಬೇಕಾದ ಕಾರ್ಮಿಕ ಕಾನೂನುಗಳ ತಿದ್ದುಪಡಿಗೆ ಒತ್ತಾಯಿಸುವುದು.

? ಭಾರತೀಯ ಕಾರ್ಮಿಕ ಸಮ್ಮೇಳನ ಮಾದರಿಯ ಕರ್ನಾಟಕ ಕಾರ್ಮಿಕ ಸಮ್ಮೇಳನ ಸಂಘಟಿಸುವುದು

? ಗಣಿಗಾರಿಕೆಯನ್ನು ರಾಷ್ಟ್ರೀಕರಿಸುವುದು.

? ಬಿ.ಇ.ಎಂ.ಎಲ್., ಎಚ್.ಎ.ಎಲ್., ಬಿ.ಇ.ಎಲ್., ಬಿ.ಎಚ್.ಇ.ಎಲ್. ಮುಂತಾದ ಸಾರ್ವಜನಿಕ ಉದ್ಯಮಗಳ ಖಾಸಗೀಕರಣ, ದುರ್ಬಲಗಳಿಸುವುದು, ಮುಚ್ಚುವುದನ್ನು ನಿಲ್ಲಿಸುವುದು

? ಸಾರ್ವಜನಿಕ ಕೈಗಾರಿಕೆಗಳ ಪುನರ್ ಸ್ಥಾಪನೆ. ಹೊಸ ಕೈಗಾರಿಕೆಗಳ ಸ್ಥಾಪನೆ. ರಾಜ್ಯದ ವಿವಿಧ ಪ್ರದೇಶಗಳಿಗೆ ಕೈಗಾರಿಕೆಗಳ ವಿಕೇಂದ್ರೀಕರಣ.

? ಸಣ್ಣ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳಿಗೆ ಮೀಸಲಾತಿ, ಸುಲಭ ಸಾಲ. ಮಾರುಕಟ್ಟೆ ಸೌಲಭ್ಯ.

? ಮುಚ್ಚಿದ ಕೆ.ಜಿ.ಫ್. ಚಿನ್ನದ ಗಣಿಯನ್ನು ಪುನರಾರಂಭಿಸಲು ಹೋರಾಟವನ್ನು ತೀವ್ರಗೊಳಿಸುವುದು.

? ಬೃಹತ್ ಮೀನುಗಾರ ಕಂಪೆನಿಗಳಿಗೆ ಅನುಮತಿ ನೀಡುವುದನ್ನು ನಿಲ್ಲಿಸಿ ಮೀನುಗಾರರ ಹಿತ ಕಾಪಾಡುವುದು.

? ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಪ್ರವೇಶವನ್ನು ವಿರೋಧಿಸುವುದು.

? ನಗರಗಳಲ್ಲಿರುವ ಎಲ್ಲಾ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಿ ಅಲ್ಲಿನ ನಿವಾಸಿಗಳಿಗೆ ಹಕ್ಕುಪತ್ರ ನೀಡುವುದು.

? ನಗರಗಳ ಯೋಜಿತ ಬೆಳವಣಿಗೆ. ಪರಿಸರ ಸಂರಕ್ಷಣೆ; ಸಾರ್ವಜನಿಕ ಸಾರಿಗೆಯ ಬೆಳವಣಿಗೆ

ಸಾಮಾಜಿಕ

? ದಲಿತರ ಮೇಲಿನ ದೌರ್ಜನ್ಯ ಕಾಯಿದೆಯನ್ನು ದುರ್ಬಲಗೊಳಿಸುವ ಸುಪ್ರೀಂ ಕೊರ್ಟಿನ ತೀರ್ಪಿನ ಪುನರ್ವಿಮರ್ಶೆಯಾಗಬೇಕು; ಕಾಯಿದೆಯನ್ನು ಇನ್ನಷ್ಟು ಗಟ್ಟಿಗೊಳಿಸುವ 2014 ಮಸೂದೆಯನ್ನು ಕಾಯಿದೆ ಮಾಡಬೇಕು; ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲು ಹಿಂದೇಟು ಹಾಕುವ ಪೊಲೀಸರ ವಿರುದ್ಧ ಕಠಿಣ ಕ್ರಮಕ್ಕಾಗಿ ಒತ್ತಾಯಿಸುವುದು;

? ಖಾಸಗಿ ರಂಗದಲ್ಲಿಯೂ ಮೀಸಲಾತಿ ಜಾರಿಗಾಗಿ ಒತ್ತಾಯಿಸುವುದು. ದಲಿತ ಕ್ರೈಸ್ತರಿಗೂ ಮೀಸಲಾತಿಯನ್ನು ವಿಸ್ತರಿಸುವುದು.

? ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಗೆ ಅವರ ಜನಸಂಖ್ಯೆಗೆ ಅನುಗುಣವಾದ ಅನುದಾನ ದುರ್ಬಳಕೆ ತಡೆಯುವುದು;

? ಎಸ್‌ಸಿ/ಎಸ್‌ಟಿ ನೌಕರರ ಬಡ್ತಿ ಮೀಸಲಾತಿಯನ್ನು ಅನುಷ್ಠಾನಗೊಳಿಸಲು, ಸಂವಿಧಾನ ತಿದ್ದುಪಡಿ ಮಾಡಬೇಕು

? ಕುಣಬಿ, ಗೌಳಿ, ಹಾಲಕ್ಕಿ, ಕುಂಬ್ರಿ, ಮರಾಠಿ ಮುಂತಾದ ಸಮುದಾಯಗಳನ್ನು ಎಸ್‌ಟಿ ಪಟ್ಟಿಗೆ ಸೇರಿಸಲು ಒತ್ತಾಯಿಸುವುದು

? ಅರಣ್ಯವಾಸಿಗಳ ಜೀವನ ದುರ್ಭರಗೊಳಿಸುವ ಪರಿಸರ ಸೂಕ್ಷ್ಮ ವಲಯದ ಜಾರಿ ತಡೆಯುವುದು

? ಅರಣ್ಯದ ಖಾಸಗೀಕರಣ ಮತ್ತು ವ್ಯಾಪಾರೀಕರಣ ಮಾಡುವ ಉದ್ದೇಶದ ಅರಣ್ಯ ಕಾಯಿದೆ 2018ನ್ನು ಹಿಂತೆಗೆಯಲು ಒತ್ತಾಯಿಸುವುದು

? ದೇವದಾಸಿ ಮಹಿಳೆಯರ ಕುಟುಂಬದ ಎಲ್ಲ ಸದಸ್ಯರನ್ನು ಗಣತಿ ಮಾಡಿ ಎಲ್ಲರನ್ನು ಪುನರ್ವಸತಿಗೊಳಪಡಿಸಲು ವ್ಯಾಪಕವಾದ ಕಾರ್ಯ ಕ್ರಮಗಳನ್ನು ಜಾರಿಗೊಳಿಸುವುದು

? ಮುಸ್ಲಿಂ ಅಲ್ಪಸಂಖ್ಯಾತರ ಬೆಳವಣಿಗೆಗಾಗಿ ಸಾಚಾರ್ ಸಮಿತಿಯ ಹಾಗೂ ರಂಗನಾಥ್ ಮಿಶ್ರಾ ಸಮಿತಿಯ ಶಿಫಾರಸುಗಳನ್ನು ಜಾರಿಗೆ ತರಲು ಒತ್ತಾಯಿಸುವುದು.

? ಬಾಬಾ ಬುಡನ್‌ಗಿರಿ ಬಗ್ಗೆ ಸುಪ್ರೀಂ ಕೋರ್ಟಿನ ತೀರ್ಪನ್ನು ಜಾರಿಗೊಳಿಸುವುದು

? ಗೋಹತ್ಯೆ ವಿರೋಧ, ಲವ್–ಜಿಹಾದ್, ಹಿಂದು ಸಂಸ್ಕೃತಿಗೆ ಅಪಾಯ ಮುಂತಾದ ನೆಪಗಳಲ್ಲಿ ನಡೆಸಲಾಗುತ್ತಿರುವ ದಾಳಿಯನ್ನು ಅಪರಾಧ ಎಂದು ಪರಿಗಣಿಸುವ ಕಾನೂನು ಮಾಡುವುದು

? ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಾಗಿ ಬಂದ ನಿರ್ಭಯ ಕಾನೂನಿನ ಸಮಗ್ರ ಜಾರಿಗೆ ವ್ಯವಸ್ಥೆ

? ಹೆಣ್ಣು ಮಕ್ಕಳ ಮೇಲಿನ ಅತ್ಯಾಚಾರ ತಡೆಗೆ ಪೋಕ್ಸೊ ಕಾಯಿದೆಯ ಕಟ್ಟು ನಿಟ್ಟಿನ ಜಾರಿಗೆ ವ್ಯವಸ್ಥೆ

? ಮಹಿಳೆಯರಿಗೆ ರಕ್ಷಣೆ ಒದಗಿಸುವ ಐಪಿಸಿ ಯ ಸೆಕ್ಷನ್ 498ಎ, ವರದಕ್ಷಿಣೆ ಹಾಗೂ ಕೌಟುಂಬಿಕ ಹಿಂಸೆಯ ವಿರುದ್ಧದ ಮತ್ತು ಭ್ರೂಣ ಪರೀಕ್ಷಾ ಪತ್ತೆ ಕಾಯ್ದೆಗಳನ್ನು ದುರ್ಬಲಗೊಳಿಸುವ ಪ್ರಯತ್ನವನ್ನು ವಿರೋಧಿಸುವುದು

? ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಶೇ.33 ರ ಮೀಸಲಾತಿ ಕಾಯ್ದೆಗಾಗಿ ಒತ್ತಾಯಿಸುವುದು.

? ದುಡಿಯುವ ಮಹಿಳೆಯರು ಅನುಭವಿಸುತ್ತಿರುವ ಲೈಂಗಿಕ ಕಿರುಕುಳ ತಡೆಯಲು ಸುಪ್ರೀಂ ಕೋರ್ಟಿನ ವಿಶಾಖಾ ನಿರ್ದೇಶನ ಸೂತ್ರಗಳ ಜಾರಿಗೆ ಆಗ್ರಹಿಸುವುದು

? ಸ್ತ್ರೀ ಶಕ್ತಿ ಸ್ವಸಹಾಯಕ ಸಂಘದ ಸಾಲ ಮನ್ನಾ ಮಾಡುವುದು

ಶಿಕ್ಷಣ/ಆರೋಗ್ಯ/ಸಂಸ್ಕೃತಿ

? ಶಿಕ್ಷಣಕ್ಕೆ ರಾಜ್ಯ ಬಜೆಟ್‌ನಲ್ಲಿ ಅನುದಾನ ಹೆಚ್ಚಿಸುವುದು.

? ಸಾರ್ವಜನಿಕ ಶಿಕ್ಷಣವನ್ನು ಆಧುನಿಕಗೊಳಿಸಿ ಆಕರ್ಷಣೀಯವಾಗಿಸುವುದು; ಕನ್ನಡ ಮಾಧ್ಯಮವನ್ನು ಬಲಪಡಿಸುವುದು; ಹೊಸ ಸರ್ಕಾರಿ ಕಾಲೇಜುಗಳ ಸ್ಥಾಪನೆ; ಖಾಸಗಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣ; ಸಾರ್ವಜನಿಕ ಆರೋಗ್ಯ ಸಂಸ್ಥೆಗಳನ್ನು ಆಧುನಿಕಗೊಳಿಸಿ ಬಲಪಡಿಸುವುದು;

? ಸಮಾಜ ಕಲ್ಯಾಣ ಇಲಾಖೆ ನಡೆಸುತ್ತಿರುವ ಹಾಸ್ಟೇಲುಗಳ ಅನುದಾನವನ್ನು ಪ್ರತಿವರ್ಷ ಹೆಚ್ಚಿಸುವುದು. ಹಾಸ್ಟೇಲ್ ಸಂಖ್ಯೆಯನ್ನು ಹೆಚ್ಚಿಸುವುದು.

? ಎಲ್ಲಾ ಹಂತಗಳಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿಸುವುದು; ಮಾತೃಭಾಷೆಯೇ ಶಿಕ್ಷಣದ ಮಾಧ್ಯಮವಾಗಿಸಲು ಒತ್ತಾಯಿಸುವುದು; ನೆಲ–ಜಲ ವಿವಾದಗಳನ್ನು ಪರಸ್ಪರ ಮಾತುಕತೆಯ ಮೂಲಕ ಬಗೆ ಹರಿಸುವುದು.

? ಕನ್ನಡ ಭಾಷೆಯ ಬೆಳವಣಿಗೆ, ಜನಪರ ಸಾಹಿತ್ಯ ರಚನೆ, ಪ್ರಸಾರಕ್ಕೆ ಬೆಂಬಲ. ಜನಪದ ಸಾಹಿತ್ಯ ಸಂಸ್ಕೃತಿಯ ಬೆಳವಣಿಗೆ

? ಶಾಲಾ ಮಕ್ಕಳಿಗೆ ಗುಣಮಟ್ಟದ ಬಿಸಿಯೂಟವನ್ನು ಒದಗಿಸುವುದು.

? ನೇಮಕಾತಿ ನಿರ್ಬಂಧಗಳನ್ನು ಕೈಬಿಟ್ಟು ಖಾಲಿ ಇರುವ ಶಿಕ್ಷಕರು ಹುದ್ದೆಗಳನ್ನು ತುಂಬುವುದು.

? ಸಾರ್ವಜನಿಕ ಆರೋಗ್ಯಕ್ಕೆ ಬಜೆಟ್ ಅನುದಾನವನ್ನು ಹೆಚ್ಚಿಸುವುದು. ಶುಲ್ಕ ಮಿತಿ ನಿಗದಿ, ಗುಣಮಟ್ಟ ಸೇರಿದಂತೆ ಖಾಸಗಿ ಆಸ್ಪತ್ರೆಗಳ ಪರಿಣಾಮಕಾರಿ ನಿಯಂತ್ರಣ

? ಈಗ ಇರುವ ಸಾಮಾಜಿಕ ನ್ಯಾಯದ ಕ್ರಮಗಳಿಗೆ ಧಕ್ಕೆಯಾಗದಂತೆ ಲಿಂಗಾಯತ ಸ್ವತಂತ್ರ ಧರ್ಮಕ್ಕೆ ಮಾನ್ಯತೆ ಕೊಡಬೇಕು

? ಕರ್ನಾಟಕದ ಸೌಹಾರ್ದ ಪರಂಪರೆಯನ್ನು ಉಳಿಸಿ ಬೆಳೆಸುವುದು

ವರದಿ: **ವಾ.ಉ.**

204 ಮಂಗಳೂರು ಕ್ಷೇತ್ರಕ್ಕೆ ಆಗಬೇಕಿದೆ ಕಾಯಕಲ್ಪ

ಹಳೆಯ ಉಳ್ಳಾಲ ಅಸೆಂಬ್ಲಿ ಕ್ಷೇತ್ರ ಈಗ 204 ಮಂಗಳೂರು ಅಸೆಂಬ್ಲಿ ಕ್ಷೇತ್ರ ಎನಿಸಿದೆ. ಉಳ್ಳಾಲ ಅನ್ನುವಾಗ ಇತಿಹಾಸದಲ್ಲಿ ಅಲ್ಲಿನ ರಾಣಿ ಅಬ್ಬಕ್ಕಳನ್ನು ನೆನಪಿಸಿಕೊಳ್ಳುತ್ತೇವೆ. ತನ್ನ ಪಾಳೆಯಪಟ್ಟಿಗೆ ಒಳಪಟ್ಟಿದೆ ಉಳ್ಳಾಲ. ಸೀಮೆಯ ಮೇಲೆ ಪೋರ್ಚುಗೀಸರು ನಡೆಸಿದ ದಾಳಿಯನ್ನು ತಡೆಯಲು ಉಳ್ಳಾಲದ ಮೊಗವೀರರು, ಬ್ಯಾರಿಗಳೂ ಅಂದರೆ ಹಿಂದೂಗಳು ಮುಸ್ಲಿಮರೂ ಒಟ್ಟಾಗಿ ಹಲವು ಬಾರಿ ಹೋರಾಡಿದ ಧೀರ ಕಥನಗಳು ಜನರ ಮಧ್ಯೆ ಈಗಲೂ ಕಥೆಗಳಾಗಿ ನಾಟಕಗಳಾಗಿ ಸಾಗಿ ಬಂದಿದೆ. ಅಂಥ ಮತೀಯ ಸಾಮರಸ್ಯ 350 ವರ್ಷಗಳಿಂದ ಕಳೆದ 50 ವರ್ಷಗಳ ಹಿಂದಿನವರೆಗೂ ಇದ್ದಿತ್ತು. 1989ರ ಈಚೆಗೆ ನಡೆದ ಅಯೋಧ್ಯಾ ರಾಮಜನ್ಮಭೂಮಿ ಚಳುವಳಿಯ ಪ್ರಚೋದನೆಗಳು ದ.ಕ.ಜಿಲ್ಲೆಯಲ್ಲಿ ಜೋರಾಗಿ ನಡೆದಿದ್ದು, ಅದು ಅಲ್ಲಿಂದೀಚೆಗೆ ಹಲವು ಬಾರಿ ಹಿಂದೂ ಮುಸ್ಲಿಮರ ಸಂಘರ್ಷಕ್ಕೆ ಕಾರಣವಾಗಿದೆ. ಇದರಿಂದ ಉಳ್ಳಾಲದ ಸಾಮರಸ್ಯದ ಚರಿತ್ರೆಗೆ ಊನ ಉಂಟಾಗಿದೆ. ಈಗಲೂ ಪದೇ ಪದೇ ಹಿಂದೂ ಮುಸ್ಲಿಂ ಘರ್ಷಣೆಗಳು ಎದ್ದೇಳುವ ಕ್ಷೇತ್ರವಾಗಿದೆ ಉಳ್ಳಾಲ. ಈ ಕೋಮುದ್ವೇಷವನ್ನು ನಿರ್ಣಾಯಕವಾಗಿ ಇಲ್ಲವಾಗಿಸುವ ಕಾರ್ಯಕ್ರಮವನ್ನು ಇಲ್ಲಿನ ಶಾಸಕರು ಯಾರೇ ಬಂದರೂ ಮಾಡಬೇಕಾಗಿದೆ.

ಇನ್ನು ಅಭಿವೃದ್ಧಿಯ ವಿಷಯ. ಶಾಲೆ ಕಾಲೇಜುಗಳು ಈ ಕ್ಷೇತ್ರದಲ್ಲಿ ಇವೆಯಾದರೂ, ವಿದ್ಯಾವಂತ ತರುಣರಿಗೆ ಉದ್ಯೋಗ ಒದಗಿಸಬಲ್ಲ ಪುಟ್ಟ ಪುಟ್ಟ ಪೇಟೆ ಪಟ್ಟಣಗಳು ಈ ಕ್ಷೇತ್ರದಲ್ಲಿ ಬರಬೇಕಾಗಿದೆ. ಈಗ ಉಳ್ಳಾಲ, ಕೋಟೆಕಾರು, ಸೋಮೇಶ್ವರ, ಪುದು ಮತ್ತು ಸಜಿಪನಡು ಇವುಗಳು ಮಾತ್ರ ಪಟ್ಟಣ ಪಂಚಾಯತುಗಳಾಗಿ ಅಭಿವೃದ್ಧಿ ಹೊಂದಿವೆ. ಗ್ಯಾರೇಜು, ಹೋಟೇಲು, ಅಂಗಡಿ, ಬೇಕರಿ, ಹಾರ್ಡ್‌ವೇರ್, ವೈದ್ಯಕೀಯ ಲ್ಯಾಬು ಇತ್ಯಾದಿ ಉದ್ಯೋಗಗಳು ಹೆಚ್ಚು ವಿದ್ಯಾವಂತರಿಗೆ ಉದ್ಯೋಗ ಕೊಡಿಸಬಲ್ಲವು. ಬ್ಯಾಂಕು ಸಾಲ ಒದಗಿಬಂದಲ್ಲಿ ಹೆಚ್ಚು ಜನ ಪುಟ್ಟ ಉದ್ಯಮಗಳನ್ನು ಆರಂಭಿಸಲು ಮುಂದೆ



ಬಂದಾರು. ರಾಷ್ಟ್ರೀಕೃತ ಬ್ಯಾಂಕುಗಳು ಸುಲಭ ಬಡ್ಡಿಯ ಸಾಲಗಳನ್ನು ಒದಗಿಸುವ ಬಗ್ಗೆ ನೀತಿ ನಿಯಮಗಳನ್ನು ಸರಕಾರದ ಮಟ್ಟದಲ್ಲಿ ರೂಪಿಸಿದಲ್ಲಿ, 204 ಮಂಗಳೂರಿನಂಥ – ಹೆಚ್ಚು ಕಡಿಮೆ ಮೆಟ್ರೋಪಾಲಿಟನ್ ಸಂಸ್ಕೃತ ರೂಡಿಸಿಕೊಂಡಿರುವ ವಿದ್ಯಾವಂತ ಜನರಿರುವ ಪ್ರದೇಶದಲ್ಲಿ ವ್ಯಾಪಕವಾದ ವ್ಯಾಪಾರೀ ಸಂಕೀರ್ಣಗಳನ್ನು ಬೆಳೆಸುವುದು ಸಾದ್ಯ. ಈ ಬಗ್ಗೆ ಶಾಸಕರಿಗೆ ಮುನ್ನೋಟ ಇರಬೇಕಾಗಿದೆ.

ಜನ ಎಷ್ಟೇ ಮುಂದುವರಿದಿದ್ದರೂ, ಸ್ವಂತ ಮನೆಯಿಲ್ಲದವರೇ ಬಹಳ ಮಂದಿ. ಸರಕಾರೀ ಜಮೀನಿನಲ್ಲಿ ಮನೆ ಮಾಡಿದವರಿಗೆ ಈಗ 94ಸಿ ಅಡಿ ಮನೆ ಮಂಜೂರಾಗಿದೆ. ಬಾಡಿಗೆ ಮನೆಗಳಲ್ಲೋ, ಅವಿಭಕ್ತ ಕುಟುಂಬದಲ್ಲೋ ಅನಿವಾರ್ಯವಾಗಿ ವಾಸವಾಗಿರುವವರಿಗೆ ಮನೆ ನಿವೇಶನ ಒದಗಿಸಬೇಕಾಗಿದೆ. ಕರ್ನಾಟಕ ಪ್ರಾಂತ ರೈತ ಸಂಘದ ಕೆಂಬಾವುಟದಲ್ಲಿ ದೀರ್ಘಕಾಲ ಈ ಬಗ್ಗೆ ಹೋರಾಟ ನಡೆದಿದೆ. ಇದು ತುರ್ತಾಗಿ ಆಗಬೇಕಾದ ಕೆಲಸ. ಸರಕಾರೀ ಜಮೀನಿನಲ್ಲಿ ಬಗರ್‌ಹುಕುಂ ಕೃಷಿ ಮಾಡಿರುವವರು ಈ ಕ್ಷೇತ್ರದ ಪೂರ್ವಭಾಗವಾಗಿರುವ ಬಂಟ್ವಾಳ ತಾಲೂಕು ಕುರ್ನಾಡು, ಬಾಳೆಪುಣಿ, ಇರಾ, ಸಜಿಪ ಇತ್ಯಾದಿ ಗ್ರಾಮಗಳಲ್ಲಿ ಹೆಚ್ಚಾಗಿದ್ದಾರೆ. ಅಲ್ಲದೆ ಹಿಂದಿನ ದಣಿಗಳ ಗೇಣಿ ಜಮೀನನ್ನು ಕೃಷಿ ಮಾಡುತ್ತಿದ್ದವರಿಗೆ, ಭೂಸುಧಾರಣಾ ಶಾಸನದಂತೆ, ರೈತರಿಗೆ ಮಂಜೂರಾಗದ ಭೂಮಿಗಳೂ ಇವೆ. ಈ ಎರಡೂ ಬಗೆಯ ಕೃಷಿಕರಿಗೆ ಭೂಮಿಯ ಹಕ್ಕುಪತ್ರ ದೊರೆಯಬೇಕು.

ಸಮುದ್ರ ತೀರದಲ್ಲಿ ಉಳ್ಳಾಲದಿಂದ ತಲಪಾಡಿಯವರೆಗಿನ ಗ್ರಾಮಗಳಲ್ಲಿ ಮೀನುಗಾರ ಕುಟುಂಬಗಳಿವೆ. ಕಳೆದ 7 ವರ್ಷಗಳಿಂದ ಇಲ್ಲಿ ಪ್ರತಿ ಮಳೆಗಾಲದಲ್ಲೂ, ಬಳಿಕವೂ ಸಮುದ್ರ ಕೊರೆತ ತೀವ್ರವಾಗಿದೆ. ಮನೆಗಳು ಸಮುದ್ರಪಾಲಾಗುತ್ತಿವೆ. ತೀವ್ರ ಕೊರೆತವಾದ ಸಂದರ್ಭ ತಾತ್ಕಾಲಿಕ ತಡೆಗೋಡೆ ರಚಿಸಲಾಗುತ್ತಿದೆ. ಇವು ಪ್ರತಿವರ್ಷ ನಡೆಯುವ ಕಾಮಗಾರಿಗಳಾಗಿದ್ದು, 'ಸಮುದ್ರಕ್ಕೆ ಕಲ್ಲು ಹಾಕುವುದು' ಎಂಬುದು ವ್ಯಂಗ್ಯದ ಗಾದೆ ಮಾತಾಗಿದೆ. ಕೇರಳ ರಾಜ್ಯದ ಮಾದರಿಯಲ್ಲಿ ಶಾಶ್ವತ ತಡೆಗೋಡೆಯನ್ನು ಉಳ್ಳಾಲದಿಂದ ತಲಪಾಡಿ ವರೆಗಿನ ಸಮುದ್ರದಂಡೆಯಲ್ಲಿ ಕಟ್ಟಬೇಕಾಗಿದೆ.

ನೇತ್ರಾವತಿ ನದಿಯುದ್ದಕ್ಕೂ ಉಳ್ಳಾಲದಿಂದ ತುಂಬೆಯವರೆಗೂ ಮರಳುಗಾರಿಕೆ ಪ್ರಮುಖ ಉದ್ಯಮವಾಗಿದೆ. ಮರಳು ಮಾಫಿಯಾದ ಪಾಲುದಾರರಾಗಿರುವ ಕೆಲವು ಗುತ್ತಿಗೆದಾರರು ನಿಗದಿಗೊಳಿಸಿದ ಸ್ಥಳ ಹಾಗೂ ಪ್ರಮಾಣವನ್ನು ಮೀರಿ ನಡೆಸುವ ಅಕ್ರಮ ಮರಳುಗಾರಿಕೆಯನ್ನು ತಡೆಯಲು ಕಂದಾಯ, ಜಿಯೋಲಜಿ ಹಾಗೂ ಪೋಲೀಸ್ ಇಲಾಖೆಗಳ ಮಧ್ಯೆ ಒಂದು ವ್ಯವಸ್ಥಿತ ನಿಯಂತ್ರಣ ಜಾಲವನ್ನು ರೂಪಿಸುವ ಜವಾಬ್ದಾರಿಯನ್ನು ಶಾಸಕರು ಆದ್ಯತೆಯಾಗಿ ತೆಗೆದುಕೊಳ್ಳಬೇಕಾಗಿದೆ. 204 ಮಂಗಳೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಖಾಸಗಿ ಮೆಡಿಕಲ್ ಹಾಗೂ ಇತರ ಪ್ರೊಫೆಷನಲ್ ಕಾಲೇಜುಗಳಿದ್ದು, ಅವುಗಳ ಸಾಮೀಪ್ಯ ಬಳಸಿಕೊಂಡು ಮಾದಕ ದ್ರವ್ಯ ಮಾರಾಟ ಜಾಲ ಕ್ಷೇತ್ರದಲ್ಲಿ ವ್ಯಾಪಕವಾಗಿದೆ. ಇದನ್ನು ಹದ್ದುಬಸ್ತಿನಲ್ಲಿಡಲು ಸಾರ್ವಜನಿಕ ಸಮಿತಿ ಹಾಗೂ ಪೋಲೀಸ್ ಇಲಾಖಾ ಸಹಕಾರವನ್ನು ಬಳಸಿ ಮಾದಕ ದ್ರವ್ಯ ಮಾರಾಟ ಜಾಲವನ್ನು ನಿಯಂತ್ರಣದಲ್ಲಿಡಬೇಕಾಗಿದೆ.

ಕ್ಷೇತ್ರದ ಎಲ್ಲಾ ಊರುಗಳೂ ಬೇಸಗೆಯಲ್ಲಿ ಕುಡಿಯುವ ನೀರಿನ ಕೊರತೆಯನ್ನು ಅನುಭವಿಸುತ್ತಿವೆ. ನೇತ್ರಾವತಿಗೆ ಹರೇಕಳ–ಅಡ್ಯಾರು ಸಮೀಪ ಉಪ್ಪುನೀರು ತಡೆ ಅಣೆಕಟ್ಟು ರಚಿಸುವ ಪ್ರಸ್ತಾಪವಿದೆ. ಆ ಅಣೆಕಟ್ಟನ್ನು ಬಳಸಿ ಸಂಗ್ರಹಿಸುವ ನೀರನ್ನು ಬಹುಗ್ರಾಮ ಕುಡಿಯುವ ನೀರು ಯೋಜನೆ ಮೂಲಕ ಹರೇಕಳ, ಮುಡಿಪು, ಚೇಳಾಯಿರು ಇತ್ಯಾದಿ ಪ್ರದೇಶಗಳಿಗೆ ಕುಡಿಯುವ ನೀರಿನ ಪೂರೈಕೆ ಯೋಜನೆ ರೂಪಿಸಬೇಕಾಗಿದೆ. ತೊಕ್ಕೊಟ್ಟಿನಿಂದಲಾಗಿ ಮುಡಿಪು ಮೂಲಕ ಪಾಣೆ ಮಂಗಳೂರು (ಮೇಲ್ಕಾರು) ಸೇರುವ ರಸ್ತೆಯನ್ನು ದ್ವಿಪಥ ರಸ್ತೆಯಾಗಿ ರೂಪಿಸಿದಲ್ಲಿ ಮಂಗಳೂರು–ಬಂಟ್ವಾಳ ರಾಷ್ಟ್ರೀಯ ಹೆದ್ದಾರಿಗೆ ಅದು ಪರ್ಯಾಯ ರಸ್ತೆಯಾಗಬಲ್ಲುದು.

2 ಬಾರಿ ಕಮ್ಯೂನಿಸ್ಟ್ ಶಾಸಕರು ಆಯ್ಕೆಯಾಗಿದ್ದ ಕ್ಷೇತ್ರವಿದು. ಇಂದಿಗೂ ಅವರುಗಳ ಜನಪರ ಕಾರ್ಯಕ್ರಮಗಳನ್ನು ನೆನಪಿಸುವ ಹಿರಿಯರು ಕ್ಷೇತ್ರದಲ್ಲಿದ್ದಾರೆ. ಈ ನಿಟ್ಟಿನಲ್ಲಿ ಇಲ್ಲಿನ ಶಾಸಕರ ಜವಾಬ್ದಾರಿ ಗುರುತರದ್ದಾಗಿದೆ. ●



ಮೂಡಬಿದ್ರಿ ಅಸೆಂಬ್ಲಿ ಕ್ಷೇತ್ರದ ನಿರ್ಲಕ್ಷಿತ ಕ್ಷೇತ್ರಗಳಿಗೆ ಆದ್ಯತೆ ಇರಲಿ

ಮೂಡಬಿದ್ರಿ ಅಸೆಂಬ್ಲಿ ಕ್ಷೇತ್ರದಲ್ಲಿ ಮೂಡಬಿದ್ರಿ ನಗರವೊಂದೇ ಆಳ್ವಾಸ್ ಶೈಕ್ಷಣಿಕ ಸಂಸ್ಥೆಗಳ ವಿಸ್ತಾರ ಜಾಲದಿಂದಲಾಗಿ ವಿಶೇಷವಾಗಿ ಅಭಿವೃದ್ಧಿಗೊಂಡ ನಗರವಾಗಿದೆ. ಬಜ್ಪೆ, ಮುಲ್ಕಿ, ಕಿನ್ನಿಗೋಳಿ, ಹಳೆಯಂಗಡಿಗಳು ಅಭಿವೃದ್ಧಿಗೊಂಡ ಪಟ್ಟಣಗಳಾಗಿದ್ದರೂ, ಉಳಿದ ಗ್ರಾಮಗಳು ನಿರ್ಲಕ್ಷ್ಯಕ್ಕೊಳಗಾಗಿವೆ. ಈ ಇಡೀ ಪ್ರದೇಶದಲ್ಲಿ ಖಾಸಗಿ ಪದವಿ ಕಾಲೇಜುಗಳಿವೆ, ಆದರೆ ಸರಕಾರೀ ಪದವಿ ಕಾಲೇಜಿಲ್ಲ. ಬಹಳ ಅಗತ್ಯವಾಗಿ ಕನಿಷ್ಟ ಒಂದಾದರೂ ಸರಕಾರೀ ಪದವಿ ಕಾಲೇಜು ಆಗಬೇಕಾಗಿದೆ. ಅದೇ ರೀತಿ ಸರಕಾರಿ ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್ ಕೂಡಾ ಈ ಕ್ಷೇತ್ರದಲ್ಲಿ ಅಸ್ತಿತ್ವಕ್ಕೆ ಬರಬೇಕಾಗಿದೆ.

ಇಲ್ಲಿನ ಗ್ರಾಮಗಳಲ್ಲಿ ಇವತ್ತಿಗೂ ಉತ್ತಮವಾಗಿ ಕೃಷಿ ಮಾಡುವ ರೈತರಿದ್ದಾರೆ. ಸರಕಾರೀ ಭೂಮಿಯನ್ನು ಹಲವು ವರ್ಷಗಳಿಂದ ಅಭಿವೃದ್ಧಿಪಡಿಸಿದ 5000ಕ್ಕೂ ಮೀರಿದ ಕೃಷಿಕರ ಭೂಮಿ ಸಕ್ರಮೀಕರಣ ಆಗಬೇಕಾಗಿದೆ. ಅರಣ್ಯ ಪ್ರದೇಶಗಳಲ್ಲಿ ಕೃಷಿ ಮಾಡಿದವರಿಗೆ ಭೂಮಿಯ ಹಕ್ಕುಪತ್ರ ಸಿಗಬೇಕಾಗಿದೆ. 94ಸಿ ಅಡಿಯಲ್ಲಿ ಕೆಲವರಿಗೆ ವಾಸಿಸುವ ಮನೆಯಡಿ ಸ್ಥಳ ದೊರಕಿದ್ದರೂ, ಸಾವಿರಾರು ನಿವೇಶನರಹಿತರಿಗೆ ಮುಖ್ಯವಾಗಿ ಬಜ್ಪೆ, ಕಟೀಲು, ಕಿನ್ನಿಗೋಳಿ, ಹಳೆಯಂಗಡಿ, ಮುಲ್ಕಿ, ಕಿನ್ನಿಗೋಳಿ, ಚೆಳ್ಯಾರು ಇತ್ಯಾದಿ ಪುಟ್ಟ ಪೇಟೆ ಪಟ್ಟಣಗಳಲ್ಲಿ ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿರುವವರಿಗೆ ಹಾಗೂ ಅವಿಭಕ್ತ ಕುಟುಂಬಗಳಲ್ಲೇ ನಿರ್ವಾಹವಿಲ್ಲದೆ ಮುಂದುವರಿದಿರುವ ವಸತಿ ರಹಿತರಿಗೆ ನಿವೇಶನ ಭೂಮಿಯನ್ನು ಕೊಡಿಸುವ ನೀತಿ ರೂಪಿಸುವಲ್ಲಿ ಶಾಸಕರು ದುಡಿಯಬೇಕಿದೆ. ಮೂಡಬಿದ್ರಿ ತಾಲೂಕಿನಲ್ಲಿ ನಿವೇಶನಕ್ಕಾಗಿ ಗುರುತಿಸಲಾದ ಭೂಮಿ 100 ಎಕ್ರೆಯಷ್ಟಿದೆ ಎಂಬುದನ್ನು ಗಮನಿಸಬೇಕು.

ಈ ಕ್ಷೇತ್ರದಲ್ಲಿ ಕುಡುಬಿ ಎಂಬ ತೀರಾ ಹಿಂದುಳಿದ ಕೃಷಿಕ ಸಮುದಾಯವಿದೆ. ಇವರ ಜೀವನ ಶೈಲಿ ಆದಿವಾಸಿಗಳ ರೀತಿಯಲ್ಲಿದೆ. ಈ ಸಮುದಾಯವನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸುವ ಪ್ರಯತ್ನ ಯಶಸ್ವಿಯಾಗಿಲ್ಲ. ಈ ಬಗ್ಗೆ ಅಗತ್ಯ ಮಾಹಿತಿಗಳನ್ನು ಅಧಿಕಾರಿಗಳಿಂದ ಸಂಗ್ರಹಿಸಿ, ರಾಜ್ಯ ಸರಕಾರದ ಮೂಲಕ ಕೇಂದ್ರ ಸರಕಾರದ ಸಂಬಂಧಪಟ್ಟ ಮಾನ್ಯತಾ ಸಮಿತಿಗೆ ಒಪ್ಪಿಸುವ ಕೆಲಸ ಆಗಬೇಕಿದೆ.

ಮೂಡಬಿದ್ರಿ ಅಭಿವೃದ್ಧಿ ಹೊಂದಿದ ಪಟ್ಟಣ. ಇಲ್ಲಿ ಖಾಸಗಿ ಬೃಹತ್ ಬಸ್ ನಿಲ್ದಾಣವಿದ್ದರೂ, ಸರಕಾರೀ ಬಸ್ಸು ನಿಲ್ದಾಣವಿಲ್ಲ. ಕೆಎಸ್‌ಆರ್‌ಟಿಸಿ ಬಸ್ಸುಗಳು ಇಲ್ಲಿ ಕಾರ್ಕಳ, ಧರ್ಮಸ್ಥಳಗಳ ಕಡೆಗೆ ಇಲ್ಲಿಂದ ಸಾಕಷ್ಟು ಸಾಗುತ್ತಿವೆ. ಹಾಗಾಗಿ ಕೆಎಸ್‌ಆರ್‌ಟಿಸಿ ಬಸ್ಸು ನಿಲ್ದಾಣ ಆಗಬೇಕಿದೆ. ಅಲ್ಲದೆ ಮಂಗಳೂರು–ಮೂಡಬಿದ್ರಿ–ಕಾರ್ಕಳ ರಸ್ತೆಯಲ್ಲಿ ಕೇವಲ ಖಾಸಗಿ ಬಸ್ಸು ಸಂಚಾರ ಮಾತ್ರವಿದೆ. ಇದನ್ನು ರಾಜ್ಯ ಹೆದ್ದಾರಿಯಾಗಿ ಉನ್ನತೀಕರಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ. ಅದರ



ಜೊತೆಗೇ ಮಂಗಳೂರು–ಕಾರ್ಕಳ ಮಧ್ಯೆ ಸರಕಾರೀ ಬಸ್ಸುಗಳನ್ನೂ ಸಂಚಾರಕ್ಕೆ ಇಳಿಯಬಿಡಬೇಕಾಗಿದೆ.

ಮೂಡಬಿದ್ರಿಯಲ್ಲಿ 15 ಕೋಟಿ ರೂಪಾಯಿ ವೆಚ್ಚದಲ್ಲಿ ಬೃಹತ್ ಮಾರುಕಟ್ಟೆ ರಚನೆಯ ಹಂತದಲ್ಲಿದೆ. ಇದರ ನಿರ್ಮಾಣದಲ್ಲಿ ಖಾಸಗಿ ಸಂಸ್ಥೆಗೆ ಪಾಲುದಾರಿಕೆ ನೀಡಲಾಗಿದೆ. ಸರಕಾರೀ ಅನುದಾನದಿಂದಲೇ ಈ ಮಾರುಕಟ್ಟೆ ಪೂರ್ಣಗೊಳ್ಳುವಂತೆ ಮಾಡಬೇಕಾಗಿದೆ.

ಈ ಅಸೆಂಬ್ಲಿ ಕ್ಷೇತ್ರದಲ್ಲಿ ಹಿಂದೆ ಹಿಂದೂತ್ವ ಕೋಮುವಾದದ ಪೀಡೆ ಕಡಿಮೆ ಇತ್ತು. ಬಜ್ಪೆ, ಮುಲ್ಕಿ ಪ್ರದೇಶಗಳಲ್ಲಿ ಹಿಂದೆ ಹಿಂದೂ–ಮುಸ್ಲಿಮರ ಮಧ್ಯೆ ಉದ್ವಿಗ್ನ ಪರಿಸ್ಥಿತಿ ಉಂಟಾಗಿತ್ತು ಆದರೆ ಮುಸ್ಲಿಂ ಕೋಮುವಾದಿಗಳು ಇತ್ತೀಚೆಗಿನ ವರ್ಷಗಳಲ್ಲಿ ಮೂಡಬಿದ್ರಿ ಆಸುಪಾಸಿನಲ್ಲಿ ಬೆಳೆದಿದ್ದಾರೆ. ಈ ಉದ್ವಿಗ್ನತೆಯನ್ನು ಶಮನಗೊಳಿಸಿ ಸೌಹಾರ್ದದ ಕಾರ್ಯಕ್ರಮವನ್ನು ರೂಪಿಸುವಲ್ಲಿ ಹಿಂದೆ ಶಾಸಕರ ಪ್ರಯತ್ನ ಕಡಿಮೆಯಾಗಿತ್ತು. ಮುಂದೆ ಬರುವ ಶಾಸಕರು ಸೌಹಾರ್ದ ಬಲಪಡಿಸುವ ನಿಟ್ಟಿನಲ್ಲಿ ಜನಸಂಪರ್ಕ ಬೆಳೆಸಿಕೊಳ್ಳಬೇಕಾಗಿದೆ.

ಗ್ರಾಮಾಂತರ ಭಾಗದಲ್ಲಿ ಬೇಸಗೆ ಕಾಲದಲ್ಲಿ ಕುಡಿಯುವ ನೀರಿನ ಬರವಿದೆ. ಮೂಡಬಿದ್ರಿ ಕ್ಷೇತ್ರದ ಉತ್ತರದಲ್ಲಿ ಉಡುಪಿ ಜಿಲ್ಲೆಗೆ ಗಡಿಯಾಗಿ ಶಾಂಭವಿ ನದಿ ಹರಿಯುತ್ತಿದೆ. ಅಲ್ಲದೆ ನಂದಿನಿ ಹೊಳೆಯು ಕಟೀಲು–ಪಾವಂಜೆ ಮೂಲಕ ಸಾಗುತ್ತಿದೆ. ಸರಣಿ ಕಿಂಡಿ ಅಣೆಕಟ್ಟುಗಳ 'ಪಶ್ಚಿಮ ವಾಹಿನಿ' ಯೋಜನೆಯನ್ನು ರಾಜ್ಯ ಸರಕಾರ ಪ್ರಸ್ತಾಪಿಸಿದೆ. ಈ ನದಿಗಳಿಗೆ ಕಿಂಡಿ ಅಣೆಕಟ್ಟು ಕಟ್ಟುವ ಮೂಲಕ ಸಂಗ್ರಹವಾಗುವ ನೀರನ್ನು ಬಹುಗ್ರಾಮ ಕುಡಿಯುವ ನೀರು ಯೋಜನೆಯಲ್ಲಿ ಸಂಗ್ರಹಿಸಿ ಕುಡಿಯುವ ನೀರು ಕೊರತೆ ಇರುವ ಗ್ರಾಮಗಳಿಗೆ ಒದಗಿಸುವ ಯೋಜನೆ ರೂಪಿಸುವಲ್ಲಿ ಶಾಸಕರು ಮುತುವರ್ಜಿ ವಹಿಸಬೇಕಿದೆ.

ಮನಸ್ಸಿದ್ದಲ್ಲಿ ಮಾರ್ಗವಿದೆ. ಮೂಡಬಿದ್ರಿ ಅಸೆಂಬ್ಲಿ ಕ್ಷೇತ್ರದಲ್ಲಿ ಶಾಸಕರಿಗೆ ಹೇರಳ ಕೆಲಸವೂ ಇದ್ದೇ ಇದೆ. ●

ಮೊದಲ ಕಮ್ಯುನಿಸ್ಟ್ ಶಾಸಕರನ್ನು ಚುನಾಯಿಸಿದ್ದ ಕೆ.ಜಿ.ಎಫ್. ಮೀಸಲು ಕ್ಷೇತ್ರ

ಕಮ್ಯುನಿಸ್ಟ್ ಪಕ್ಷದ ಮೊದಲ ಶಾಸಕರನ್ನು ರಾಜ್ಯದ ವಿಧಾನಸಭೆಗೆ ಚುನಾಯಿಸಿ ಕಳುಹಿಸಿದ ಕ್ಷೇತ್ರ ಕೋಲಾರ ಚಿನ್ನದ ಗಣಿ ಪ್ರದೇಶ. ತಮಿಳು ಭಾಷಿಕರೇ ಅಧಿಕವಾಗಿದ್ದ ಕೋಲಾರ ಚಿನ್ನದ ಗಣಿ ಕಾರ್ಮಿಕರನ್ನು ಸಂಘಟಿಸಿ ಅವರ ಬೇಡಿಕೆಗಳಿಗಾಗಿ ಹೋರಾಡುತ್ತಾ ಜಿಲ್ಲೆಯ ರೈತರ ಚಳವಳಿಗೆ ಮಾರ್ಗದರ್ಶನ ನೀಡಿದ ಕಮ್ಯುನಿಸ್ಟ್ ಚಳವಳಿ 'ಕಾರ್ಮಿಕರ ಮತ್ತು ರೈತರ' ಧೀರೋದ್ಧಾತ ಹೋರಾಟಗಳನ್ನು ಸಂಘಟಿಸಿತ್ತು. 1952 ರ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ವಿಧಾನ ಸಭೆಗೆ ಮೊತ್ತ ಮೊದಲ ಕಮ್ಯುನಿಸ್ಟ್ ಶಾಸಕರಾಗಿ ಗಣಿ ಕಾರ್ಮಿಕರ ನೇತಾರ ಕಾ। ಕೆ.ಎಸ್. ವಾಸನ್ ರವರು ಚುನಾಯಿತರಾದರು. ನಂತರ 1957 ರಲ್ಲಿ ಕಾ।ಎಂ.ಸಿ.ನರಸಿಂಹನ್ ಚುನಾಯಿತರಾದರು. ಈ ಎರಡು ಅವಧಿಯಲ್ಲೂ ಕೆ.ಜಿ.ಎಫ್ ಮೀಸಲು ಮತ್ತು ಸಾಮಾನ್ಯ ಎರಡು ಕ್ಷೇತ್ರಗಳಿದ್ದವು. ಈ ಎರಡು ಕ್ಷೇತ್ರಗಳಲ್ಲೂ ಕಮ್ಯುನಿಸ್ಟ್ ಬೆಂಬಲಿತ ಅಭ್ಯರ್ಥಿಗಳು ಮತ್ತು ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳು ಚುನಾಯಿತರಾದರು. 1962 ರಲ್ಲಿ ಎರಡು ಕ್ಷೇತ್ರಗಳ ಬದಲಿಗೆ ಮೀಸಲು ಒಂದೇ ಕ್ಷೇತ್ರವಾದ ನಂತರ ಕಮ್ಯುನಿಸ್ಟ್ ಪಕ್ಷದ ಎಸ್.ರಾಜಗೋಪಾಲ್‌ರವರು ಶಾಸಕರಾಗಿ ಚುನಾಯಿತರಾದರು. ಸಿ.ಪಿ.ಐ. ವಿಭಜನೆಯ ನಂತರ ನಿರಂತರವಾಗಿ ಸ್ಪರ್ಧಿಸುತ್ತಾ ಬಂದಿದ್ದರೂ ಕೂಡಾ 1985 ವರೆಗೆ ಈ ಕ್ಷೇತ್ರದಿಂದ ನಮ್ಮ ಶಾಸಕರು ಗೆದ್ದು ಬರಲಿಲ್ಲ. 1985 ರಲ್ಲಿ ಕಾ। ಟಿ.ಎಸ್. ಮಣಿಯವರು ಅತ್ಯಧಿಕ ಮತಗಳನ್ನು ಪಡೆದು ಶಾಸಕರಾದರು.

ಬಿ.ಜಿ.ಎಂ.ಎಲ್. ಮತ್ತು ಬಿ.ಇ.ಎಂ.ಎಲ್ ಎರಡು ಬೃಹತ್ ಕೇಂದ್ರ ಸರಕಾರೀ ಸ್ವಾಮ್ಯದ ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರು ಸಹಜವಾಗಿಯೇ ಕಮ್ಯುನಿಸ್ಟ್ ಚಳವಳಿಗೆ ಆಕರ್ಷಿತರಾಗಿದ್ದರು. ಕಮ್ಯುನಿಸ್ಟ್ ಪಕ್ಷದ ಶಾಸಕರಿದ್ದಾಗ ಸ್ಥಳೀಯ ಹಲವಾರು ಮೂಲಭೂತ ಸಮಸ್ಯೆಗಳನ್ನು ಪರಿಹರಿಸಲಾಯಿತಲ್ಲದೆ. ಕಾರ್ಮಿಕರ ಹಲವು ಬೇಡಿಕೆಗಳು ಈಡೇರಿದವು.

ಆದರೆ ಕಳೆದ 17 ವರ್ಷಗಳ ಹಿಂದೆ ಭಾರತ್ ಗೋಲ್ಡ್ ಮೈನ್ಸ್ ಮುಚ್ಚಿದ ನಂತರ ಕಾರ್ಮಿಕರು ಉದ್ಯೋಗ ಕಳೆದುಕೊಂಡರು, ಮಾತ್ರವಲ್ಲದೆ ಬೇರೆ ಯಾವುದೇ ಉದ್ಯೋಗಗಳಿಲ್ಲದೆ ಬೇರೆ ಊರುಗಳಿಗೆ ವಲಸೆ ಹೋಗುವಂತಾಯಿತು. ಬಿ.ಇ.ಎಂ.ಎಲ್ ಕಾರ್ಖಾನೆಯಲ್ಲೂ ಉದ್ಯೋಗಾವಕಾಶಗಳು ಕಡಿಮೆಯಾಗಿ ಖಾಸಗೀಕರಣಕ್ಕೆ ಒಳಗಾಗುವ ಅಪಾಯ ತಲುಪಿದೆ. ಈ ಎರಡು ಕೈಗಾರಿಕೆಗಳನ್ನು ನಂಬಿದ್ದ ಆಸುಪಾಸಿನ ಗ್ರಾಮಾಂತರ ಪ್ರದೇಶದ ರೈತರು ಕಂಗಾಲಾದರು. ಇನ್ನೊಂದೆಡೆ ಕೃಷಿಗೆ ಮತ್ತು ಕುಡಿಯುವ ನೀರಿನ ಸಮಸ್ಯೆ.

ಕೆಲವು ಗಾರ್ಮೆಂಟು ಕಂಪೆನಿಗಳನ್ನು ಬಿಟ್ಟರೆ ಇತರ ಯಾವುದೇ ಕೈಗಾರಿಕೆಗಳು ಇಲ್ಲಿ ಸ್ಥಾಪನೆಯಾಗಿಲ್ಲ,



ಹಾಗಾಗಿ ಸುಮಾರು ಹದಿನೈದು ಸಾವಿರಕ್ಕೂ ಮೇಲ್ಪಟ್ಟ ಯುವಜನ ರೈಲುಗಳಲ್ಲಿ ಪ್ರತಿದಿನ ಬೆಂಗಳೂರಿಗೆ ಸಣ್ಣ ಪುಟ್ಟ ಉದ್ಯೋಗಗಳಿಗಾಗಿ ಪ್ರಯಾಣಿಸಿ ಬರುತ್ತಿದ್ದಾರೆ.

ಮಾಜಿ/ಹಾಲಿ ಶಾಸಕರು:

ಹಿಂದೆ ಶಾಸಕರಾಗಿದ್ದ ಅಣ್ಣಾ ಡಿ.ಎಂ.ಕೆ.ಪಕ್ಷದ – ನಂತರದಲ್ಲಿ ಜೆ.ಡಿ.ಎಸ್. ಸೇರಿಕೊಂಡ ಭಕ್ತವತ್ಸಲಂರವರು 3 ಬಾರಿ ಶಾಸಕರಾಗಿದ್ದು ಕ್ಷೇತ್ರದಲ್ಲಿ ಅಂತಹ ಅಭಿವೃದ್ದಿ ಕಾರ್ಯಗಳನ್ನು ಮಾಡದೆ ಜನರಿಂದ ದೂರವಾಗಿದ್ದಾರೆ. ಅವರೂ ಈ ಬಾರಿ ಜೆ.ಡಿ.ಎಸ್. ನ ಅಭ್ಯರ್ಥಿ ಆರ್.ಪಿ.ಐ. ಪಕ್ಷದ ಎಸ್.ರಾಜೇಂದ್ರನ್ ರವರು ದೊಡ್ಡ ದೊಡ್ಡ ಭರವಸೆಗಳನ್ನು ನೀಡಿ ಜನರಿಂದ ಮತ ಪಡೆದು ಶಾಸಕರಾಗಿ ಗೆದ್ದಿದ್ದರೂ, ಎಲ್ಲಾ ಭರವಸೆಗಳು ಹುಸಿಯಾಗಿ ನಂತರದ ಚುನಾವಣೆಗಳಲ್ಲಿ ಸೋತು ಹೋದರು. ಈಗ ಅವರು ಆರ್.ಪಿ.ಐ. ಅಭ್ಯರ್ಥಿ

ಹಾಲಿ ಶಾಸಕರು:

ಕ್ಷೇತ್ರ ಮರುವಿಂಗಡನೆಯಾಗಿ ಕೆ.ಜಿ.ಎಫ್ ಕ್ಷೇತ್ರಕ್ಕೆ ಗ್ರಾಮಾಂತರ ಪ್ರದೇಶಗಳೂ ಸೇರಿದ ನಂತರ. ಬೆಂಗಳೂರು ಆನೇಕಲ್‌ನಿಂದ ವೈ. ಸಂಪಂಗಿಯವರು ಇಲ್ಲಿ ಬಿ.ಜೆ.ಪಿ. ಪಕ್ಷದ ಅಭ್ಯರ್ಥಿಯಾಗಿ ಗ್ರಾಮಾಂತರ ಪ್ರದೇಶದ ಜನರನ್ನು ಭಾಷೆಯ ಹೆಸರಲ್ಲಿ ಎತ್ತಿಕಟ್ಟಿ ಚುನಾವಣೆಯಲ್ಲಿ ಗೆದ್ದುಬಂದರು. ಗೆದ್ದು ಬಂದ ಒಂದೇ ವರ್ಷದಲ್ಲಿ ವಿಧಾನಸೌಧದಲ್ಲೇ ಲಂಚ ಪಡೆದ ಕುಖ್ಯಾತಿಯಿಂದ ಮುಂದಿನ ಬಾರಿಗೆ ಸೀಟು ಸಿಗದೆ ತಮ್ಮ ತಾಯಿಯವರಾದ ಶ್ರೀಮತಿ ರಾಮಕ್ಕ ರವರನ್ನು ಬಿ.ಜೆ.ಪಿ ಪಕ್ಷದಿಂದ ಗೆಲ್ಲಿಸಿಕೊಂಡರು. ಕೆ.ಜಿ.ಎಫ್ ಕ್ಷೇತ್ರದಲ್ಲಿ ಅಲ್ಲೊಂದು ಇಲ್ಲೊಂದು ರಸ್ತೆಗಳನ್ನು ಬಿಟ್ಟರೆ ಬೇರೆ ಯಾವುದೇ ಅಭಿವೃದ್ಧಿ ಕಾರ್ಯಗಳು ಕಾಣದಾಗಿದೆ. ಸಾಲದ್ದಕ್ಕೆ ವೈ.ಸಂಪಂಗಿಯವರ ಮಗಳು ಜಿಲ್ಲಾ ಪಂಚಾಯಿತಿ ಸದಸ್ಯೆ. ಈ ಬಾರಿ ವೈ. ಸಂಪಂಗಿಯವರ ಮಗಳು ಅಶ್ವಿನಿ ಬಿ.ಜೆ.ಪಿ. ಪಕ್ಷದ ಅಭ್ಯರ್ಥಿ, ಅವರು ಮೊದಲ ಬಾರಿ ಶಾಸಕರಾಗಿದ್ದಾಗ ಗೋಮಾಂಸ ನಿಷೇಧದ ವಿಚಾರವನ್ನು ಮುಂದಿಟ್ಟು ಜನರಿಂದ ಛೀಮಾರಿ ಹಾಕಿಸಿಕೊಂಡಿದ್ದರು.

ಈ ಬಾರಿಯೂ ಅವರಿಗೆ ಟಿಕೆಟ್ ನೀಡಿದ್ದರಿಂದ ಮುನಿಸಿಕೊಂಡಿರುವ ಸ್ಥಳೀಯ ಬಿ.ಜೆ.ಪಿ. ಮುಖಂಡರು ಅವರನ್ನು ಬೆಂಬಲಿಸುವುದಿಲ್ಲವೆಂದು ಬಹಿರಂಗ ಹೇಳಿಕೆ ನೀಡಿದ್ದಾರೆ ಮಾತ್ರವಲ್ಲದೆ ಒಂದು ಗುಂಪು ಕಾಂಗ್ರೇಸ್ ಪಕ್ಷಕ್ಕೆ ಸೇರಿದೆ.



ಕಾಂಗ್ರೇಸ್ ಅಭ್ಯರ್ಥಿ:

ಸತತವಾಗಿ ಏಳು ಬಾರಿಗೆ ಸಂಸತ್ ಸದಸ್ಯರಾಗಿರುವ ಕೋಲಾರ ಜಿಲ್ಲೆಯಲ್ಲಿ ಯಾವುದೇ ಅಭಿವೃದ್ದಿ ಕಾರ್ಯಗಳನ್ನು ಮಾಡದ ಆದರೆ ಕಾಂಗ್ರೇಸ್‌ನೊಳಗೆ ಪ್ರಭಾವ ಬೀರಬಲ್ಲ ಕೆ.ಹೆಚ್.ಮುನಿಯಪ್ಪ ನವರ ಮಗಳು ಶ್ರೀಮತಿ ಡಿ.ರೂಪಾ ಶಶಿಧರ್ ಕಾಂಗ್ರೇಸ್ ಅಭ್ಯರ್ಥಿ. ಹಿಂದಿನಿಂದಲೂ ಕಾಂಗ್ರೇಸ್ ಪಕ್ಷಕ್ಕೆ ಈ ಕ್ಷೇತ್ರದಲ್ಲಿ ಹೆಚ್ಚಿನ ಪ್ರಭಾವವಿಲ್ಲ. ಭಿನ್ನಾಭಿಪ್ರಾಯ ತೋರಿದ ಸ್ಥಳೀಯ ಮುಖಂಡರನ್ನು ಕೆ.ಹೆಚ್. ಮುನಿಯಪ್ಪನವರು ಸಮಾಧಾನ ಪಡಿಸಿದ್ದಾರೆ. ಇವರು ಸಂಸದರಾಗಿದ್ದಾಗಲೇ ಬಿ.ಜಿ.ಎಂ.ಎಲ್ ಮುಚ್ಚಿದ್ದು, ಈಗ ಬಿ.ಇ.ಎಂ.ಎಲ್. ಖಾಸಗೀಕರಣ ಗೊಳ್ಳುತ್ತಿರುವುದು.

ಸಿ.ಪಿ.ಐ.(ಎಂ) ಪಕ್ಷದ ಅಭ್ಯರ್ಥಿ ಕಾ।ಪಿ.ತಂಗರಾಜ್

ಚಿನ್ನದ ಗಣಿ ಕಾರ್ಮಿಕ ಕುಟುಂಬದಲ್ಲಿ ಜನಿಸಿದ ಕಾ।ಪಿ.ತಂಗರಾಜ್ ರವರು ಬಿ.ಎಸ್.ಸಿ., ಎಲ್.ಎಲ್.ಬಿ ಪದವಿದರರು. 45 ವರ್ಷ ವಯಸ್ಸಿನ ಈ ಯುವ ಸಂಗಾತಿ ವಿದ್ಯಾರ್ಥಿಯಾಗಿದ್ದಾಗಲೇ ಎಸ್.ಎಫ್.ಐ ಸಂಘಟನೆಯನ್ನು ಕಟ್ಟಿ ಕೆ.ಜಿ.ಎಫ್, ಕೋಲಾರ ಜಿಲ್ಲೆಗೆ ನೇತೃತ್ವ ನೀಡಿದವರು. ವಿದ್ಯಾರ್ಥಿಗಳ ಹಲವಾರು ಹೋರಾಟಗಳಿಗೆ ಮುಖಂಡತ್ವ ವಹಿಸಿದ್ದರು. 2000 ದಿಂದ 2002 ತನಕ 2 ವರ್ಷಗಳ ಕಾಲ ಪ್ರತಿದಿನ ಪ್ರಯಾಣಿಸಿ ಬೆಂಗಳೂರಿನಲ್ಲಿ ಉದ್ಯೋಗ ಮಾಡಿದರು. ನಂತರ 2002 ರಿಂದ ಸಿ.ಪಿ.ಐ.(ಎಂ) ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾಗಿ ದುಡಿಯುತ್ತಿದ್ದಾರೆ. ಡಿ.ವೈ.ಎಫ್.ಐ. ಸಂಘಟನೆಯ ಬಂಗಾರಪೇಟೆ ತಾಲೂಕು ಕಾರ್ಯದರ್ಶಿಯಾಗಿ, ಜಿಲ್ಲಾ ಸಮಿತಿ ಅಧ್ಯಕ್ಷರಾಗಿ, ರಾಜ್ಯಸಮಿತಿ ಉಪಾಧ್ಯಕ್ಷರಾಗಿ, ಹಲವಾರು ಹೋರಾಟಗಳನ್ನು ಸಂಘಟಿಸಿ ನೇತೃತ್ವ ನೀಡಿರುತ್ತಾರೆ.


ಸದ್ಯ ಕೆ.ಜಿ.ಎಫ್ ತಾಲೂಕು ಸಮಿತಿಯ ಕಾರ್ಯದರ್ಶಿಯಾಗಿ, ಕೋಲಾರ ಜಿಲ್ಲಾ ಸಮಿತಿ ಸದಸ್ಯರಾಗಿರುವ ಕಾ।ಪಿ.ತಂಗರಾಜ್ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ನಡೆಸುವ ಹೋರಾಟಗಳಿಗೆ, ಸಂಘಟನೆಗಳಿಗೆ ನೇತೃತ್ವ–ಮಾರ್ಗದರ್ಶನ ನೀಡುತ್ತಿದ್ದಾರೆ. ಪ್ರಮುಖವಾಗಿ ನಿರುದ್ಯೋಗ ಸಮಸ್ಯೆ, ಉದ್ಯೋಗ ಖಾತ್ರಿ ಸಮರ್ಪಕ ಜಾರಿಗಾಗಿ, ವಸತಿರಹಿತರಿಗೆ ಮನೆ ನಿವೇಶನಕ್ಕಾಗಿ, ಬಿ.ಜಿ.ಎಂ.ಎಲ್ ಗಣಿಯನ್ನು ಪುನರಾರಂಭಿಸುವ ಸಲುವಾಗಿ ಮತ್ತು ಶತಮಾನಗಳಿಂದ ಬಿ.ಜಿ.ಎಂ.ಎಲ್. ಕಾರ್ಮಿಕರು ವಾಸಿಸುತ್ತಿರುವ ಮನೆಗಳು ಅವರ ಸ್ವಂತಕ್ಕೆ ಮಾಡಿಕೊಡಬೇಕೆಂಬ ಬೇಡಿಕೆಗಳಿಗಾಗಿ ನಡೆದ ಹೋರಾಟದಲ್ಲಿ ಮುಂಚೂಣಿ ಪಾತ್ರ ವಹಿಸಿದ್ದಾರೆ. ಚಿನ್ನದ ಗಣಿಯ ಆರಂಭದಿಂದಲೂ ಸಂಚರಿಸುತ್ತಿರುವ ಸ್ವರ್ಣ ರೈಲನ್ನು ರದ್ದುಗೊಳಿಸಲು ಇತ್ತೀಚೆಗೆ ಪ್ರಯತ್ನಿಸಿದಾಗ ಕಾ।ಪಿ.ತಂಗರಾಜ್ ನೇತೃತ್ವದಲ್ಲಿ ನಡೆದ ಬೃಹತ್ ಹೋರಾಟದಿಂದಾಗಿ ಆ ಪ್ರಯತ್ನ ಕೈ ಬಿಡುವಂತಾಯಿತು.

ಬಿ.ಜಿ.ಎಂ.ಎಲ್ ಕಾರ್ಮಿಕ ಸಂಘಟನೆಯ ಪದಾಧಿಕಾರಿಯಾಗಿ, ಆಟೋ ಚಾಲಕರ ಸಂಘದ ಕೆ.ಜಿ.ಎಫ್ ಘಟಕದ ಅಧ್ಯಕ್ಷರಾಗಿ, ರಾಜ್ಯ ಮಟ್ಟದ ಆಟೋ ಚಾಲಕರ ಫೇಡರೇಷನ್‌ನ ಉಪಾಧ್ಯಕ್ಷರಾಗಿ ಹಾಗೂ ಕೋಲಾರ ಜಿಲ್ಲಾ ಸಿ.ಐ.ಟಿ.ಯು.ವಿನ ಪದಾಧಿಕಾರಿಯಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ಕೆ.ಜಿ.ಎಫ್ ಪುರಸಭೆಯಲ್ಲಿ ಸಿಪಿಐ(ಎಂ)ನ ಒಬ್ಬರು ಮಹಿಳಾ ಪುರಸಭಾ ಸದಸ್ಯರಿದ್ದಾರೆ. ಇತರ ಪಕ್ಷಗಳ ಅಭ್ಯರ್ಥಿಗಳ ಹಣದ ಅಬ್ಬರ ಮಧ್ಯೆ ಯುವಜನರನ್ನೂ, ಪಕ್ಷದ ಸಂಗಾತಿಗಳನ್ನು ಜೊತೆಮಾಡಿಕೊಂಡು ತಾಲೂಕು ಸಮಿತಿಯು ಚಿನ್ನದ ಗಣಿ ಪ್ರದೇಶದಲ್ಲಿ ವ್ಯಾಪಕವಾಗಿ ಪ್ರಚಾರಕಾರ್ಯ ನಡೆಸುತ್ತಿದೆ. ಸಿ.ಪಿ.ಐ.(ಎಂ)ಪಕ್ಷದ ಬಗ್ಗೆ ಜನರಿಗೆ ಇರುವ ಗೌರವ ಅಭಿಮಾನಗಳನ್ನು ಮತಗಳಾಗಿ ಪರಿವರ್ತಿಸಲು ನಿರಂತರವಾಗಿ ಕೆಲಸ ಮಾಡಲಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಕರ್ನಾಟಕ ಪ್ರಾಂತ ಸಂಘದ ಘಟಕಗಳ ಮೂಲಕ ಸಂಗಾತಿಗಳು ಚುನಾವಣಾ ಕಾರ್ಯದಲ್ಲಿ ತೊಡಗುತ್ತಾರೆ. ಹಲವಾರು ಸಮಸ್ಯೆಗಳಿರುವ ಈ ಕ್ಷೇತ್ರದಲ್ಲಿ ಕಾ। ಪಿ. ತಂಗರಾಜ್‌ರವರು ಸಿ.ಪಿ.ಐ.(ಎಂ) ಪಕ್ಷದ ಅಭ್ಯರ್ಥಿಯಾಗಿದ್ದಾರೆ.

ವರದಿ: ಅಚ್ಯುತ

ಬಾಗೇಪಲ್ಲಿಯಲ್ಲಿ ಜಿ.ವಿ.ಶ್ರೀರಾಮರೆಡ್ಡಿ ನಾಮಪತ್ರ ಸಲ್ಲಿಕೆ



ಏಪ್ರಿಲ್ 19 ರಂದು ಬಾಗೇಪಲ್ಲಿಯಲ್ಲಿ ಸಿಪಿಐಎಂನಿಂದ ಮಾಜಿ ಶಾಸಕರೂ ಸಿಪಿಐಎಂನ ರಾಜ್ಯ ಕಾರ್ಯದರ್ಶಿಗಳಾದ ಜಿ.ವಿ. ಶ್ರೀರಾಮರೆಡ್ಡಿಯವರು ಬೆಳಿಗ್ಗೆ 11.30 ಕ್ಕೆ ಬಾಗೇಪಲ್ಲಿಯ ತಾಲ್ಲೂಕು ಕಛೇರಿಯಲ್ಲಿ ಚುನಾವಣಾ ಅಧಿಕಾರಿಗಳಿಗೆ ನಾಮಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಪಕ್ಷದ ಬಾಗೇಪಲ್ಲಿ ತಾಲ್ಲೂಕು ಕಾರ್ಯದರ್ಶಿ ಚನ್ನರಾಯಪ್ಪ, ಗುಡಿಬಂಡೆ ತಾಲ್ಲೂಕು ಕಾರ್ಯದರ್ಶಿ ಹೆಚ್.ಪಿ. ಲಕ್ಷ್ಮಿನಾರಾಯಣ, ರೈತ ಮುಖಂಡರಾದ ಪಿ. ಮಂಜುನಾಥರೆಡ್ಡಿ ಮತ್ತು ಚುನಾವಣಾ ಏಜೆಂಟ್ ಗೋವರ್ದನಾ ಚಾರಿ ಇದ್ದರು.

ನಾಮಪತ್ರ ಸಲ್ಲಿಕೆಯಾದ ನಂತರ ಸಾವಿರಾರು ಜನ ಕೆಂಪು ಸಮವಸ್ತ್ರಧಾರಿಗಳ ಬೃಹತ್ ಮೆರವಣಿಗೆಯನ್ನ ಪಟ್ಟಣದ ನ್ಯಾಷನಲ್ ಕಾಲೇಜಿನಿಂದ ಶಾದಿಮಹಲ್ ವರೆಗೆ ಮೆರವಣಿಗೆ ನಡೆಸಲಾಯಿತು.

– ವರದಿ: ಚನ್ನರಾಯಪ್ಪ



ಕಥುವಾ ದೌರ್ಜನ್ಯ, ನಂತರದ ಬೆಳವಣಿಗೆಗಳು




ಹಾಡಹಗಲೇ ಒಬ್ಬ ಬಾಲಕಿಯ ಕ್ರೂರ ಅಪಹರಣ, ಸಾಮೂಹಿಕ ಅತ್ಯಾಚಾರ, ಬರ್ಬರ ಕೊಲೆ ಮತ್ತು ಅದನ್ನು ನಡೆಸಿದ ಕ್ರಿಮಿನಲ್‌ಗಳ ಪರವಾಗಿ ವಕೀಲರು, ಸಚಿವರು ಮತ್ತು ಸಂಘ ಪರಿವಾರದ ಇತರ ಬೆಂಬಲಿಗರಿಂದ ಭಾರಿ ಸಂಖ್ಯೆಯಲ್ಲಿ ಬೆಂಬಲವನ್ನು ಕ್ರೋಡೀಕರಿಸುತ್ತಿರುವುದು ಇಡೀ ನ್ಯಾಯವ್ಯವಸ್ಥೆಯನ್ನೇ ನಿಷ್ಕ್ರಿಯಗೊಳಿಸುವ ಅಪಾಯವನ್ನು ಒಳಗೊಂಡಿದೆ. ಈ ಎಲ್ಲಾ ಬೆಳವಣಿಗೆಗಳು ನಮ್ಮ ರಾಜಕೀಯ ವ್ಯವಸ್ಥೆಯ ಜಾತ್ಯತೀತ ಮತ್ತು ಜನತಾಂತ್ರಿಕ ಚೌಕಟ್ಟಿನ ಸಂಪೂರ್ಣ ಕುಸಿತದ ದುಷ್ಟ ಲಕ್ಷಣಗಳಾಗಿವೆ.

ಜಾತ್ಯತೀತ, ಜನತಾಂತ್ರಿಕ ಚೌಕಟ್ಟಿನ ಸಂಪೂರ್ಣ ಕುಸಿತದ ಮುನ್ಸೂಚನೆ

* ಪ್ರಕಾಶ್ ಕಾರಟ್



ಇತ್ತೀಚಿನ ದಿನಗಳಲ್ಲಿ ಅಪ್ರಾಪ್ತ ವಯಸ್ಸಿನವರ ಮೇಲೆ ನಡೆಯುತ್ತಿರುವ ಅತ್ಯಾಚಾರಗಳು ದೇಶದಾದ್ಯಂತ ಕ್ರೋಧ, ರೇಜಿಗೆ ಮತ್ತು ಹತಾಶೆಗಳನ್ನು ಹುಟ್ಟುಹಾಕಿದೆ. ಉದಾಹರಣೆಗಾಗಿ ಕೆಲವು ಅಪರಾಧಗಳ ವಿವರಗಳನ್ನು ಗಮನಿಸೋಣ: ಸೂರತ್‌ನಲ್ಲಿ 11 ವರ್ಷದ ಬಾಲಕಿ ಮೇಲೆ ಅತ್ಯಾಚಾರ, ಹರ್ಯಾಣದಲ್ಲಿ ಒಂಬತ್ತು ವರ್ಷದ ಬಾಲಕಿ ಮೇಲಿನ ಅತ್ಯಾಚಾರ ಹಾಗೂ ಕೊಲೆ; ಈ ಬಾಲಕಿಯ ಉಧ್ವಸ್ತ ದೇಹ ಆನಂತರ ಪತ್ತೆಯಾಯಿತು. ಈ ಪ್ರಕರಣಗಳ ಇನ್ನಷ್ಟು ವಿವರಗಳು ಬಹಿರಂಗವಾಗಬೇಕಿದೆಯಷ್ಟೆ.



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಆದರೆ, ಉತ್ತರ ಪ್ರದೇಶದ ಉನ್ನಾವೊದಲ್ಲಿ 17 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಮತ್ತು ಜಮ್ಮುವಿನಲ್ಲಿ ಎಂಟು ವರ್ಷದ ಹೆಣ್ಣು ಮಗುವಿನ ಮೇಲೆ ನಡೆದ ಘೋರ ಅತ್ಯಾಚಾರ ಮತ್ತು ಕೊಲೆ ಇಡೀ ದೇಶದ ಅಂತಃಸಾಕ್ಷಿಯನ್ನು ಕಲಕಿದೆ.

ಉನ್ನಾವೊದಲ್ಲಿ ಒಬ್ಬ ಬಿಜೆಪಿ ಶಾಸಕ ಅತ್ಯಾಚಾರ ನಡೆಸಿದ್ದಾಗಿ ಸಂತ್ರಸ್ತೆ ಹೆಸರಿಸಿದ್ದಾಳೆ. ಆಕೆಯ ತಂದೆಯನ್ನು ಕೊಲೆ ಮಾಡಲಾಗಿದೆ. ಇದಕ್ಕೆ ಉತ್ತರಪ್ರದೇಶ ಪೊಲೀಸರು ಮತ್ತು ಅತ್ಯಾಚಾರಿ ಶಾಸಕನ ಸೋದರ ಆರೋಪಿಗಳೆಂದು ಹೇಳಲಾಗಿದೆ. ಅವರನ್ನು ಜೈಲಿಗಟ್ಟಲಾಗಿದೆ.

ಜಮ್ಮುವಿನ ಕಥುವಾದಲ್ಲಿ ಒಬ್ಬ ಮುಗ್ಧ ಮಗುವಿನ ಅತ್ಯಾಚಾರ ಮತ್ತು ಕೊಲೆ ಒಂದು ವಿಭಿನ್ನ ಪ್ರಕರಣವಾಗಿದ್ದು ತುಂಬಾ ಸೂಕ್ಷ್ಮ ರಾಜ್ಯವಾದ ಜಮ್ಮು ಮತ್ತು ಕಾಶ್ಮೀರದಲ್ಲಿ ಭಾರೀ ಕೋಲಾಹಲ ಸೃಷ್ಟಿಸುವ ಸಾಧ್ಯತೆ ಹೊಂದಿದೆ ಮಾತ್ರವಲ್ಲದೆ ಈಗಾಗಲೇ ಭಾರೀ ಒತ್ತಡಕ್ಕೆ ಸಿಲುಕಿರುವ ದೇಶದ ಸಾಮಾಜಿಕ ಹಂದರವನ್ನು ಚಿಂದಿ ಮಾಡುವ ಅಪಾಯವಿದೆ.

ಕಥುವಾ ಪ್ರಕರಣದ ಸಂತ್ರಸ್ತೆ ಮುಸ್ಲಿಂ ಗುಜ್ಜರ್ ಅಲೆಮಾರಿ ಸಮುದಾಯವಾದ ಬಕರೇವಾಲ್ ಸಮುದಾಯಕ್ಕೆ ಸೇರಿದ ಬಾಲಕಿ. ಈ ಸಮುದಾಯದವರು ಚಳಿಗಾಲದ ತಿಂಗಳುಗಳಲ್ಲಿ ತಮ್ಮ ಜಾನುವಾರುಗಳ ಹಿಂಡುಗಳೊಂದಿಗೆ ಜಮ್ಮು ಸುತ್ತಮುತ್ತಲಿನ ಕಾಡುಗಳಿಗೆ ಹೋಗುತ್ತಾರೆ. ಅರಣ್ಯವಾಸಿಗಳ ಕಾನೂನಿನ ಅನ್ವಯ ತಮಗೆ ಈ ಜಮೀನಿನ ಪಟ್ಟಾ ಕೊಡಬೇಕೆಂದು ಇವರು ಬಹಳ ಸಮಯದಿಂದ ಕೇಳುತ್ತಿದ್ದಾರೆ. ಆದರೆ ಪ್ರಭಾವಶಾಲಿ ಸ್ಥಾಪಿತ ಹಿತಾಸಕ್ತಿಗಳು ಈ ಜಮೀನನ್ನು ಅತಿಕ್ರಮಣ ಮಾಡಿ ಕಬಳಿಸಿದ್ದಾರೆ. ನಿಜ, ರಾಜ್ಯದಲ್ಲಿ ಬಿಜೆಪಿ–ಪಿಡಿಪಿ ಸರಕಾರ ಆಡಳಿತ ವಾತಾವರಣವನ್ನು ಕುಲಗೆಡಿಸಿದೆ. ಅದು ವಿವಿಧ ಮುಸ್ಲಿಂ ಸಮುದಾಯಗಳನ್ನು ಬಲವಂತದಿಂದ ಹೊರಗಟ್ಟುವ ನಿಟ್ಟಿನಲ್ಲಿ ವಿಷಮಯ ಪ್ರಚಾರ ನಡೆಸಲು ಬಹುಸಂಖ್ಯಾತ ಕೋಮುವಾದಿ ಶಕ್ತಿಗಳಿಗೆ ಲೈಸೆನ್ಸ್ ನೀಡಿದಂತಾಗಿದೆ.

ಬಾಲಕಿ ಮೇಲೆ ಆಕ್ರಮಣವನ್ನು ಯೋಜಿಸಿ ಅದನ್ನು ಕಾರ್ಯಗತಗೊಳಿಸಿದ ಸಂಜಿ ರಾಮ್ ದ್ವೇಷ–ಭಾಷಣಗಳಿಗೆ ಕುಖ್ಯಾತನಾದ ವ್ಯಕ್ತಿ. ಆತ ಒಬ್ಬ ನಿವೃತ್ತ ಸರಕಾರಿ ಅಧಿಕಾರಿ. ಆತ ಒಂದು ದೇವಸ್ಥಾನ ಕಟ್ಟಿ ಅದರ ಅರ್ಚಕನಾಗಿದ್ದಾನೆ. ತನ್ನ ಒಬ್ಬ ಅಪ್ರಾಪ್ತ ವಯಸ್ಸಿನ ಸೋದರಳಿಯನನ್ನು ಪುಸಲಾಯಿಸಿ ಬಾಲಕಿಯನ್ನು ಆತನ ಗೆಳೆಯನೊಂದಿಗೆ ಸೇರಿ ಅಪಹರಿಸುವಂತೆ ಹಾಗೂ ಆಕೆಗೆ ಮತ್ತು ಬರುವ ಔಷಧಿ ಕುಡಿಸುವಂತೆ ಮಾಡಿದ. ಜನವರಿ 10ರಂದು ಈ ಕೃತ್ಯ ನಡೆಸಲಾಗಿತ್ತು. ಅಪಹರಿಸಿ ತಂದ ಬಾಲಕಿ ಮೇಲೆ ಅತ್ಯಾಚಾರ ನಡೆಸಿದ ಮೇಲೆ ಆಕೆಯನ್ನು ದೇವಸ್ಥಾನದಲ್ಲಿ ಕೂಡಿ ಹಾಕಲಾಗಿತ್ತು. ಅಲ್ಲಿ ಎಂಟು ದಿನಗಳ ಕಾಲ ದೌರ್ಜನ್ಯ ಮುಂದುವರಿಯಿತು. ಇಬ್ಬರು ಪೊಲೀಸರು ಕೂಡ ಈ ಹೇಯ ಕೃತ್ಯದಲ್ಲಿ ಭಾಗಿಯಾದರು.

ಈ ಪ್ರಕರಣದ ಬಗ್ಗೆ ತನಿಖೆ ನಡೆಸುತ್ತಿದ್ದಾಗಲೇ ಜಮ್ಮುವಿನಲ್ಲಿ ರಾಜ್ಯದ ಇಬ್ಬರು ಬಿಜೆಪಿ ಸಚಿವರ ಸಹಿತ ಸಂಘ ಪರಿವಾರದ ಸದಸ್ಯರು ಕೋಮುವಾದಿ ಭಾವನೆಗಳನ್ನು ವಿಪರೀತವಾಗಿ ಕೆರಳಿಸಿದ್ದಾರೆ.

ಕಥುವಾ ಪ್ರಕರಣ ನಮ್ಮ ದೇಶದ ಎಲ್ಲಾ ನಾಗರಿಕರಿಗೆ ಒಂದು ಗಂಭೀರ ಎಚ್ಚರಿಕೆಯಾಗಿದೆ. ಒಂದಾದ ಮೇಲೊಂದರಂತೆ ಕಾನೂನನ್ನು ಬುಡಮೇಲು ಮಾಡಲಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಮುಸ್ಲಿಂ ಅಲ್ಪಸಂಖ್ಯಾತರು ಮತ್ತು ದಲಿತ ಸಮುದಾಯದ ಜನರು ಇದರಿಂದ ಅತಿ ಹೆಚ್ಚಿನ ತೊಂದರೆಗೆ ಒಳಗಾಗಿದ್ದಾರೆ.

ಅದೇನೇ ಇರಲಿ. ಕಥುವಾ ಪ್ರಕರಣವಂತೂ ಸರಿಸಾಟಿಯಿಲ್ಲದ್ದು. ಹಾಡಹಗಲೇ ಒಬ್ಬ ಬಾಲಕಿಯ ಕ್ರೂರ ಅಪಹರಣ, ಸಾಮೂಹಿಕ ಅತ್ಯಾಚಾರ ಮತ್ತು ಬರ್ಬರ ಕೊಲೆ ಮತ್ತು ಅದನ್ನು ನಡೆಸಿದ ಕ್ರಿಮಿನಲ್‌ಗಳ ಪರವಾಗಿ ವಕೀಲರು, ಸಚಿವರು ಮತ್ತು ಸಂಘ ಪರಿವಾರದ ಇತರ ಬೆಂಬಲಿಗರಿಂದ ಭಾರಿ ಸಂಖ್ಯೆಯಲ್ಲಿ ಬೆಂಬಲವನ್ನು ಕ್ರೋಡೀಕರಿಸಲಾಗುತ್ತಿದೆ. ಈ ಪ್ರಕ್ರಿಯೆ ಇಡೀ ನ್ಯಾಯವ್ಯವಸ್ಥೆಯನ್ನೇ ಶಕ್ತಿಹೀನಗೊಳಿಸುವ ಅಪಾಯವನ್ನು ಒಳಗೊಂಡಿದೆ. ಈ ಎಲ್ಲಾ ಬೆಳವಣಿಗೆಗಳು ನಮ್ಮ ರಾಜಕೀಯ ವ್ಯವಸ್ಥೆಯ ಜಾತ್ಯತೀತ ಮತ್ತು ಜನತಾಂತ್ರಿಕ ಚೌಕಟ್ಟಿನ ಸಂಪೂರ್ಣ ಕುಸಿತದ ದುಷ್ಟ ಮುನ್ಸೂಚನೆಗಳಾಗಿವೆ.

ನಮ್ಮೆಲ್ಲ ಶಕ್ತಿಯನ್ನು ಕ್ರೋಡೀಕರಿಸಿ ಇದರ ವಿರುದ್ಧ ಹೋರಾಡಬೇಕಾಗಿದೆ.

ಅನು: ವಿಶ್ವ

ಪುಟ 2 ರಿಂದ

ಕರಡು ರಾಷ್ಟ್ರೀಯ ಅರಣ್ಯ ಧೋರಣೆ, 2018 ನ್ನು ಹಿಂತೆಗೆದುಕೊಳ್ಳಬೇಕು–ಸಿಪಿಐ(ಎಂ)

ಅಂತಹ ಕಾಳಜಿಯೇನೂ ಇಲ್ಲ.

3. **ಅರಣ್ಯೀಕರಣಕ್ಕೆ ಭೂಮಿಯ ಪ್ರಶ್ನೆಯಲ್ಲಿ ಅಸ್ಪಷ್ಟತೆ:** ಇದು ಅರಣ್ಯಗಳ ಹೊರಗೆ ಪ್ಲಾಂಟೇಶನ್‌ಗಳು ಎಂದು ಹೇಳಿದ್ದರೂ, ಹಲವೆಡೆಗಳಲ್ಲಿ ಈಗ ಇರುವ ಅರಣ್ಯಗಳಲ್ಲಿ, ಅರಣ್ಯ ನಿಗಮಗಳ ವ್ಯಾಪ್ತಿಯಲ್ಲಿರುವ ಸ್ಥಳಗಳಲ್ಲಿ ಅರಣ್ಯೀಕರಣದ ಮಾತಾಡುತ್ತದೆ. ವಾಸ್ತವವಾಗಿ ಮೇಲೆ ಹೇಳಿದ ಸಿಎಎಫ್‌ಎ ಜಾರಿಯ ಅನುಭವಗಳು ಇದನ್ನು ಪುಷ್ಟೀಕರಿಸುತ್ತವೆ. ಇಂತಹ ತೋಟಗಳಿಗೆ ಗ್ರಾಮಸ್ಥರ ಪ್ರತಿಭಟನೆಗಳು, ಅದನ್ನು ದಮನ ಮಾಡುವ ಸರಕಾರೀ ಏಜೆಂಸಿಗಳ ಪ್ರಯತ್ನಗಳನ್ನು ಮರೆಮಾಚಿರುವ ಈ ದಸ್ತಾವೇಜು ಆ ಕಾಯ್ದೆಯನ್ನು ಹೊಗಳುತ್ತಿದೆ.
4. **ಅಪಮಾರ್ಗದಲ್ಲಿ ಅರಣ್ಯ ಭೂಮಿಯ ಬಳಕೆ:** 1988ರ ಧೋರಣೆ ಅರಣ್ಯ ಆವರಣವನ್ನು ವಿಸ್ತರಿಸುವಂತೆ ಮಾಡಿದೆ ಎಂದು ಈ ಕರಡು ಹೇಳಿದೆ. ಅದರಲ್ಲಿ ಅರಣ್ಯ ಭೂಮಿಯನ್ನು ಬೇರೆ ರೀತಿಗಳಲ್ಲಿ ಹೇಗೆ ಬಳಸಬಾರದು ಎಂದು ಒಂದು ಇಡೀ ವಿಭಾಗದಲ್ಲಿ ಹೇಳಿತ್ತು. ಆದರೆ ಈ ಕರಡಿನಲ್ಲಿ ಒಂದೇ ಒಂದು ವಾಕ್ಯ ಅರಣ್ಯೇತರ ಬಳಕಕೆಗೆ ಕಟ್ಟುನಿಟ್ಟಾಗಿ ತಡೆ ಹಾಕಬೇಕು ಎಂದಷ್ಟೇ ಇದೆ. ಸರಕಾರವೇ 'ವ್ಯಾಪಾರಸ್ನೇಹಿ' ಹೆಸರಲ್ಲಿ ಪರಿಸರ ನಿಯಮಗಳನ್ನು ಸಡಿಲಿಸುತ್ತಿರುವಾಗ, ಅರಣ್ಯ ಪ್ರದೇಶಗಳಲ್ಲಿ ಗಣಿಗಾರಿಕೆಯ ನಿಯಂತ್ರಣವನ್ನು ಸಡಿಲಗೊಳಿಸುತ್ತಿರುವಾಗ ತಡೆ ಹಾಕುವುದು ಯಾರಿಗೆ?
5. **ಬುಡಕಟ್ಟು ಹಕ್ಕುಗಳ ನಿರ್ಮೂಲನೆ:** ಬುಡಕಟ್ಟು ಸಮುದಾಯಗಳು ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳು ಮತ್ತು ಗ್ರಾಮಸಭೆಗಳಿಗೆ ಅರಣ್ಯಗಳು ಮತ್ತು ಅವುಗಳ ಉತ್ಪನ್ನಗಳ ಲಭ್ಯತೆ ಮತ್ತು ನಿರ್ವಹಣೆಯ ಹಕ್ಕುಗಳನ್ನು ಅರಣ್ಯ ಹಕ್ಕುಗಳ ಕಾಯ್ದೆ ಕೊಟ್ಟಿದೆ. ಆದರೆ ಈ ಕರಡು ಮರಮಟ್ಟು ಅಲ್ಲದ ಅರಣ್ಯ ಉತ್ಪನ್ನಗಳ ಹಕ್ಕುಗಳನ್ನು ಕಸಿದುಕೊಂಡು ಪ್ರಸ್ತಾವಿತ ಕೇಂದ್ರದ ನಿಯಂತ್ರಣದ ನಿಗಮಗಳಿಗೆ ಒಪ್ಪಿಸುತ್ತದೆ. ಗ್ರಾಮಸಭೆಗಳನ್ನು ಈ ನಿಗಮಗಳ ಅಡಿಗೆ ತರುತ್ತದೆ. ಇದು ಅತ್ಯಂತ ಆಕ್ಷೇಪಣೀಯ. ಅರಣ್ಯ ನಿರ್ವಹಣಾ ಧೋರಣೆಗಳಲ್ಲಿ ಗ್ರಾಮ ಸಭೆಗಳು ಮತ್ತು ಬುಡಕಟ್ಟು ಸಮುದಾಯಗಳನ್ನು ಕೇಂದ್ರ ಬಿಂದುವಾಗಿ ಮಾಡಿ ಆಗಿರುವ ಅಲ್ಪ–ಸ್ವಲ್ಪ ಸಾಧನೆಗಳನ್ನೂ ಇದು ಇಲ್ಲವ್ವಾಗಿಸುತ್ತದೆ. ಈ ಕರಡು ಅರಣ್ಯ ಹಕ್ಕುಗಳ ಕಾಯ್ದೆ ಕೊಟ್ಟಿರುವ ಯಾವ ಹಕ್ಕುಗಳ ಪ್ರಸ್ತಾಪವನ್ನೂ ಮಾಡುವುದಿಲ್ಲ. ಬದಲಿಗೆ ಅದರ ನಗ್ನ ಉಲ್ಲಂಘನೆಯ ಪ್ರಸ್ಯಾವವನ್ನು ಇಟ್ಟಿದೆ.
6. ಪ್ರಸ್ತಾವಿತ ಕಾನೂನು ಚೌಕಟ್ಟು: ಈ ಕರಡು ದಸ್ತಾವೇಜು ಅರಣ್ಯ ಹಕ್ಕುಗಳ ಕಾಯ್ದೆ, ಪರಿಶಿಷ್ಟ ಪ್ರದೇಶಗಳಿಗೆ ಪಂಚಾಯ್ತುಗಳ ವಿಸ್ತರಣೆ ಕಾಯ್ದೆ ಮುಂತಾದ ಈಗಿರುವ ಕಾಯ್ದೆಗಳಲ್ಲಿ ಹಾಗೂ ಸಂವಿಧಾನದ 5ನೇ ಮತ್ತು ಆರನೇ ಶೆಡ್ಯೂಲಿನಲ್ಲಿ ಪಡೆದಿರುವ ರಕ್ಷಣೆಗಳಿಂದ ಉಂಟಾಗಬಹುದಾದ ತಡೆಗಳನ್ನು ನಿವಾರಿಸಲು ಒಂದು ಕಾನೂನು ಚೌಕಟ್ಟಿನ ಪ್ರಸ್ತಾವ ಇಟ್ಟಿದೆ. ಇದು ಈ ಮಂತ್ರಾಲಯ ತನ್ನ ಹಿತಕ್ಕಾಗಿ, ಅರಣ್ಯಗಳ ಖಾಸಗೀಕರಣ ಮತ್ತು ಬುಡಕಟ್ಟು ಸಮುದಾಯಗಳ ಹಕ್ಕುಗಳ ನಿರ್ಮೂಲನೆಯನ್ನು ತ್ವರಿತವಾಗಿ ಮಾಡಲು ತನಗೆ ಅನುಕೂಲವಾಗುವಂತೆ ಮಾಡಲಿಕ್ಕಾಗಿಯೇ ಇಟ್ಟಿರುವಂತದ್ದು.

ಇಂತಹ ಕರಡನ್ನು ಹಿಂದಕ್ಕೆ ತಗೊಳ್ಳಬೇಕು. ಪರಿಸರ, ಅರಣ್ಯ ರಕ್ಷಣೆಯಲ್ಲಿ, ಬುಡಕಟ್ಟು ಸಮುದಾಯಗಳು ಮತ್ತು ಪಾರಂಪರಿಕ ಅರಣ್ಯವಾಸಿಗಳ ಹಕ್ಕುಗಳ ರಕ್ಷಣೆಯಲ್ಲಿ ತೊಡಗಿರುವ ಸಂಘಟನೆಗಳು ಮತ್ತು ವ್ಯಕ್ತಿಗಳಿರುವ ಒಂದು ಸಮಿತಿಯನ್ನು ರಚಿಸಬೇಕು. ಇದು ಅರಣ್ಯ ಹಕ್ಕುಗಳ ಕಾಯ್ದೆ ಮತ್ತಿತರ ಭಾರತದ ನೈಸರ್ಗಿಕ ಅರಣ್ಯಗಳಲ್ಲಿ ಶ್ರೀಮಂತ ಜೀವ–ವೈವಿಧ್ಯವನ್ನು ಕಾಪಾಡಿಕೊಳ್ಳುವಲ್ಲಿ ಬುಡಕಟ್ಟು ಸಮುದಾಯಗಳ ಪಾತ್ರವನ್ನು ಗುರುತಿಸುವ ಮತ್ತು ರಕ್ಷಿಸುವ ಕಾಯ್ದೆಗಳ ಚೌಕಟ್ಟಿನೊಳಗೆ ಇದನ್ನು ಬದಲಿಸಿ ಬೇರೆ ಕರಡನ್ನು ತಯಾರಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.





ಸವಾಲುಗಳು, ನಿರೀಕ್ಷೆಗಳ ನಡುವೆ ಹೈದರಾಬಾದಿನಲ್ಲಿ ಸಿಪಿಐ(ಎಂ)ನ 22ನೇ ಮಹಾಧಿವೇಶನ

ಐತಿಹಾಸಿಕ ತೆಲಂಗಾಣ ಪಾಳೆಯಗಾರಿ–ವಿರೋಧಿ ಸಶಸ್ತ್ರ ಹೋರಾಟದಲ್ಲಿ ಭಾಗವಹಿಸಿದ್ದ ಹಿರಿಯ ಕ್ರಾಂತಿಕಾರಿ ಮಲ್ಲು ಸ್ವರಾಜ್ಯಂ ಕೆಂಬಾವುಟವನ್ನು ಹಾರಿಸುವುದರೊಂದಿಗೆ ಸಿಪಿಐ(ಎಂ)ನ 22ನೇ ಮಹಾಧಿವೇಶನ ಹೈದರಾಬಾದಿನಲ್ಲಿ ಎಪ್ರಿಲ್ 18 ರ ಬೆಳಿಗ್ಗೆ ಆರಂಭವಾಯಿತು. ಕಳೆದ ಮಹಾಧಿವೇಶನದ ನಂತರ ನಮ್ಮನ್ನಗಲಿದ ಹಿರಿಯ ಕಾರ್ಮಿಕ ಮುಖಂಡರೂ, ಸಿಪಿಐ(ಎಂ) ಪೊಲಿಟ್‌ಬ್ಯರೊ ಸದಸ್ಯರೂ ಆಗಿದ್ದ ಮಹಮ್ಮದ್ ಅಮಿನ್ ನೆನಪಿನಲ್ಲಿ ಮಹಮ್ಮದ್ ಅಮೀನ್ ನಗರ ಎಂದು ಹೆಸರಿಸಿದ ಆವರಣದಲ್ಲಿ 22ನೇ ಮಹಾಧಿವೇಶನಕ್ಕೆ ಚಾಲನೆ ದೊರೆಯಿತು.

ಈ ಮಹತ್ವದ ಸಭೆಯಲ್ಲಿ ದೇಶದ ಎಲ್ಲೆಡೆಗಳಿಂದ 765 ಚುನಾಯಿತ ಪ್ರತಿನಿಧಿಗಳು ಮತ್ತು 74 ವೀಕ್ಷಕರು ಭಾಗವಹಿಸುತ್ತಿದ್ದಾರೆ. ಎಪ್ರಿಲ್ 22 ರ ವರೆಗೆ ಮಹಾಧಿವೇಶನ ನಡೆಯುತ್ತದೆ.

ಉದ್ಘಾಟನಾ ಅಧಿವೇಶನ

ಪೊಲಿಟ್‌ಬ್ಯುರೊ ಸದಸ್ಯರೂ, ಮಾಜಿ ತ್ರಿಪುರಾ ಮುಖ್ಯಮಂತ್ರಿಗಳೂ ಆದ ಮಾಣಿಕ್ ಸರ್ಕಾರ್ ಅಧ್ಯಕ್ಷತೆಯಲ್ಲಿ ಉದ್ಘಾಟನಾ ಅಧಿವೇಶನ 21ನೇ ಮಹಾಧಿವೇಶನದ ನಂತರ ನಿಧನರಾದ ಪಕ್ಷದ ಹಿರಿಯ ಮುಖಂಡರೂ, ರಾಜ್ಯಸಬಾ ಸದಸ್ಯರೂ ಆಗಿದ್ದ ಖಗೆನ್ ದಾಸ್ ಮತ್ತು ಸುಕೋಮಲ್ ಸೆನ್ ನೆನಪಿನ ವೇದಿಕೆಯಲ್ಲಿ ಆರಂಭವಾಯಿತು. ಈ ಅವಧಿಯಲ್ಲಿ ಅಗಲಿದ ಸಂಗಾತಿಗಳಿಗೆ ಮತ್ತು ಪಶ್ಚಿಮ ಬಂಗಾಲದಲ್ಲಿ ಟಿಎಂಸಿ ಅಮಾನುಷವಾಗಿ ಕೊಂದಿರುವ 32 ಸಂಗಾತಿಗಳು, ಆರೆಸ್ಸೆಸ್ ಕೊಲೆಗಡುಕ ಗ್ಯಾಂಗುಗಳಿಂದ ಹುತಾತ್ಮರಾದ ಕೇರಳದ 14 ಹುತಾತ್ಮರು ಮತ್ತು ತ್ರಿಪುರಾದಲ್ಲಿ ವಿಧಾನ ಸಭಾ ಚುನಾವಣೆಗಳ ನಂತರ ಬಿಜೆಪಿ ಗೂಂಡಾಗಳು ಕೊಂದಿರುವ ಇಬ್ಬರು ಸಂಗಾತಿಗಳಿಗೆ ಆಳವಾದ ಶ್ರದ್ಧಾಂಜಲಿಗಳನ್ನು ಸಲ್ಲಿಸುವುದರೊಂದಿಗೆ ಇದು ಆರಂಭವಾಯಿತು.

ಸ್ವಾಗತ ಸಮಿತಿಯ ಪರವಾಗಿ ಅದರ ಅಧ್ಯಕ್ಷರಾದ ಬಿ.ವಿ.ರಾಘವುಲು ಅವರ ಸ್ವಾಗತ ಭಾಷಣದ ನಂತರ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಸಮ್ಮೇಳನವನ್ನು ಉದ್ಘಾಟಿಸಿದರು.

ತಮ್ಮ ಭಾಷಣದಲ್ಲಿ ಯೆಚುರಿ "ಸಿಪಿಐ(ಎಂ)ನ 22ನೇ ಮಹಾಧಿವೇಶನವನ್ನು ಜನತೆ ಮತ್ತು ನಮ್ಮ ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯ ಬಹುಮುಖೀ ಸವಾಲುಗಳನ್ನು ಎದುರಿಸುತ್ತಿರುವ ಒಂದು ಅವಧಿಯಲ್ಲಿ ನಡೆಸಲಾಗುತ್ತಿದೆ. ಪ್ರಸಕ್ತ ಬಿಜೆಪಿ ಕೇಂದ್ರ ಸರಕಾರದ ಅಧಿಕಾರ ಸೂತ್ರಗಳು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹತೋಟಿಯಲ್ಲಿದ್ದು, ಅದು ಜನಗಳ ಮೇಲೆ ಅಭೂತಪೂರ್ವ ಸಂಕಟಗಳನ್ನು ಹೇರುವ ಧೋರಣೆಗಳನ್ನು ಅನುಸರಿಸುತ್ತಿದೆ, ಮತ್ತು ಅದೇ ವೇಳೆಗೆ ನಮ್ಮ ಸಾಮಾಜಿಕ ಹಂದರವನ್ನು ಘಾಸಿಗೊಳಿಸುತ್ತಿದೆ, ಅದರ ಐಕ್ಯತೆ ಮತ್ತು ಸಮಗ್ರತೆಗೆ ಬೆದರಿಕೆ ಒಡ್ಡುತ್ತಿದೆ. ನಮ್ಮ ಸಮಾಜವನ್ನು ಎಷ್ಟೊಂದು ಅಮಾನವೀಯಗೊಳಿಸಲಾಗಿದೆ ಎಂಬುದು ಇತ್ತೀಚೆಗೆ ಕಠುವ ಮತ್ತು ಉನ್ನಾವ್‌ನ ಮೈನಡುಗಿಸುವ ಅತ್ಯಾಚಾರದ ಘಟನೆಗಳಲ್ಲಿ ಕಂಡು ಬಂದಿದೆ. ಅತ್ಯಾಚಾರವನ್ನು ಒಂದು ಕೋಮುಧ್ರುವೀಕರಣದ ಅಸ್ತ್ರವಾಗಿ ಬಳಸುತ್ತಿರುವುದನ್ನು ಕಾಣುತ್ತಿರುವುದು ನಾಚಿಕೆಗೇಡಿನ ಸಂಗತಿ. ಇದನ್ನು ಪ್ರತಿರೋಧಿಸಬೇಕು ಮತ್ತು ಸೋಲಿಸಬೇಕು?"ಎಂದರು.

ಮುಂದುವರೆದು,".. ನವ–ಉದಾರವಾದಿ ಧೋರಣೆಗಳ ಪ್ರಹಾರಗಳು ಅಭೂತಪೂರ್ವ ಆಯಾಮಗಳನ್ನು ಪಡೆದಿವೆ. ತೀಕ್ಷ್ಣಗೊಳ್ಳುತ್ತಿರುವ ಕೋಮುವಾದಿ ಧ್ರುವೀಕರಣ ನಮ್ಮ ಸಾಮಾಜಿಕ ಹಂದರದ ಐಕ್ಯತೆಯನ್ನು ಹಿಂದೆಂದೂ ಕಾಣದ ರೀತಿಯಲ್ಲಿ ಚಿಂದಿಗೊಳಿಸುತ್ತಿದೆ.. ಸಿಪಿಐ(ಎಂ)ನ ಈ 22ನೇ ಮಹಾಧಿವೇಶನ ಪಕ್ಷದ ಸ್ವತಂತ್ರ ಚಟುವಟಿಕೆಗಳನ್ನು ಬಲಪಡಿಸಲು, ಜನಗಳ ಹೋರಾಟಗಳನ್ನು ತೀವ್ರಗೊಳಿಸಲು ಹಾಗೂ ರಾಜಕೀಯ ಮಧ್ಯಪ್ರವೇಶ ನಡೆಸಲು, ಎಡಶಕ್ತಿಗಳ ಐಕ್ಯತೆಯನ್ನು ಬಲಪಡಿಸಲು ಮತ್ತು ಎಡ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯತೆಯನ್ನು ಬೆಸೆಯಲು ಹೊಸ ನಿರ್ದೇಶನಗಳನ್ನು ನೀಡುತ್ತದೆ ಎಂಬ ವಿಶ್ವಾಸ ನನಗಿದೆ. ಅಂತಿಮವಾಗಿ, ಈ ಸವಾಲುಗಳಿಗೆ ಧೋರಣೆಗಳ ಪರ್ಯಾಯವೇ ಉತ್ತರ, ಮತ್ತು ಇದನ್ನು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಮಾತ್ರವೇ ಕೊಡಬಲ್ಲವು" ಎಂದು ಹೇಳಿದರು.(ಅವರ ಉದ್ಘಾಟನಾ ಭಾಷಣದ ಮುಖ್ಯಾಂಶಗಳಿಗೆ ಪುಟ 9 ನೋಡಿ.)

ಆರು ಎಡಪಕ್ಷಗಳ ಮುಖಂಡರುಗಳು ಹಾಜರಿದ್ದುದು ಜನತೆಯು ಬೇಳೆಯುತ್ತಿರುವ ಹೋರಾಟಗಳಲ್ಲಿ ಎಡ ಐಕ್ಯತೆಯನ್ನು ಬಿಂಬಿಸಿತು. ಸಿಪಿಐನ ಪ್ರಧಾನ ಕಾರ್ಯದರ್ಶಿ ಸುಧಾಕರ ರೆಡ್ಡಿ, ಸಿಪಿಐ(ಎಂ–ಎಲ್)–ಲಿಬರೇಷನ್‌ನ ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ, ಅಖಿಲ ಭಾರತ ಫಾರ್ವರ್ಡ್ ಬ್ಲಾಕ್ ಕೇಂದ್ರಸಮಿತಿಯ ಕಾರ್ಯದರ್ಶಿ ಜಿ.ಆರ್.ಶಿವಶಂಕರ್, ಆರ್.ಎಸ್..ಪಿ. ಯ ರಾಷ್ಟ್ರೀಯ ಸಮಿತಿಯ ಕೇಂದ್ರ ಕಾರ್ಯದರ್ಶಿ ಮಂಡಳಿಯ ಸದಸ್ಯ ಮನೋಜ್ ಭಟ್ಟಾಚಾರ್ಯ ಮತ್ತು ಎಸ್‌ಯುಸಿಐ(ಸಿ)ಯ ಪೊಲಿಟ್‌ಬ್ಯುರೊ ಸದಸ್ಯರಾದ ಅಸಿತ್ ಭಟ್ಟಾಚಾರ್ಯ ಅಧಿವೇಶನವನ್ನು ಉದ್ದೇಶಿಸಿ ಮಾತಾಡಿದರು.

ಉದ್ಘಾಟನಾ ಅಧಿವೇಶನ ಮಾಣಿಕ್ ಸರ್ಕಾರ್ ಅವರ ಅಧ್ಯಕ್ಷ ಭಾಷಣದೊಂದಿಗೆ ಮುಕ್ತಾಯ ಗೊಂಡಿತು.

ನಮ್ಮ ದೇಶದ ಜನಸಾಮಾನ್ಯರ ಆಶಯ–ಆಕಾಂಕ್ಷೆಗಳನ್ನು ಈಡೇರಿಸಲು, ಬಿಜೆಪಿ–ಆರೆಸ್ಸೆಸ್ ಕೂಟವನ್ನು ಮೂಲೆಗುಂಪು ಮಾಡಿ ಸೋಲಿಸಲು ಮುಂಬರುವ ದಿನಗಳಲ್ಲಿ ಚೈತನ್ಯಪೂರ್ಣವಾಗಿ ಅನುಸರಿಸಬೇಕಾದ ಒಂದು ಸರಿಯಾದ ರಾಜಕೀಯ ಕಾರ್ಯತಂತ್ರವನ್ನು ವಿಕಾಸಗೊಳಿಸಬೇಕಾಗಿದೆ. ಆದರೆ, ಇದನ್ನು ನಮ್ಮ ನೀತಿಬದ್ಧ ನಿಲುವು ಮತ್ತು ಸಾಮಾಜಿಕ ಹಾಗೂ ವರ್ಗ ಕಣ್ಣೋಟಗಳ ವಿಷಯದಲ್ಲಿ ರಾಜಿ ಮಾಡಿಕೊಳ್ಳದೆ ಮಾಡಬೇಕು ಎಂಬುದು ಸ್ವಯಂವೇದ್ಯ" ಎಂದು ಅವರು ಹೇಳಿದರು.

ಪ್ರತಿನಿಧಿ ಅಧಿವೇಶನ

ಪಕ್ಷದ ಮಹಾಧಿವೇಶನ ನಡೆಸಲು ಸೀತಾರಾಮ್ ಯೆಚುರಿಯವರು ಸೂಚಿಸಿದಂತೆ ವಿವಿಧ ಸಮಿತಿಗಳನ್ನು ಆರಿಸುವುದರೊಂದಿಗೆ ಆರಂಭವಾಯಿತು.

ಅಧ್ಯಕ್ಷ ಮಂಡಳಿ:

ಮಾಣಿಕ್ ಸರ್ಕಾರ್ (ಅಧ್ಯಕ್ಷರು)
ಆಮ್ರ ರಾಮ್
ಯುಸುಫ್ ತರಿಗಾಮಿ
ರಾಧಾಕೃಷ್ಣನ್
ಜೆ.ಪಿ ಗವಿತ್
ಮಿನತಿ ಘೋಷ್
ಎಸ್.ವೀರಯ್ಯ

ಪುಟ 10 ನೋಡಿ

ಉದ್ಘಾಟನಾ ಅಧಿವೇಶನದಲ್ಲಿ ಸಿಪಿಐ(ಎಂ)ನ ಮೊದಲ ಕೇಂದ್ರ ಸಮಿತಿಯ ಸದಸ್ಯರಾಗಿದ್ದ ಹಿರಿಯ ಮುಖಂಡರಾದ ವಿ.ಶಂಕರಯ್ಯ ಮತ್ತು ವಿ ಎಸ್ ಅಚ್ಯುತಾನಂದನ್ ಅವರನ್ನು ಸನ್ಮಾನಿಸಲಾಯಿತು



ಕೇಂದ್ರ ಸಮಿತಿಯ ಪರವಾಗಿ ಕರಡು ರಾಜಕೀಯ ನಿರ್ಣಯವನ್ನು ಮಂಡಿಸುತ್ತಿರುವ ಪ್ರಕಾಶ ಕಾರಟ್



“ಸಿಪಿಐ(ಎಂ)ನ 22ನೇ ಮಹಾಧಿವೇಶನ ಎಡಶಕ್ತಿಗಳ ಮುನ್ನಡೆಗೆ ಹೊಸ ದಿಕ್ಕನ್ನು ತೋರುತ್ತದೆ”

ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರ ಉದ್ಘಾಟನಾ ಭಾಷಣದ ಕೆಲವು ಅಂಶಗಳು

22ನೇ ಮಹಾಧಿವೇಶನವನ್ನು ಜನತೆ ಮತ್ತು ನಮ್ಮ ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯ ಬಹುಮುಖೀ ಸವಾಲುಗಳನ್ನು ಎದುರಿಸುತ್ತಿರುವ ಒಂದು ಅವಧಿಯಲ್ಲಿ ನಡೆಸಲಾಗುತ್ತಿದೆ. ಪ್ರಸಕ್ತ ಬಿಜೆಪಿ ಕೇಂದ್ರ ಸರಕಾರದ ಅಧಿಕಾರ ಸೂತ್ರಗಳು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹತೋಟಿಯಲ್ಲಿದ್ದು, ಅದು ಜನಗಳ ಮೇಲೆ ಅಭೂತಪೂರ್ವ ಸಂಕಟಗಳನ್ನು ಹೇರುವ ಧೋರಣೆಗಳನ್ನು ಅನುಸರಿಸುತ್ತಿದೆ, ಮತ್ತು ಅದೇ ವೇಳೆಗೆ ನಮ್ಮ ಸಾಮಾಜಿಕ ಹಂದರವನ್ನು ಘಾಸಿಗೊಳಿಸುತ್ತಿದೆ, ಅದರ ಐಕ್ಯತೆ ಮತ್ತು ಸಮಗ್ರತೆಗೆ ಬೆದರಿಕೆ ಒಡ್ಡುತ್ತಿದೆ. ನಮ್ಮ ಸಮಾಜವನ್ನು ಎಷ್ಟೊಂದು ಅಮಾನವೀಯಗೊಳಿಸಲಾಗಿದೆ ಎಂಬುದು ಇತ್ತೀಚೆಗೆ ಕಠುವ ಮತ್ತು ಉನ್ನಾವ್‌ನ ಮೈನಡುಗಿಸುವ ಅತ್ಯಾಚಾರದ ಘಟನೆಗಳಲ್ಲಿ ಕಂಡು ಬಂದಿದೆ. ಅತ್ಯಾಚಾರವನ್ನು ಒಂದು ಕೋಮುಧ್ರುವೀಕರಣದ ಅಸ್ತ್ರವಾಗಿ ಬಳಸುತ್ತಿರುವುದನ್ನು ಕಾಣುತ್ತಿರುವುದು ನಾಚಿಕೆಗೇಡಿನ ಸಂಗತಿ. ಇದನ್ನು ಪ್ರತಿರೋಧಿಸಬೇಕು ಮತ್ತು ಸೋಲಿಸಬೇಕು.



ಮಹಾಧಿವೇಶನದಲ್ಲಿ ಆರು ಎಡಪಕ್ಷಗಳ ಮುಖಂಡರುಗಳು. ಸೀತಾರಾಮ್‌ಯೆಚುರಿಯವರ ಪಕ್ಕದಲ್ಲಿ ಸಿಪಿಐನ ಪ್ರಧಾನ ಕಾರ್ಯದರ್ಶಿ ಸುಧಾಕರ ರೆಡ್ಡಿ, ಸಿಪಿಐ(ಎಂ-ಎಲ್)-ಲಿಬರೇಷನ್‌ನ ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ, ಅಖಿಲ ಭಾರತ ಫಾರ್ವರ್ಡ್ ಬ್ಲಾಕ್ ಕೇಂದ್ರಸಮಿತಿಯ ಕಾರ್ಯದರ್ಶಿ ಜಿ.ಆರ್.ಶಿವಶಂಕರ್, ಆರ್. ಎಸ್..ಪಿ. ಯ ರಾಷ್ಟ್ರೀಯ ಸಮಿತಿಯ ಕೇಂದ್ರ ಕಾರ್ಯದರ್ಶಿ ಮಂಡಳಿಯ ಸದಸ್ಯ ಮನೋಜ್ ಭಟ್ಟಾಚಾರ್ಯ ಮತ್ತು ಎಸ್‌ಯುಸಿಐ(ಸಿ)ಯ ಪೊಲಿಟ್‌ಬ್ಯುರೊ ಸದಸ್ಯರಾದ ಅಸಿತ್ ಭಟ್ಟಾಚಾರ್ಯ



ನಾವು ಎದುರಿಸುತ್ತಿರುವ ಅನೇಕ ಸವಾಲುಗಳಲ್ಲಿ ನಾಲ್ಕು ಸವಾಲುಗಳನ್ನು, ಜನಗಳ ಜೀವನಾಧಾರಗಳ ಹಿತದೃಷ್ಟಿಯಿಂದ ಮತ್ತು ಭಾರತೀಯ ಗಣತಂತ್ರವನ್ನು ಕಾಪಾಡಿಕೊಳ್ಳಲು ಮತ್ತು ಬಲಪಡಿಸಲು ಪರಿಗಣಿಸಿ ತುರ್ತಾಗಿ ಎದುರಿಸಬೇಕಾಗಿದ್ದೆ, ಸೋಲಿಸಬೇಕಿದೆ. ನವ-ಉದಾರವಾದಿ ಧೋರಣೆಗಳ ಪ್ರಹಾರಗಳು ಅಭೂತಪೂರ್ವ ಆಯಾಮಗಳನ್ನು ಪಡೆದಿವೆ. ತೀಕ್ಷ್ಣಗೊಳ್ಳುತ್ತಿರುವ ಕೋಮುವಾದಿ ಧ್ರುವೀಕರಣ ನಮ್ಮ ಸಾಮಾಜಿಕ ಹಂದರದ ಐಕ್ಯತೆಯನ್ನು ಹಿಂದೆಂದೂ ಕಾಣದ ರೀತಿಯಲ್ಲಿ ಚಿಂದಿಗೊಳಿಸುತ್ತಿದೆ. ಸಂಸದೀಯ ಪ್ರಜಾಪ್ರಭುತ್ವದ ಸಂಸ್ಥೆಗಳು ಮತ್ತು ಸಾಂವಿಧಾನಿಕ ಅಧಿಕಾರಗಳ ವಿರುದ್ಧ ನಡೆಸಿರುವ ಪ್ರಹಾರಗಳು ಒಂದು ಪ್ರಜಾಪ್ರಭುತ್ವ-ವಿರೋಧಿ ದಾಳಿಯನ್ನು ಹರಿಯಬಿಟ್ಟಿದೆ. ಭಾರತವನ್ನು ಅಮೆರಿಕನ್ ಸಾಮ್ರಾಜ್ಯಶಾಹಿಯ ಒಂದು ಕಿರಿಯ ಪಾಲುದಾರ ಮತ್ತು ಒಂದು ಒಂದು ಅಡಿಯಾಳು ಮಿತ್ರನ ಮಟ್ಟಕ್ಕೆ ಇಳಿಸಲಾಗಿದೆ. ಭಾರತದ ಸ್ವತಂತ್ರ ವಿದೇಶಾಂಗ ನೀತಿಯನ್ನು ಕೈಬಿಡಲಾಗಿದೆ.ಭಾರತ-ಅಮೆರಿಕಾ-ಇಸ್ರೇಲ್ ಕೂಟವೊಂದು ಜಾಗತಿಕ ವ್ಯವಹಾರಗಳಲ್ಲಿ ಮೂಡಿಬಂದಿದೆ.

ನವ-ಉದಾರವಾದಿ ದಾಳಿ ವಿಪರೀತ ಅಸಮಾನತೆಗಳನ್ನೂ ತೀಕ್ಷ್ಣಗೊಳಿಸಿವೆ. 2017 ರಲ್ಲಿ ಕೇವಲ 1% ಅತಿ ಶ್ರೀಮಂತ ಭಾರತೀಯರು ನಮ್ಮ ದೇಶದಲ್ಲಿ ಉತ್ಪತ್ತಿಯಾದ ಸಂಪತ್ತಿನ 73% ಭಾಗವನ್ನು ಬಾಚಿಕೊಂಡಿದ್ದಾರೆ. ಬಿಜೆಪಿ ಸರ್ಕಾರದ ಅವಧಿಗೆ ಮೊದಲು ಈ ಅನುಪಾತ ಶೇ. 49 ರಷ್ಟಿತ್ತು. ....

ಕೃಷಿಕ ಸಂಕಟ ಆಳಗೊಳ್ಳುತ್ತಿದ್ದು ನಮ್ಮ ರೈತಾಪಿಗಳು ಇದನ್ನು ಸಮರಧೀರ ರೀತಿಯಲ್ಲಿ ದೇಶಾದ್ಯಂತ ಪ್ರತಿರೋಧಿಸುತ್ತಿದ್ದಾರೆ. ಇತ್ತೀಚೆಗೆ ನಾಶಿಕ್‌ನಿಂದ ಮುಂಬೈಗೆ ರೈತರ ಲಾಂಗ್ ಮಾರ್ಚ್ ಇದರಲ್ಲಿ ಮುಖ್ಯವಾದುದು. ಬಿಜೆಪಿ ಕೇಂದ್ರ ಸರಕಾರ ಸ್ಪಷ್ಟವಾಗಿ ಉತ್ಪಾದನಾ ಖರ್ಚಿನ ಒಂದೂವರೆ ಪಟ್ಟಿನಷ್ಟು ಕನಿಷ್ಟ ಬೆಂಬಲ ಬೆಲೆಯ ಮತ್ತು ರೈತರು ಸಾಲಬಾಧೆ ತಾಳಾರದೆ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಡೆಯಲು ಸಾಲಮನ್ನಾ ಮಾಡುವ ತನ್ನದೇ ಆಶ್ವಾಸನೆಗಳನ್ನು ಈಡೇರಿಸದೆ ವಿಶ್ವಾಸಘಾತ ಮಾಡಿದೆಯೆಂಬುದು ಸ್ಪಷ್ಟ.....

ಯುವಜನರಿಗೆ ಪ್ರತಿವರ್ಷ ಎರಡು ಕೋಟಿ ಉದ್ಯೋಗಾವಕಾಶಗಳನ್ನು ನಿರ್ಮಿಸುವ ವಚನವೂ ಭಂಗವಾಗಿದೆ. ಬದಲಿಗೆ ನಿರುದ್ಯೋಗ ಏರುತ್ತಿದೆ. ನೋಟುರದ್ಧತಿ ಮತ್ತು ಜಿಎಸ್‌ಟಿಯ ದ್ವಂದ್ವ ಪ್ರಹಾರಗಳು ನಗದು ಆರ್ಥಿಕತೆಯ ಮೇಲೆ ಅವಲಂಬಿಸಿರುವ ನಮ್ಮ ಕೋಟ್ಯಂತರ ಜನಗಳನ್ನು ಆರ್ಥಿಕವಾಗಿ ಬುಡಮೇಲು ಮಾಡಿವೆ. ಕೃಷಿಯ ಹೊರಗೆ ಅತಿ ಹೆಚ್ಚು ಉದ್ಯೋಗಾವಕಾಶಗಳನ್ನು ನಿರ್ಮಿಸುತ್ತಿರುವ ಸಣ್ಣ ಪ್ರಮಾಣದ ಉದ್ದಿಮೆಗಳನ್ನು ಧ್ವಂಸಗೊಳಿಸಿವೆ. ವಿದೇಶಿ ನೇರ ಹೂಡಿಕೆಗೆ ತೆರೆಯದ ವಲಯವೇ ಉಳಿದಿಲ್ಲ. ಜನಗಳ ಆಸ್ತಿಗಳನ್ನು ದೇಶಿ ಮತ್ತು ವಿದೇಶಿ ಬಂಡವಾಳಿಗರ ಗರಿಷ್ಟ ಲಾಭಗಳಿಗೆ ಬಲಿಗೊಡಲಾಗಿದೆ.....

ಕಳೆದ ಮೂರು ವರ್ಷಗಳಲ್ಲಿ ಕಾರ್ಮಿಕ ವರ್ಗ

ಪುಟ 10 ನೋಡಿ

“ಕೇವಲ ಚುನಾವಣಾ ರಂಗದ ಕೆಲಸ ಕೋಮುವಾದವನ್ನು ಸಾಮಾಜಿಕ ಜೀವನದಿಂದ ಅಳಿಸಿ ಹಾಕಲಾರದು”

ಮಹಾಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷಬಿ.ವಿ.ರಾಘವುಲು ಅವರ ಸ್ವಾಗತ ಭಾಷಣದ ಕೆಲವು ಅಂಶಗಳು



ಕಾರ್ಪೊರೇಟ್ ವರ್ಗ ನವ-ಉದಾರವಾದಿ ಸುಧಾರಣೆಗಳನ್ನು ಮುಂದೊಯ್ಯಲು ಅತ್ಯುತ್ತಮ ಪಣ ಎಂದು ಆರಿಸಿದ ಪ್ರಸಕ್ತ ಬಿಜೆಪಿ ಕೇಂದ್ರ ಸರಕಾರ ಈ ಸುಧಾರಣೆಗಳಿಗೆ ಇರುವ ಎಲ್ಲ ವಿರೋಧವನ್ನು ಬಲವಂತದಿಂದ ನಿವಾರಿಸಲು ಪ್ರಯತ್ನಿಸುತ್ತಿದೆ. ಹಿಂದೆಂದಿಗಿಂತಲೂ ಹೆಚ್ಚಾಗಿ ಎಲ್ಲ ವರ್ಗಗಳು ಮತ್ತು ವಿಭಾಗಗಳು ನವ-ಉದಾರವಾದಿ ಧೋರಣೆಗಳ ವಿರುದ್ಧ ಅವಿರತ ದಾಳಿ ನಡೆಸಬೇಕಾದ ಸಮಯ ಬಂದಿದೆ.

ನವ-ಉದಾರವಾದದ ವಿರುದ್ಧ ಯಾವುದೇ ರಾಜಿಯಿಲ್ಲದ ನಿರಂತರ ಹೋರಾಟ ಮಾತ್ರವೇ ಒಂದು ಕೋಮುವಾದ-ವಿರೋಧಿ, ಬಂಡವಾಳಶಾಹಿ -ವಿರೋಧಿ ಮತ್ತು ಸಾಮ್ರಾಜ್ಯಶಾಹಿ-ವಿರೋಧಿ ಭಾವನೆಯನ್ನು ಜನಸಾಮಾನ್ಯರಲ್ಲಿ ಸೃಷ್ಟಿಸಬಲ್ಲದು. ಇದು ಸಮಾಜವಾದದ ವಿಚಾರಗಳ ಪ್ರಸಾರಕ್ಕೆ ಅನುಕೂಲವಾದ ಪರಿಸರದ ಮರುಸೃಷ್ಟಿ ಮಾಡಬಲ್ಲದು.

ಜನಗಳ ಹೋರಾಟಗಳಲ್ಲಿ ಐಕ್ಯತೆಯನ್ನು ದುರ್ಬಲಗೊಳಿಸಲು ಶೋಷಕ ವರ್ಗಗಳ ಸೇವೆಯಲ್ಲಿರುವ ಹಿಂದುತ್ವ ಶಕ್ತಿಗಳು ಮತ್ತು ಮೋದಿಯ ಅಡಿಯಲ್ಲಿ ಬಿಜೆಪಿ ಕೇಂದ್ರ ಸರಕಾರ ಮಾರುಕಟ್ಟೆ ಶಕ್ತಿಗಳು ಮತ್ತು ಲಂಗುಲಗಾಮಿಲ್ಲದ ಕೊಳ್ಳುಬಾಕತನ ಜನಗಳಲ್ಲಿ ಉಂಟು ಮಾಡಿರುವ ಅಭದ್ರತೆಗಳು ಮತ್ತು ಆತಂಕಗಳನ್ನು ಬಳಸಿಕೊಂಡು ಆಕ್ರಮಣಕಾರೀ ಮತ್ತು ನಗ್ನ ರೀತಿಯಲ್ಲಿ ತಮ್ಮ ಕೋಮುವಾದಿ ಅಜೆಂಡಾದ ಮೂಲಕ ಸಾಮಾಜಿಕ ಜೀವನದ ಪ್ರತಿಯೊಂದು ಆಯಾಮವನ್ನು ಕೋಮುಗ್ರಸ್ತಗೊಳಿಸಲು ಪ್ರಯತ್ನಿಸುತ್ತಿವೆ.

ಇಂತಹ ಸಂದರ್ಭದಲ್ಲಿ ಚುನಾವಣಾ ರಂಗದಲ್ಲಿ ಮಾತ್ರವೇ ಕೆಲಸ ಕೋಮುವಾದವನ್ನು ಸಾಮಾಜಿಕ ಜೀವನದಿಂದ ಅಳಿಸಿ ಹಾಕಲಾರದು. ನಾಗರಿಕ ಸಮಾಜ ಮತ್ತು ಸಾಮಾಜಿಕ ಜೀವನದ ಎಲ್ಲ ಮಟ್ಟಗಳಲ್ಲಿ ಕೋಮುವಾದವನ್ನು ಎದುರಿಸುವುದರಿಂದ ಮಾತ್ರವೇ ಪ್ರಗತಿಪರ, ಜನತಾಂತ್ರಿಕ, ವೈಚಾರಿಕ ಮತ್ತು ಎಲ್ಲರನ್ನೂ ಒಳಗೊಳ್ಳುವ ಸಂಸ್ಕೃತಿಯ ಬೆಳವಣಿಗೆಗೆ ನೆಲ ಹದಮಾಡಲು ಸಾಧ್ಯ.

ಭಾರತದ ಜನತೆಯ ಒಳಿತಿಗಾಗಿ, ನಮ್ಮ ಪ್ರೀತಿಪಾತ್ರ ದೇಶ ಭಾರತದ ನಿಜವಾದ ಮುನ್ನಡೆಗಾಗಿ ಜನತೆಯ ಆಶೀರ್ವಾದ ಮತ್ತು ಸಕ್ರಿಯ ಬೆಂಬಲವನ್ನು ಕೋರುತ್ತೇವೆ.

ಮಹಾಧಿವೇಶನದ ಉದ್ಘಾಟನಾ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ಮಾಣಿಕ್ ಸರ್ಕಾರ್ ಅವರ ಅಧ್ಯಕ್ಷೀಯ ಭಾಷಣದ ಕೆಲವು ಅಂಶಗಳು



ರಾಜಕೀಯವಾಗಿ, ಸೈದ್ಧಾಂತಿಕವಾಗಿ ಮತ್ತು ಆರ್ಥಿಕ ಕಾರ್ಯಕ್ರಮ ಮತ್ತು ಧೋರಣೆಗಳ ಪ್ರಶ್ನೆಗಳಲ್ಲಿ ಈ ಸರಕಾರ ದೇಶ ಸ್ವಾತಂತ್ರ್ಯ ನಂತರ ಕಂಡಿರದ ಅತ್ಯಂತ ಜನ-ವಿರೋಧಿ, ಶ್ರೀಮಂತ-ಪರ ಮತ್ತು ಸಂಪೂರ್ಣವಾಗಿ ಪ್ರತಿಕ್ರಿಯಾವಾದಿಯಾಗಿರುವ ಸರಕಾರ.....ಈ ಸರಕಾರ ಒಡೆದು ಆಳುವ ಹೇಯ ಧೋರಣೆಯನ್ನು ಅನುಸರಿಸುತ್ತಿದೆ, ಜಾತ್ಯತೀತತೆಯ ನಮ್ಮ ನೆಚ್ಚಿನ ಸಾಂಸ್ಕೃತಿಕ ಹಂದರವನ್ನು ನಾಶಪಡಿಸುತ್ತಿದೆ, ನಮ್ಮ ಪ್ರಜಾಪ್ರಭುತ್ವದ ಮೇಲೆ ದಾಳಿ ನಡೆಸುತ್ತಿದೆ ಮತ್ತು ಅಮೆರಿಕನ್ ಸಾಮ್ರಾಜ್ಯಶಾಹಿಯ ಕಿರಿಯ ಪಾಲುದಾರನಂತೆ ವರ್ತಿಸುತ್ತಿದೆ. ಕಾರ್ಮಿಕ ವರ್ಗವಲ್ಲದೆ, ದುಡಿಯುವ ಜನಗಳು, ರೈತಾಪಿಗಳು, ಕೃಷಿಕೂಲಿಕಾರರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು, ವಿಶೇಷವಾಗಿ ಮುಸ್ಲಿಂ ಅಲ್ಪಸಂಖ್ಯಾತರು ಮತ್ತು ದಲಿತರು ತೀವ್ರ ದಾಳಿಗಳಿಗೆ ಒಳಗಾಗಿದ್ದಾರೆ.

ಈ ಸನ್ನಿವೇಶವನ್ನು ಸಹಿಸಲು, ಮುಂದುವರೆಯಲು ಬಿಡಲಾಗದು.

.....ಇಂತಹ ಘಟ್ಟದಲ್ಲಿಯೇ ನಮ್ಮ ಪಕ್ಷದ ಮಹಾಧಿವೇಶನದ ಮಹತ್ವ ಇರುವುದು. ಎಡಶಕ್ತಿಗಳು ಅಷ್ಟೇನೂ ಬಲಶಾಲಿಯಾಗಿರದಿದ್ದರೂ ಅವರ ಮಹತ್ವವನ್ನು ಕಡೆಗಣಿಸಲು ಸಾಧ್ಯವಿಲ್ಲ. ವರ್ಗ ಹೋರಾಟಗಳನ್ನು, ಸಾಮೂಹಿಕ ಆಂದೋಲನಗಳನ್ನು ದೇಶದಲ್ಲಿ ಸಂಘಟಿಸುವಲ್ಲಿ ಎಡಶಕ್ತಿಗಳ ಪಾತ್ರ ರಾಜಕೀಯ ವಾತಾವರಣದ ಮೇಲೆ ಸಕಾರಾತ್ಮಕ ಪ್ರಭಾವ ಬೀರುವಲ್ಲಿ ಪಾತ್ರ ವಹಿಸುತ್ತದೆ ಎಂಬುದು ಸಾಬೀತಾಗಿರುವ ಸಂಗತಿ.

ಆದ್ದರಿಂದ ಇದನ್ನು ಗಮನದಲ್ಲಿಟ್ಟುಕೊಂಡು, ಭಾರತದಲ್ಲಿ ಎಡಶಕ್ತಿಗಳ ನಮ್ರ, ಆದರೆ ಮಹತ್ವದ ತುಕಡಿಯಾಗಿ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್ ವಾದಿ), ನಮ್ಮ ದೇಶದ ಜನಸಾಮಾನ್ಯರ ಆಶಯ-ಆಕಾಂಕ್ಷೆಗಳನ್ನು ಈಡೇರಿಸಲು, ಬಿಜೆಪಿ-ಆರೆಸ್ಸೆಸ್ ಕೂಟವನ್ನು ಮೂಲೆಗುಂಪು ಮಾಡಿ ಸೋಲಿಸಲು ಮುಂಬರುವ ದಿನಗಳಲ್ಲಿ ಚೈತನ್ಯಪೂರ್ಣವಾಗಿ ಅನುಸರಿಸಬೇಕಾದ ಒಂದು ಸರಿಯಾದ ರಾಜಕೀಯ ಕಾರ್ಯತಂತ್ರವನ್ನು ವಿಕಾಸಗೊಳಿಸಬೇಕಾಗಿದೆ. ಆದರೆ, ಇದನ್ನು ನಮ್ಮ ನೀತಿಬದ್ಧ ನಿಲುವು ಮತ್ತು ಸಾಮಾಜಿಕ ಹಾಗೂ ವರ್ಗ ಕಣ್ಣೋಟಗಳ ವಿಷಯದಲ್ಲಿ ರಾಜಿ ಮಾಡಿಕೊಳ್ಳದೆ ಮಾಡಬೇಕು ಎಂಬುದು ಸ್ವಯಂವೇದ್ಯ.......

ಭಾರತದ ಜನತೆಯ ಒಳಿತಿಗಾಗಿ, ನಮ್ಮ ಪ್ರೀತಿಪಾತ್ರ ದೇಶ ಭಾರತದ ನಿಜವಾದ ಮುನ್ನಡೆಗಾಗಿ ನಮ್ಮ ಪ್ರಾಮಾಣಿಕ ಮತ್ತು ನಿಷ್ಕಪಟ ಸಾಹಸಕ್ಕೆ ಭಾರತದ ಜನತೆಯ ಆಶೀರ್ವಾದ ಮತ್ತು ಸಕ್ರಿಯ ಬೆಂಬಲವನ್ನು ಮನಪೂರ್ವಕವಾಗಿ ಕೋರುತ್ತೇವೆ.



“.......ಎಡಶಕ್ತಿಗಳ ಮುನ್ನಡೆಗೆ ಹೊಸ ದಿಕ್ಕನ್ನು ತೋರುತ್ತದೆ”

ಪುಟ ೧ ರಿಂದ

ಈ ಪ್ರಹಾರಗಳು ಮತ್ತು ಈಗಿರುವ ಕಾನೂನುಗಳನ್ನು ಕಿತ್ತುಕೊಳ್ಳುವ ಪ್ರಯತ್ನಗಳ ವಿರುದ್ಧ ಎದ್ದು ನಿಂತು ಎರಡು ಅಖಿಲ ಭಾರತ ಕೈಗಾರಿಕಾ ಮುಷ್ಕರ ಕಾರ್ಯಾಚರಣೆಗಳನ್ನು ನಡೆಸಿದೆ, ಮತ್ತು ಒಂದು ಬೃಹತ್ ಮಹಾಪಡಾವ್ ನಡೆಸಿದೆ.

ದೇಶಾದ್ಯಂತ ಬುದ್ಧಿಜೀವಿಗಳು ಮತ್ತು ಸದ್ಭಾವನೆಯ ವ್ಯಕ್ತಿಗಳು ಧಬೋಲ್ಕರ್, ಪನ್ಸರೆ, ಕಲ್ಬುರ್ಗಿ ಮತ್ತು ಗೌರಿ ಲಂಕೇಶ್ ಕಗ್ಗೊಲೆಗಳ ವಿರುದ್ಧ ಹೆಚ್ಚುತ್ತಿರುವ ಅಸಹಿಷ್ಣುತೆಯ ವಿರುದ್ಧ ಪ್ರತಿಭಟನೆಗಳಲ್ಲಿ ಎದ್ದು ನಿಂತಿದ್ದಾರೆ.

ಗೋರಕ್ಷಣೆಯ ಹೆಸರಿನಲ್ಲಿ ದಲಿತ ಮತ್ತು ಮುಸ್ಲಿಮರನ್ನು ಗುರಿಯಾಗಿಸಿ ಮಾರಣಾಂತಿಕ ಹಲ್ಲೆ ನಡೆಸಲಾಗುತ್ತಿದೆ. ನೈತಿಕ ಪೋಲಿಸ್‌ಗಿರಿಯಿಂದ ಯುವ ಜನತೆ ಯಾವ ರೀತಿಯ ಉಡುಪು ತೊಡಬೇಕು, ಯಾವ ಆಹಾರ ಸೇವಿಸಬೇಕು ಮತ್ತು ಯಾರ ಸ್ನೇಹ ಇಟ್ಟುಕೊಳ್ಳಬೇಕು ಎಲ್ಲವನ್ನು ಹೇರಲಾಗುತ್ತಿದೆ. ಆರೆಸ್ಸೆಸ್/ಬಿಜೆಪಿ ಕೃಪಾಪೋಷಿತ ‘ಖಾಸಗಿ ಪಡೆ’ಗಳು ನಮ್ಮ ಸಾಮಾಜಿಕ ವ್ಯವಸ್ಥೆಯನ್ನು ತಮ್ಮ ಹತೋಟಿಯಲ್ಲಿಡಲು ಪ್ರಯತ್ನಿಸುತ್ತಿದ್ದಾರೆ.

ಕಾಶ್ಮೀರ ಕಣಿವೆಯಲ್ಲಿ ಪ್ರಭುತ್ವದ ಬಗ್ಗೆ ಜನಗಳ ಪರಕೀಯ ಭಾವ ಹಿಂದೆಂದೂ ಕಾಣದ ಮಟ್ಟ ತಲುಪಿದೆ. ವಿಚಾರಗಳ ವಲಯದಲ್ಲಿ ವೈಚಾರಿಕತೆಯ ಮೇಲೆ ಅವೈಚಾರಿಕತೆಯ ಅಭೂತಪೂರ್ವ ದಾಳಿಗಳು ನಡೆಯುತ್ತಿವೆ, ಭಾರತೀಯ ಇತಿಹಾಸವನ್ನು ವಿಕೃತಗೊಳಿಸಿ ಅದನ್ನು ಹಿಂದೂ ಪುರಾಣಶಾಸ್ತ್ರದ ಮಟ್ಟಕ್ಕೆ ಇಳಿಸಲಾಗುತ್ತಿದೆ. ಭಾರತೀಯ ತತ್ವಶಾಸ್ತ್ರವನ್ನು ವಿರೂಪಗೊಳಿಸಿ ಅದರ ಸ್ಥಾನದಲ್ಲಿ ಹಿಂದೂ ಧರ್ಮಶಾಸ್ತ್ರವನ್ನು ಕೂರಿಸಲಾಗುತ್ತಿದೆ.....

ಕಳೆದ ಮೂರು ವರ್ಷಗಳಲ್ಲಿ ಜನಗಳ ಹೋರಾಟಗಳ ಹೊಸ ಕ್ಷೇತ್ರಗಳು ಮೂಡಿಬಂದಿವೆ. ದಮನಿತ ಸಮುದಾಯಗಳಿಂದ, ವಿಶೇಷವಾಗಿ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ ನಡುವೆ ಪ್ರತಿಭಟನೆಗಳು , ಬಂಡಾಯಗಳು ಗಟ್ಟಿ ನೆಲೆಯಲ್ಲಿ ಬರುತ್ತಿವೆ. ಇಂತಹ ಚಳುವಳಿಗಳು ಮತ್ತು ಎಡ ಆಂದೋಲನದ ನಡುವೆ ಜಂಟಿ ಹೋರಾಟಗಳಿಗೆ ಹೊಸ ಸಂಪರ್ಕಗಳು ಬೆಸೆದಿವೆ.

ಇದರಿಂದಾಗಿಯೇ ಬಂಗಾಲ, ಕೇರಳ ಮತ್ತು ಇತ್ತೀಚಿನ ಚುನಾವಣಾ ಸೋಲಿನ ನಂತರ ತ್ರಿಪುರಾದಲ್ಲಿ ಎಡ ಶಕ್ತಿಗಳ ಮೇಲೆ ಗುರಿಯಿಡಲಾಗಿದೆ. ಇದನ್ನು ಪ್ರತಿರೋಧಿಸಿ ಸೋಲಿಸಲಾಗುವುದು.......

ಭಾರತದಲ್ಲಿ ನಾವೀಗ ಎದುರಿಸುತ್ತಿರುವ ಸವಾಲುಗಳಿಗೂ ಅಂತರ್ರಾಷ್ಟ್ರೀಯ ಬೆಳವಣಿಗೆಗಳಿಗೂ ಸಂಬಂಧವಿದೆ. ಜಾಗತಿಕ ಬಂಡವಾಳಶಾಹಿಯ ದೀರ್ಘಕಾಲದ ಬಿಕ್ಕಟ್ಟು ನಮ್ಮಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮೇಲೆ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಗರಿಷ್ಟ ಲಾಭಕ್ಕಾಗಿ ನಮ್ಮ ಮಾರುಕಟ್ಟೆಗಳನ್ನು ತೆರೆಯುವ ಒತ್ತಡಗಳನ್ನು ತೀವ್ರಗೊಳಿಸುತ್ತಿದೆ. ಪ್ರಸಕ್ತ ಬಿಜೆಪಿ ಸರಕಾರ ಇಂತಹ ಒತ್ತಡಗಳನ್ನು ಪ್ರತಿರೋಧಿಸುವ ಬದಲು ಅವುಗಳ ಎದುರು ತಲೆಬಾಗುತ್ತಿದೆ. ಈ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ನವ-ಉದಾರವಾದದಲ್ಲೂ ಒಂದು ಬಿಕ್ಕಟ್ಟನ್ನು ಉಂಟುಮಾಡಿದೆ. ಇದಕ್ಕೆ ಪ್ರತಿಯಾಗಿ ಜಾಗತಿಕವಾಗಿ ಬಲಪಂಥದತ್ತ ರಾಜಕೀಯ ಪಲ್ಲಟ ಉಂಟಾಗಿದೆ. ನಿಜ, ಇದನ್ನು ಪ್ರತಿರೋಧಿಸಲಾಗುತ್ತಿದೆ.......

ಸಿಪಿಐ(ಎಂ)ನ ಈ 22ನೇ ಮಹಾಧಿವೇಶನ ಪಕ್ಷದ ಸ್ವತಂತ್ರ ಚಟುವಟಿಕೆಗಳನ್ನು ಬಲಪಡಿಸಲು, ಜನಗಳ ಹೋರಾಟಗಳನ್ನು ತೀವ್ರಗೊಳಿಸಲು ಹಾಗೂ ರಾಜಕೀಯ ಮಧ್ಯಪ್ರವೇಶ ನಡೆಸಲು, ಎಡಶಕ್ತಿಗಳ ಐಕ್ಯತೆಯನ್ನು ಬಲಪಡಿಸಲು ಮತ್ತು ಎಡ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯತೆಯನ್ನು ಬೆಸೆಯಲು ಹೊಸ ದಿಕ್ಕನ್ನು ನೀಡುತ್ತದೆ ಎಂಬ ವಿಶ್ವಾಸ ನನಗಿದೆ. ಅಂತಿಮವಾಗಿ, ಈ ಸವಾಲುಗಳಿಗೆ ಧೋರಣೆಗಳ ಪರ್ಯಾಯವೇ ಉತ್ತರ, ಮತ್ತು ಇದನ್ನು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಮಾತ್ರವೇ ಕೊಡಬಲ್ಲವು.

ಸಿಪಿಐ(ಎಂ)ನ ಈ 22ನೇ ಮಹಾಧಿವೇಶನ ಈ ಬಿಜೆಪಿ ಸರಕಾರವನ್ನು ಸೋಲಿಸಲು ಜಾತ್ಯತೀತ ಪ್ರಜಾಪ್ರಭುತ್ವ ಶಕ್ತಿಗಳನ್ನು ಅಣಿನೆರೆಸಲು ದಿಗ್ದರ್ಶನ ಒದಗಿಸುತ್ತದೆ. ನಮ್ಮ ದೇಶಕ್ಕೆ ಮತ್ತು ಜನತೆಗೆ ಒಂದು ಪರ್ಯಾಯ ಧೋರಣೆಯ ದಿಕ್ಕನ್ನು ಸಾಕಾರಗೊಳಿಸಲು ಜನತೆಯ ಹೋರಾಟಗಳನ್ನು ಇನ್ನಷ್ಟು ಬಲಗೊಳಿಸುವುದು ಅನಿವಾರ್ಯ.

ಸಿಪಿಐ(ಎಂ)ನ್ನು ಮತ್ತಷ್ಟು ಬಲಪಡಿಸಿ,
ಎಡ ಐಕ್ಯತೆಯನ್ನು ಕ್ರೋಡೀಕರಿಸಿ ಮತ್ತು
ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯತೆಯನ್ನು ಬೆಸೆದು ಒಂದು ಪರ್ಯಾಯ ಧೋರಣೆಗಾಗಿ ಜನಗಳ ಹೋರಾಟಗಳನ್ನು ಬಲಪಡಿಸಿ.

“ಹಣಕಾಸು ಅಧಿಕಾರಗಳನ್ನು ಇನ್ನಷ್ಟು ಕೇಂದ್ರೀಕರಿಸಲಿಕ್ಕೆ 15ನೇ ಹಣಕಾಸು ಆಯೋಗವನ್ನು ಬಳಸಲು ಬಿಜೆಪಿ ಸರಕಾರದ ಪ್ರಯತ್ನ”

ಈ ಒಕ್ಕೂಟತತ್ವ-ವಿರೋಧಿ ಮತ್ತು ಪ್ರಜಾಪ್ರಭುತ್ವ-ವಿರೋಧಿ ನಡೆಯನ್ನು ಪ್ರತಿಭಟಿಸಲು ಜನತೆಗೆ ಮಹಾಧಿವೇಶನದ ಮನವಿ

22ನೇ ಮಹಾಧಿವೇಶನ 15ನೇ ಹಣಕಾಸು ಆಯೋಗಕ್ಕೆ ಕೊಟ್ಟಿರುವ ಪರಾಮರ್ಶನಾ ವ್ಯಾಪ್ತಿ ಒಕ್ಕೂಟತತ್ವ-ವಿರೋಧಿ ಮತ್ತು ಪ್ರಜಾಪ್ರಭುತ್ವ-ವಿರೋಧಿ ದನಿಗಳನ್ನು ಹೊಂದಿದೆ ಎಂದು ಆಳವಾದ ಆತಂಕವನ್ನು ವ್ಯಕ್ತಪಡಿಸಿದೆ.

ಒಟ್ಟು ತೆರಿಗೆ ಹಂಚಿಕೆಯಲ್ಲಿ ರಾಜ್ಯಗಳ ಪಾಲನ್ನು ಇಳಿಸುವುದು, ರಾಜ್ಯಗಳಿಗೆ ಲಭ್ಯವಿರುವ ಹಣಕಾಸು ಅವಕಾಶವನ್ನು ಕುಗ್ಗಿಸುವುದು ಮತ್ತು ರಾಜ್ಯ ಕಾರ್ಯಕ್ರಮಗಳ ಮೇಲೆ ಕೇಂದ್ರೀಯ ಪ್ರಾಯೋಜಿತ ಕಾರ್ಯಕ್ರಮಗಳ ಮೇಲ್ಮೆಯನ್ನು, ಸ್ವೀಕರಿಸಲಾಗದ ಶರತ್ತುಗಳನ್ನು ಹೇರುವುದು ಅದರ ಆಶಯ ಎಂದು ಮಹಾಧಿವೇಶನ ಅಂಗೀಕರಿಸಿರುವ ನಿರ್ಣಯ ಹೇಳಿದೆ. ಜನಸಂಖ್ಯೆಯ ಮೂಲವರ್ಷವನ್ನು ಬದಲಿಸಿರುವ ಪ್ರಸ್ತಾವದಿಂದ ಜನಸಂಖ್ಯಾ ಹತೋಟಿಯಲ್ಲಿ ಉತ್ತಮ ಕೆಲಸ ಮಾಡಿರುವ ರಾಜ್ಯಸರಕಾರಗಳ ಹಣಕಾಸನ್ನು ಕಡಿತ ಮಾಡುವ ಗಂಭೀರ ಬೆದರಿಕೆ ಕೂಡ ಉಂಟಾಗಿದೆ ಎಂದು ಈ ನಿರ್ಣಯ ಹೇಳಿದೆ.

ಕೇರಳದ ಥಾಮಸ್ ಐಸಾಕ್ ಈ ನಿರ್ಣಯವನ್ನು ಮಂಡಿಸಿದರು, ತ್ರಿಪುರಾದ ಜಿತೇಂದ್ರ ಚೌಧರಿ ಬೆಂಬಲಿಸಿದರು.

1. 14ನೇ ಹಣಕಾಸು ಆಯೋಗ ಶಿಫಾರಸು ಮಾಡಿರುವ ಕೇಂದ್ರೀಯ ತೆರಿಗೆಗಳಲ್ಲಿ ರಾಜ್ಯಗಳ ಪಾಲನ್ನು 42%ಕ್ಕೆ ಏರಿಕೆಯನ್ನು ಪರಾಮರ್ಶಿಸುವಂತೆ 15ನೇ ಹಣಕಾಸು ಆಯೋಗಕ್ಕೆ ಹೇಳಲಾಗಿದೆ. ಅಲ್ಲದೆ ರಾಜ್ಯಗಳಿಗೆ ರೆವಿನ್ಯೂ ಕೊರತೆ ಅನುದಾನಗಳನ್ನು ಕೊಡಬೇಕೆಂಬ ಸಂವಿಧಾನಿಕ ಅಂಶವನ್ನು ಮುಂದುವರೆಸಬೇಕೇ ಎಂದು ಪರಿಶೀಲಿಸುವಂತೆಯೂ ಹೇಳಲಾಗಿದೆ. ಇವೆರಡು ಧೋರಣೆಗಳಿಂದಾಗಿ ರಾಜ್ಯಗಳಿಗೆ ಸಲ್ಲುವ ಸಂಪನ್ಮೂಲ ಖಂಡಿತವಾಗಿಯೂ ಕಡಿತಗೊಳ್ಳುತ್ತದೆ.
2. ಹಣಕಾಸು ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣಾ ಕಾಯ್ದೆಯ ಪರಾಮರ್ಶೆ ಸಮಿತಿಯ ವರದಿಯ ಶಿಫಾರಸುಗಳ ಜಾರಿಗೆ ಸ್ಪಷ್ಟ ಸೂಚನೆಗಳಿವೆ. ಇಂತಹ ಯಾವುದೇ ನಡೆ ರಾಜ್ಯಗಳಿಗೆ ಅನುಮತಿಯಿರುವ ಹಣಕಾಸು ಕೊರತೆ ಮತ್ತು ಸಾಲ-ಜಿಡಿಪಿ ಅನುಪಾತವನ್ನು ಗಮನಾರ್ಹವಾಗಿ ಇಳಿಸುತ್ತದೆ. ಇದು ರಾಜ್ಯಗಳಿಗೆ ಲಭ್ಯವಿರುವ ಹಣಕಾಸು ಅವಕಾಶವನ್ನು ತೀವ್ರವಾಗಿ ಕುಂಠಿತಗೊಳಿಸುತ್ತದೆ.
3. ರಾಷ್ಟ್ರೀಯ ಜನಸಂಖ್ಯಾ ಧೋರಣೆ ಮತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಮತ್ತು ಸಂಸತ್ತಿನ ನಿರ್ಣಯದಲ್ಲಿ ವಿಧ್ಯುಕ್ತ ಆಶ್ವಾಸನೆಗೆ ತದ್ವಿರುದ್ಧವಾಗಿ ಜನಸಂಖ್ಯಾ ಅಂಶದ ಮೂಲವರ್ಷವನ್ನು 1971ರಿಂದ 2011ಕ್ಕೆ ಪಲ್ಲಟಗೊಳಿಸಲಾಗಿದೆ. ಇದರಿಂದ ಸೂಕ್ತ ಆರೋಗ್ಯ ಮತ್ತು ಕುಟುಂಬ ಯೋಜನಾ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿ ಮಾಡಿರುವ ದಕ್ಷಿಣದ ರಾಜ್ಯಗಳು, ಪಶ್ಚಿಮ ಬಂಗಾಲ, ಒಡಿಶ, ಪಂಜಾಬ್ ಮತ್ತಿತರ ರಾಜ್ಯಗಳ ಆದಾಯದಲ್ಲಿ ಭಾರೀ ನಷ್ಟ ಉಂಟಾಗುತ್ತದೆ.
4. ಆಯೋಗಕ್ಕೆ ಕೊಟ್ಟಿರುವ ಪರಾಮರ್ಶನಾ ವ್ಯಾಪ್ತಿಯಲ್ಲಿ ಕೇಂದ್ರ ಸರಕಾರದ ಕಾರ್ಯಕ್ರಮಗಳಿಗೆ ಪ್ರಾಥಮಿಕತೆ ಕೊಡಲಾಗಿದೆ. ಈ ಕೇಂದ್ರೀಯ ಪ್ರಾಯೋಜಿತ ಕಾರ್ಯಕ್ರಮಗಳ ಗುರಿಗಳಲ್ಲಿ ಹೆಚ್ಚಿನವು ರಾಜ್ಯಗಳ ವ್ಯಾಪ್ತಿಯಲ್ಲಿ ಬರುತ್ತವೆ ಎಂಬುದನ್ನು ಗಮನಿಸಬೇಕು.
5. “ಜನಮರುಳು’ ಕಾರ್ಯಕ್ರಮಗಳನ್ನು ನಿರುತ್ತೇಜಿತಗೊಳಿಸುವ ಒಂದು ಪ್ರಸ್ತಾಪವೂ ಇದರಲ್ಲಿದೆ. ಒಂದು ಕಾರ್ಯಕ್ರಮ ಜನಮರುಳು ಹೌದೋ ಅಲ್ಲವೋ ಎಂಬ ಬಗ್ಗೆ ನಿರ್ಣಯ ರಾಜಕೀಯ ಕ್ಷೇತ್ರಕ್ಕೆ ಸೇರಿದ್ದು, ಹಣಕಾಸು ಆಯೋಗಕ್ಕಲ್ಲ.

ಹಿಂದಿನ ಹಣಕಾಸು ಆಯೋಗಗಳು ಒಂದಾದ ಮೇಲೊಂದರಂತೆ ಶಿಫಾರಸುಗಳನ್ನು ಮಾಡಿದ್ದರೂ ಕೇಂದ್ರ ಮತ್ತು ರಾಜ್ಯಗಳ ಹಣಕಾಸುಗಳ ನಡುವಿನ ಅಸಮತೋಲನ ಹೆಚ್ಚುತ್ತಲೇ ಬಂದಿದೆ. 11ನೇ ಹಣಕಾಸು ಆಯೋಗದಿಂದ ನಂತರ ಅನುದಾನಗಳನ್ನು ಹೆಚ್ಚೆಚ್ಚಾಗಿ ರಾಜ್ಯಗಳಿಗೆ ಹೇರುವ ಶರತ್ತುಗಳಿಗೆ ಒಳಪಡಿಸುವ ಪ್ರವೃತ್ತಿ ಬೆಳೆಯುತ್ತಿದೆ. ಜಿಎಸ್‌ಟಿಯ ಅಂಗೀಕಾರ ರಾಜ್ಯಗಳ ಸಂಪನ್ಮೂಲ ಕ್ರೋಡೀಕರಣ ಸಾಮರ್ಥ್ಯಕ್ಕೆ ಹಾಕಿರುವ ಒಂದು ಹೊಡೆತ. ಬಿಜೆಪಿ ಸರಕಾರ ಹಣಕಾಸು ಅಧಿಕಾರಗಳನ್ನು ಇನ್ನಷ್ಟು ಕೇಂದ್ರೀಕರಿಸಲಿಕ್ಕೆ 15ನೇ ಹಣಕಾಸು ಆಯೋಗವನ್ನು ಬಳಸಲು ಪ್ರಯತ್ನಿಸುತ್ತಿದೆ ಎಂದು ಮಹಾಧಿವೇಶನದ ಈ ನಿರ್ಣಯ ಅಭಿಪ್ರಾಯ ಪಟ್ಟಿದೆ.

ಎಡ ಪ್ರಜಾಪ್ರಭುತ್ವ ರಂಗದ ನೇತೃತ್ವದ ಕೇರಳ ಸರಕಾರ ಈ ಪರಾಮರ್ಶನಾ ವ್ಯಾಪ್ತಿಯನ್ನು ತಿದ್ದುಪಡಿ ಗೊಳಿಸಬೇಕೆಂದು ಆಗ್ರಹಿಸಲು ರಾಜ್ಯಗಳನ್ನು ಒಟ್ಟಿಗೆ ತರಲು ಪ್ರಯತ್ನಗಳನ್ನು ಮಾಡುತ್ತಿರುವುದನ್ನು ಮಹಾಧಿವೇಶನ ಪ್ರಶಂಸಿಸಿದೆ. ಈ ನಿಟ್ಟಿನಲ್ಲಿ ಮೊದಲ ಪ್ರಮುಖ ಹೆಜ್ಜೆಯೆಂದರೆ ಇದೇ ಎಪ್ರಿಲ್ 10ರಂದು ನಡೆದ ದಕ್ಷಿಣದ ರಾಜ್ಯಗಳ ಹಣಕಾಸು ಮಂತ್ರಿಗಳ ಸಮಾಲೋಚನಾ ಸಭೆ. ಕೇರಳ ಸರಕಾರ ಈಗ ಹೆಚ್ಚೆಚ್ಚು ರಾಜ್ಯಗಳನ್ನು ಈ ಬೇಡಿಕೆಗೆ ಬೆಂಬಲವಾಗಿ ಒಟ್ಟಿಗೆ ತರಲು ಪ್ರಯತ್ನಿಸುತ್ತಿದೆ.

ಸಂವಿಧಾನಿಕ ಸಂಸ್ಥೆಯಾದ ಹದಿನೈದನೇ ಹಣಕಾಸು ಆಯೋಗ ಒಂದು ಮುಕ್ತ ಮತ್ತು ನ್ಯಾಯಯುತ ರೀತಿಯಲ್ಲಿ ಕೆಲಸ ನಿರ್ವಹಿಸುವಂತೆ ಮಾಡಲು ಈ ಪರಾಮರ್ಶನಾ ವ್ಯಾಪ್ತಿಯಲ್ಲಿ ತಿದ್ದುಪಡಿಗಳ ಬೇಡಿಕೆಯ ಆಗ್ರಹದ ಬೆಂಬಲಕ್ಕೆ ಬರಬೇಕು ಎಂದು ಸಿಪಿಐ(ಎಂ)ನ 22ನೇ ಮಹಾಧಿವೇಶನ ಜನತೆಗೆ ಮನವಿ ಮಾಡಿಕೊಂಡಿದೆ.



ಸವಾಲುಗಳು, ನೀರಿಕ್ಷೆಗಳು....

ಪುಟ ೧ ರಿಂದ

ಪೊಲಿಟ್‌ಬ್ಯುರೊ ಚಾಲನಾ ಸಮಿತಿಯಾಗಿ ಕೆಲಸ ನಿರ್ವಹಿಸುತ್ತಿದೆ.

ನಿರ್ಣಯಗಳ ಸಮಿತಿ:
ಸುಭಾಷಿಣಿ ಅಲಿ (ಸಂಯೋಜಕರು)
ಥಾಮಸ್ ಐಸಾಕ್,
ಡಾ.ಹೇಮಲತಾ,
ನೀಲೋತ್ಪಲ ಬಸು
ಡಾ.ವಿ.ಕೆ.ರಾಮಚಂದ್ರನ್

ಅರ್ಹತಾ ಸಮಿತಿ:
ಯು. ವಾಸುಕಿ (ಸಂಯೋಜಕರು)
ಕೆ.ಎನ್ ಬಾಲಗೋಪಾಲ್,
ಜಿತೇಂದ್ರ ಚೌಧುರಿ
ಜೇಬೇಶ್ ಸರ್ಕಾರ್

ದಾಖಲಾತಿ ಸಮಿತಿ
ಜೆ.ಎಸ್.ಮಜುಂದಾರ್ (ಸಂಯೋಜಕರು)
ಕೆ.ಎನ್. ಉಮೇಶ್
ಎಂ. ಶರ್ಮ,
ಜೈಕ್ ಸಿ ಥಾಮಸ್
ಸೋಮನಾಥ್ ಭಟ್ಟಾಚಾರ್ಯ
ಮಧು ಗರ್ಗ್
ಮೈಮೂನಾ ಮೊಲ್ಲ

ಕೇಂದ್ರ ಸಮಿತಿಯ ಪರವಾಗಿ ಪ್ರಕಾಶ ಕಾರಟ್ ಕರಡು ರಾಜಕೀಯ ನಿರ್ಣಯವನ್ನು ಮಂಡಿಸಿದರು.

ಬಿಜೆಪಿ-ಆರೆಸ್ಸೆಸ್ ಸರಕಾರವನ್ನು ಸೋಲಿಸಬೇಕೆಂಬ ಸರ್ವ ಸಮ್ಮತ ಗುರಿಯ ಸಾಧನೆಗೆ ಅನುಸರಿಸಬೇಕಾದ ರಾಜಕೀಯ-ಕಾರ್ಯತಂತ್ರದ ಧೋರಣೆಯ ಬಗ್ಗೆ ಕೇಂದ್ರಸಮಿತಿಯೊಳಗೆ ಒಂದು ಭಿನ್ನ ಅಭಿಪ್ರಾಯ ವಿರುವುದರಿಂದ ಮತ್ತು ಪಕ್ಷದ ಮಹಾಧಿವೇಶನ ಪ್ರಶ್ನೆಯನ್ನು ನಿರ್ಧರಿಸುವ ಅತ್ಯುನ್ನತ ವೇದಿಕೆಯಾದ್ದರಿಂದ, ಪಕ್ಷದ ಆಂತರಿಕ ಪ್ರಜಾಪ್ರಭುತ್ವ, ವಾದ-ವಿವಾದ ಮತ್ತು ಚರ್ಚೆಗಳ ಅತ್ಯುತ್ತಮ ಪರಂಪರೆಯಂತೆ, ಕೇಂದ್ರ ಸಮಿತಿಯಲ್ಲಿನ ಅಲ್ಪಮತದ ಅಭಿಪ್ರಾಯವನ್ನು ಸೀತಾರಾಮ್ ಯೆಚುರಿಯವರು ಪ್ರತಿನಿಧಿಗಳ ಮುಂದೆ ಮಂಡಿಸಿದರು.

ಮಹಾಧಿವೇಶನ-ಪೂರ್ವ ತಿದ್ದುಪಡಿಗಳ ಕುರಿತಾದ ವರದಿಯನ್ನು ಮಂಡಿಸಲಾಯಿತು. ಕರಡು ರಾಜಕೀಯ ನರ್ಣಯಕ್ಕೆ 286 ತಿದ್ದುಪಡಿಗಳನ್ನು ಕೇಂದ್ರ ಸಮಿತಿ ಅಂಗೀಕರಿಸಿತು.

ರಾಜಕೀಯ ನಿರ್ಣಯದ ಮೇಲಿನ ಚರ್ಚೆಗಳು ಎಪ್ರಿಲ್ 19 ರಂದು ಬೆಳಗ್ಗೆ ಆರಂಭವಾದವು. ಇವು ಎಪ್ರಿಲ್ 20 ರ ಮಧ್ಯಾಹ್ನದ ವರೆಗೂ ನಡೆದಿವೆ. ಒಟ್ಟು 47 ಸಂಗಾತಿಗಳು ಚರ್ಚೆಯಲ್ಲಿ ಭಾಗವಹಿಸಿದರು. ಕರ್ನಾಟಕದಿಂದ ವಿಜೆಕೆ ನಾಯರ್ ಮತ್ತು ಮೀನಾಕ್ಷಿಸುಂದರಂ ಮಾತನಾಡಿದರು.

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಕರಡು ರಾಜಕೀಯ ವರದಿಯನ್ನು ಚಾಲನಾ ಸಮಿತಿಯಾಗಿ ಕೆಲಸ ನಿರ್ವಹಿಸುತ್ತಿರುವ ಪೊಲಿಟ್‌ಬ್ಯುರೊ ಸೂಚಿಸಿದ ಒಂದು ಮಹತ್ವದ ತಿದ್ದುಪಡಿಯೊಂದಿಗೆ ಮಹಾಧಿವೇಶನ ಅಂಗೀಕರಿಸಿದೆ ಎಂದು ತಿಳಿದು ಬಂದಿದೆ.

ಗಡಿನಾಡಿನ ವಿಶಿಷ್ಟ ರಾಜಕೀಯ ಕ್ಷೇತ್ರವಾಗಿರುವ ಶ್ರೀನಿವಾಸಪುರ ವಿಧಾನ ಸಭಾಕ್ಷೇತ್ರ

ಇಡೀ ಜಿಲ್ಲೆಯಲ್ಲಿಯೇ ಭೌಗೋಳಿಕವಾಗಿ ದೊಡ್ಡ ವಿಧಾನ ಸಭಾ ಕ್ಷೇತ್ರವಾಗಿರುವ ಶ್ರೀನಿವಾಸಪುರ ತಾಲ್ಲೂಕಿನ 5 ಹೋಬಳಿ ಜೊತ್ತೆಗೆ ಕೋಲಾರ ತಾಲ್ಲೂಕಿನ ಸುಗಟೂರು ಮತ್ತು ಹೋಳೂರು ಹೋಬಳಿ, ಸೇರಿಕೊಂಡು 286 ಮತದಾನ ಕೇಂದ್ರಗಳಿದ್ದು ಮಹಿಳೆಯರು 94,012 ಪುರುಷರು 96745 ಸೇರಿ ಒಟ್ಟು 1,90,757 ಮತದಾರರಿದ್ದಾರೆ. ಇಲ್ಲಿ ಪಕ್ಷ ನಿಷ್ಠೆಗಿಂತ ವ್ಯಕ್ತಿ ನಿಷ್ಠೆಯೇ ಪ್ರಾಮೂಖ್ಯತೆ ಪಡೆದಿದೆ ಇಲ್ಲಿ 40 ವರ್ಷಗಳಿಂದ ಎರಡು ವ್ಯಕ್ತಿಗಳ ನಡುವೆ ರಾಜಕೀಯ ಧ್ರುವೀಕರಣಗೊಂಡಿದೆ ಇಬ್ಬರಲ್ಲಿ ಯಾರೊಬ್ಬರು ಎರಡನೇ ಅವಧಿಗೆ ಪುನರಾಯ್ಕೆ ಆಗಿರುವುದಿಲ್ಲ. ಕಾಂಗ್ರೆಸ್ ಮತ್ತು ಜನತಾ ಪರಿವಾರದ ಭಾಗವಾಗಿಯೇ **ಕೆ.ಆರ್. ರಮೇಶ್‌ಕುಮಾರ್ ಮತ್ತು ಜಿ.ಕೆ.ವೆಂಕಟಶಿವಾರೆಡ್ಡಿ** ಜಯವನ್ನು ಸಾಧಿಸಿದ್ದಾರೆ ಇಲ್ಲಿಯ ತನಕ ಇಲ್ಲಿನ ಮತದಾರರು 3ನೇ ಪರ್ಯಾರ್ಯ ಶಕ್ತಿಯನ್ನು ಬೆಳೆಸಲು ಪ್ರೋತ್ಸಾಹಿಸಿಲ್ಲ. ಕಳೆದ ಇಪ್ಪತ್ತು ವರ್ಷಗಳಿಂದ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಬಿ.ಜೆ.ಪಿ 3000 ಮತಗಳನ್ನು ದಾಟಿ ಮುಂದೆ ಹೋಗಲು ಸಾಧ್ಯವಾಗಿಲ್ಲ.

ಇಂತಹ ವಿಶಿಷ್ಟ ಕ್ಷೇತ್ರದಲ್ಲಿ ಸಿ.ಪಿ.ಐ(ಎಂ) ಪಕ್ಷ ಮೊಟ್ಟ ಮೊದಲಿಗೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದೆ. ಈ ಕ್ಷೇತ್ರದಲ್ಲಿ ಪ್ರಮುಖ ಕೃಷಿ ಮಾವು, ರೇಷ್ಮೆ, ಹೈನುಗಾರಿಕೆ ಮತ್ತು ತರಕಾರಿ, ಬೆಳೆಗಳಾಗಿವೆ. ಯಾವುದೇ ನದಿ ನೀರಿನ ಮೂಲಗಳಿಲ್ಲದ ಈ ಭಾಗದ ಕೃಷಿ ಸಾಕಷ್ಟು ಸಂಕಷ್ಟಗಳನ್ನು ಎದುರಿಸುತ್ತಿದೆ. ಕೃಷಿ ಕೂಲಿ ಕಾರ್ಮಿಕರು ಬೆಂಗಳೂರು ನಗರಕ್ಕೆ ವಲಸೆ ಹೋಗುವುದು ಹೆಚ್ಚಾಗಿದೆ. ಶೈಕ್ಷಣಿಕವಾಗಿ ಈ ಕ್ಷೇತ್ರ ಜಿಲ್ಲೆಯಲ್ಲಿ ಮುಂದೆ ಇದ್ದರೂ ಯಾವುದೇ ಕೈಗಾರಿಕೆಗಳು ಈ ಕ್ಷೇತ್ರದಲ್ಲಿ ಇಲ್ಲದಿರುವುದರಿಂದ ವಿದ್ಯಾವಂತರು ಕ್ಷೇತ್ರದಿಂದ ಹೊರಗೆ ಉದ್ಯೋಗಗಳನ್ನು ಹುಡುಕುವುದಾಗಿದೆ. ಅಸಂಘಟಿತ ಕಾರ್ಮೀಕ ವರ್ಗ ದೊಡ್ಡ ಪ್ರಮಾಣದಲ್ಲಿ ಸೃಷ್ಟಿಯಾಗುತ್ತಿದೆ. ಕ್ಷೇತ್ರದಲ್ಲಿ ಇಲ್ಲಿಯ ತನಕ ಗೆದ್ದು ಬಂದವರು ರಸ್ತೆ, ಮನೆ, ಕುಡಿಯುವ ನೀರಿನ ವಿಷಯಗಳು ಬಿಟ್ಟರೆ ಇಡೀ ಕ್ಷೇತ್ರದ ಜನರ ಅವಶ್ಯಕತೆಗಳನ್ನು ಪೂರೈಸುವಲ್ಲಿ ವಿಫಲರಾಗಿದ್ದಾರೆ. ಮಾವು ಸೇರಿದಂತೆ ಕೃಷಿ ಆಧಾರಿತ ಕೈಗಾರಿಕೆಗಳ ಸ್ಥಾಪನೆ ಅಗತ್ಯವಿದೆ. ಸಂಸ್ಕರಣ ಘಟಕಗಳು ಸ್ಥಾಪನೆಯಾಗಬೇಕಾಗಿದೆ. ದಲ್ಲಾಳಿ ನೀತಿಗಳಿಂದ ಮುಕ್ತವಾದ ರೈತಪರ ಮಾರುಕಟ್ಟೆ ಸ್ಥಾಪಿಸಬೇಕಾಗಿದೆ. ಜಿಲ್ಲೆಯ ರೇಷ್ಮೆ ಮತ್ತು ಹೈನುಗಾರಿಕೆ ಉಳಿಸುವ ಕ್ರಮಗಳು ಆಗಬೇಕಾಗಿದೆ. ಜನರನ್ನು ವಂಚಿಸುವ ಸರ್ಕಾರಿ ಇಲಾಖೆಗಳಲ್ಲಿನ ಭ್ರಷ್ಟಾಚಾರ ನಿಲ್ಲಬೇಕಾಗಿದೆ. ಒಂದು ಕುಟುಂಬಕ್ಕೆ ವಾಸಿಸಲು ಮನೆ ನಿರ್ಮಿಸಿಕೊಳ್ಳಲು ಸಾಧ್ಯವಾಗಲಾರದ ನಿವೇಶನ ರಹಿತರಿಗೆ ನಿವೇಶನ ಹಂಚಬೇಕಾಗಿದೆ ಹತ್ತಾರು ವರ್ಷಗಳಿಂದ ಕೃಷಿ ಸಾಗುವಳಿ ಮಾಡುತ್ತಿರುವ ರೈತರಿಗೆ ಭೂಮಿ ಹಂಚಬೇಕಾಗಿದೆ ಇವುಗಳ ಜೊತೆಗೆ ಶುದ್ಧ ಕುಡಿಯುವ ನೀರಿಗಾಗಿ ಮತ್ತು ಕೃಷಿಗಾಗಿ ಶಾಶ್ವತ ನೀರಾವರಿ ಯೋಜನೆಗಳು ಜಾರಿಗೊಳ್ಳಬೇಕಾಗಿದೆ.

ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇದ್ದರೂ ಜನ ಸಾಮಾನ್ಯರೂ ತಮ್ಮ ಜೀವನವನ್ನು ಅಂಗೈಯಲ್ಲಿ ಹಿಡಿದುಕೊಂಡು ಬದುಕಬೇಕಾಗಿದೆ ವೈದ್ಯಾಧಿಕಾರಿಗಳ ನಿರ್ಲಕ್ಷೆಯಿಂದ ಉತ್ತಮ ಸೇವೆ ಸಿಗುತ್ತಿಲ್ಲ ತಾಲ್ಲೂಕು ಕೇಂದ್ರದ ಆಸ್ಪತ್ರೆಯಲ್ಲಿ ತುರ್ತುಸೇವೆಗಳು ಲಭ್ಯವಾಗುತ್ತಿಲ್ಲ ಸರ್ಕಾರಿ ಶಾಲಾ–ಕಾಲೇಜುಗಳು ಇದ್ದರು ಶಿಕ್ಷಕರ ಕೊರತೆ ಮತ್ತು ಮೂಲಭೂತ ಸೌಲಭ್ಯಗಳ ಕೊರತೆಯಿಂದ ಓದುವ ವಿದ್ಯಾರ್ಥಿಗಳು ಖಾಸಗಿ ಶಿಕ್ಷಣ ಕೇಂದ್ರಗಳ ಕಡೆ ಹೋಗುತ್ತಿದ್ದಾರೆ. ಪದವಿ ಪೂರ್ವ ಮತ್ತು ನಂತರ ಪದವಿ ಶಿಕ್ಷಣ ಮಾಡುವ ವಿದ್ಯಾರ್ಥಿಗಳಿಗೆ ಹಾಸ್ಟಲ್ ಸೌಲಭ್ಯ ಸಂರ್ಪಕವಾಗಿಲ್ಲ ಇಂತಹ ಹತ್ತು ಹಲವು ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿರುವ ಗಡಿನಾಡಿನ ವಿಶಿಷ್ಟ ರಾಜಕೀಯ ಕ್ಷೇತ್ರವಾಗಿರುವ ಶ್ರೀನಿವಾಸಪುರ ವಿಧಾನ ಸಭೆ ಕ್ಷೇತ್ರದಿಂದ ಜನರಿಗಾಗಿ ಎಂತಹದೇ ಹೋರಾಟಕ್ಕೆ ಸಿದ್ದವಿರುವ ಜನಪರ ಹೋರಾಟಗಾರ ರೈತ ಕಾರ್ಮಿಕ ನಾಯಕನಾಗಿ ದುಡಿಯುತ್ತಿರುವ **ಪಿ.ಆರ್. ಸೂರ್ಯನಾರಾಯಣಸ್ವಾಮಿ** ರವರನ್ನು ಮೊದಲ ಬಾರಿಗೆ **ಸಿ.ಪಿ.ಐ(ಎಂ)** ಪಕ್ಷವು ತನ್ನ ಅಭ್ಯರ್ಥಿಯಾನ್ನಾಗಿ ಶ್ರೀನಿವಾಸಪುರ ವಿಧಾನ ಸಭಾ ಕ್ಷೇತ್ರದಿಂದ ಚುನಾವಣೆಗೆ ನಿಲ್ಲಿಸುತ್ತಿದೆ.



ಸಿಪಿಐ(ಎಂ) ಅಭ್ಯರ್ಥಿ ಪಿ.ಆರ್. ಸೂರ್ಯನಾರಾಯಣಸ್ವಾಮಿ

ಸಿ.ಪಿ.ಐ(ಎಂ) ಕೋಲಾರ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರು, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಪಿ.ಆರ್. ಸೂರ್ಯನಾರಾಯಣಸ್ವಾಮಿ ಕಳೆದ 30 ವರ್ಷಗಳಿಂದ ಜನಚಳುವಳಿ ಮತ್ತು ರಾಜಕೀಯ ಚಳುವಳಿಯಲ್ಲಿ ಗುರ್ತಿಸಿಕೊಂಡು **ಪಿ.ಆರ್. ಅಥವಾ ಸೂರ್ಯನಾರಾಯಣ್** ಎಂಬ ಹೆಸರಿನಿಂದ ಸಾರ್ವಜನಿಕರಿಗೆ ಚಿರಪರಿಚಿತರಾಗಿದ್ದಾರೆ.



ಸಾಧಾರಣ ರೈತ ಕುಟುಂಬದಲ್ಲಿ ಜನಿಸಿದ ಇವರು ತಮ್ಮ ಪದವಿ ಪೂರ್ವ ಶಿಕ್ಷಣವನ್ನು ಶ್ರೀನಿವಾಸಪುರದಲ್ಲೇ ಮುಗಿಸಿ ತಾಂತ್ರಿಕ ಶಿಕ್ಷಣವನ್ನು ಕೆ.ಜಿ.ಎಫ್.ನಲ್ಲಿ ಮತ್ತು ಪದವಿ ಶಿಕ್ಷಣವನ್ನು (ಬಿ.ಎ) ಕೋಲಾರದ ಸರ್ಕಾರಿ ಕಾಲೇಜಿನಲ್ಲಿ ಪಡೆದರು. ವ್ಯಾಸಂಗ ಮಾಡುವಾಗ ತಮ್ಮ ನೆಚ್ಚಿನ ತಾಂತ್ರಿಕ ಶಿಕ್ಷಕ ವೆಂಕಟೇಶ ಮೂರ್ತಿರವರ ಸಹಕಾರದಿಂದ 1989 ರಲ್ಲಿ ಎಸ್‌ಎಫ್‌ಐ ಸಂಘಟನೆ ಮೂಲಕ ವಿದ್ಯಾರ್ಥಿ ಚಳುವಳಿಯಲ್ಲಿ ಗುರ್ತಿಸಿಕೊಂಡ ಇವರು ಇವರ ಹೆಂಡತಿ ಜಿ. ಈಶ್ವರಮ್ಮ ಮತ್ತು ತಮ್ಮನಾದ ಪಾತಕೋಟೆ **ನವೀನ್‌ಕುಮಾರ್** ಸೇರಿದೆಂತೆ ಇಡೀ ಕುಟುಂಬವೇ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದಾರೆ.

1992 ರಲ್ಲಿ ದೇಶದಲ್ಲಿ ಉಂಟಾದ ತೀವ್ರ ಕೋಮುಗಲಭೆಗಳ ಸಂದರ್ಭದಲ್ಲಿ ಕೋಮು ಸಾಮರಸ್ಯಕ್ಕಾಗಿ ಸಿ.ಪಿ.ಐ(ಎಂ) ಪಕ್ಷ ನಡೆಸಿದ ಕಾರ್ಯಕ್ರಮಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಸದಸ್ಯರಾದರು ಜೀವನದ ಭದ್ರತೆಗಾಗಿ ದೊರಕಿದ ಹಲವು ಅವಕಾಶಗಳನ್ನು ಬದಿಗಟ್ಟು ದುಡಿಯುವ ರೈತಾಪಿ–ಕೃಷಿ ವರ್ಗ ಮತ್ತು ಅಸಂಘಟಿತ ಕಾರ್ಮಿಕ ವರ್ಗದ ಸಮಸ್ಯೆಗಳ ಪರಿಹಾರಕ್ಕಾಗಿ ದುಡಿಯುತ್ತಿದ್ದಾರೆ. 1993 ರಿಂದಲೇ ಕರ್ನಾಟಕ ರೈತ ಸಂಘದ ಜಿಲ್ಲಾ ಸಮಿತಿ ಸದಸ್ಯರಾಗಿ ನಂತರ ಅವಿಭಜಿತ ಕೋಲಾರ ಜಿಲ್ಲೆಯ ಪ್ರಧಾನ ಕಾರ್ಯದರ್ಶಿಯಾಗಿ ಈಗಲು ಸಂಘದ ಜಿಲ್ಲಾ ಅಧ್ಯಕ್ಷರಾಗಿ ಸಿ.ಪಿ,ಐ(ಎಂ) ಪಕ್ಷದ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿ, ತಾಲ್ಲೂಕಿನ ಸಿಐಟಿಯು ಅಸಂಘಟಿತ ಕಾರ್ಮಿಕ ಸಂಘಟನೆಗಳ ಸ್ಥಾಪಕರಾಗಿ, ಗೌರವಾಧ್ಯಕ್ಷರಾಗಿ ಹಾಗೂ KPRS ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯ ಕಾರ್ಯದರ್ಶಿಗಳಲ್ಲಿ ಒಬ್ಬರಾಗಿ ಕೆಲಸ ಮಾಡುತ್ತಿದ್ದಾರೆ. 1995 ರ ಗ್ಯಾಟ್ ಒಪ್ಪಂದದ ವಿರುದ್ಧ ಪೂರ್ವದಲ್ಲಿ ನಡೆದ 1994 ರ ಮೊದಲ ಪ್ರತಿಭಟನೆಯಾಗಿ ಅವರ ಸ್ವಂತ ಗ್ರಾಮ ಪಣಸಮಾಕನಹಳ್ಳಿ ಗೇಟ್‌ನಲ್ಲಿ ನಡೆಸಿದ ರಸ್ತೆ–ತಡೆ ಚಳುವಳಿಯಿಂದ ಬಂಧನಕ್ಕೆ ಒಳಗಾದ ಇವರು 1996 ರ ನಂತರ ರೈತರ ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುತ್ ದರ ನಿಗದಿ ಮತ್ತು ಮೀಟರೀಕರಣದ ವಿರುದ್ಧ ನಡೆದ ಹಲವು ಹೋರಾಟಗಳಲ್ಲಿ ಬಂದನಕ್ಕೆ ಒಳಗಾಗಿ ನ್ಯಾಯಾಲಯಗಳ ಮೆಟ್ಟಿಲು ಏರಬೇಕಾಯಿತು. ಕೋಲಾರ ಜಿಲ್ಲೆಯ ಹೈನುಗಾರಿಗೆ ಪ್ರಶ್ನೆಗಳನ್ನು ತೆಗೆದುಕೊಂಡು ನಡೆಸಿದ ಹೋರಾಟ ಇಡೀ ರಾಜ್ಯದ ಗಮನ ಸೆಳೆದಿದ್ದು 1994 ರಲ್ಲಿ ನಡೆದ ಈ ಹೋರಾಟದಲ್ಲಿ ಮೀಸಲು ಪೊಲೀಸರು ನಡೆಸಿದ ಲಾಠಿ ಚಾರ್ಜುನಿಂದ ತೀವ್ರವಾಗಿ ಗಾಯಗೊಂಡಿದ್ದು ಇವರು ಈ ಕೇಸಿನಲ್ಲಿ 13 ವರ್ಷ ಕೋರ್ಟ್ ಅಲೆದರು. 2002 ರಿಂದ ಪ್ರಾರಂಭವಾದ ಶಾಶ್ವತ ನೀರಾವರಿ ಹೋರಾಟದಲ್ಲಿ ಪೂರ್ಣವಾಗಿ ತೊಡಗಿಸಿಕೊಂಡ ಇವರು 2015 ರ ತಾಲ್ಲೂಕು ಕಛೇರಿ ಮುತ್ತಿಗೆ ಹೋರಾಟದಲ್ಲಿಯೂ ಬಂಧನಕ್ಕೆ ಒಳಗಾಗಿ ಕೋರ್ಟಿಗೆ ಅಲೆಯಬೇಕಾಯಿತು. ಕಳೆದ 10 ವರ್ಷಗಳಿಂದ ನಡೆಯುತ್ತಿರುವ ಮನೆ ನಿವೇಶನ, ಬಗುರ್‌ಹುಕ್ಕುಂ ಸಾಗುವಳಿ ಸಕ್ರಮಕ್ಕೆ ನಡೆದ ಹೋರಾಟದಲ್ಲಿ, ಅಸಂಘಟಿತ ಕಾರ್ಮಿಕರಾದ ಗ್ರಾಮ ಪಂಚಾಯಿತಿ ಅಂಗನವಾಡಿ, ಬಿಸಿಯೂಟ ನೌಕರ ಹೋರಾಟಗಳಲ್ಲಿ ಅನೇಕ ಬಾರಿ ಬಂಧನಕ್ಕೆ ಒಳಗಾಗಿದ್ದಾರೆ. ಟಮೋಟೋ ಬೆಲೆ ಕುಸಿದಾಗ 2006 ರಲ್ಲಿ ರೈತರಿಗೆ ಬೆಂಬಲ ಬೆಲೆ ನೀಡಲು ಒತ್ತಾಯಿಸಿ ಜಿಲ್ಲಾಧಿಕಾರಿ ಕಛೇರಿ ಮುಂದಿ 3 ದಿನ ಉಪವಾಸ ಸತ್ಯಗ್ರಹ ನಡೆಸಿದ ಸೂರಿರವರು ಇಡೀ ರಾಜ್ಯದಲ್ಲಿಯೇ ಪ್ರಸಿದ್ದ ಮಾವಿನ ಹಣ್ಣಿನ ನಗರವಾದ ಶ್ರೀನಿವಾಸಪುರದಲ್ಲಿ ರೈತಪರ ಮಾರುಕಟ್ಟೆ ಸ್ಥಾಪನೆಗಾಗಿ ಹಲವು ವರ್ಷಗಳಿಂದ ಚಳುವಳಿ ನಡೆಸುತ್ತಿದ್ದಾರೆ.

ಜಿಲ್ಲೆಯಲ್ಲಿ ಕುಡಿಯಲು ಶುದ್ಧ ನೀರಿನ ಘಟಕಗಳ ಸ್ಥಾಪನೆಗಾಗಿ, ಬಿಪಿಎಲ್ ಕಾರ್ಡುಗಳಿಗೆ ಕುಟುಂಬಕ್ಕೆ 35 ಕೆ.ಜಿ. ಆಹಾರ ನೀಡಲು ಒತ್ತಾಯಿಸಿ, ಜಾನುವಾರು ಸಾಂಕ್ರಮಿಕ ರೋಗ ನಿವಾರಣೆ, ಹಸಿರು ಮೇವಿನ ಕೊರತೆ ನೀಗಿಸಲು ಒತ್ತಾಯಿಸಿ, ಬರಗಾಲದ ಸಂದರ್ಭದಲ್ಲಿ ರೈತರ ಸಾಲ ಮನ್ನಾ ಹಾಗೂ ಪರಿಹಾರಗಳಿಗೆ ಒತ್ತಾಯಿಸಿ, ಮತ್ತು ಉದ್ಯೋಗವಾಕಾಶಗಳ ಸೃಷ್ಠಿಗಾಗಿ ವ್ಯಾಪಕ ಪ್ರಚಾರಗಳನ್ನು ಸಂಘಟಿಸಿ ಜಿಲ್ಲಾಡಳಿತ ಮಧ್ಯ ಪ್ರವೇಶಿಸುವಂತೆ ಯಶಸ್ವಿಯಾಗಿದ್ದಾರೆ.

13 ವರ್ಷದ ಬಾಲಕನಾಗಿ ಅಂದಿನ ರೈಲ್ವೆ ಹೋರಾಟದಲ್ಲಿ ಭಾಗಿಯಾಗಿ ಇವರು ಮುಂದೆ ಅದೇ ರೈಲ್ವೆ ಹೋರಾಟ ಸಮಿತಿಯ ಕಾರ್ಯದರ್ಶಿಯಾಗಿ, ತಾಲ್ಲೂಕಿನ ಸಮಗ್ರ ಅಭಿವೃದ್ಧಿಗಾಗಿ ರಚನೆಗೊಂಡ ನಾಗರೀಕ ಮೂಲಭೂತ ಹಕ್ಕುಗಳ ಹೋರಾಟ ಸಮಿತಿಯ ಅಧ್ಯಕ್ಷಕಾಗಿ ಇಂದಿಗೂ ಕೆಲಸ ಮಾಡುತ್ತಾ ದಲಿತರ ಹಕ್ಕುಗಳಿಗಾಗಿ ಮತ್ತು ಕೋಮು ಸೌಹರ್ದ್ಯತೆ ಹಾಗೂ ಮತ್ತು ಸಾಮರಸ್ಯಕ್ಕಾಗಿ ದುಡಿಯುತ್ತಿದ್ದಾರೆ.

ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ: ಸಿಪಿಐ(ಎಂ) ಚುನಾವಣಾ ಕಚೇರಿ ಉದ್ಘಾಟನೆ

ಏಪ್ರಿಲ್ 17ರಂದು ಮಂಗಳೂರು ನಗರ ದಕ್ಷಿಣ ವಿಧಾನ ಸಭಾ ಕ್ಷೇತ್ರದ ಸಿಪಿಐ(ಎಂ) ಪಕ್ಷದ ಚುನಾವಣಾ ಕಚೇರಿಯ ಉದ್ಘಾಟನೆ ನಡೆಯಿತು. ಅಖಿಲ ಭಾರತ ವಕೀಲರ ಸಂಘದ ರಾಜ್ಯಾಧ್ಯಕ್ಷರಾದ ಯಶವಂತ ಮರೋಳಿ ಕಚೇರಿ ಉದ್ಘಾಟಿಸಿ ಮಾತನಾಡುತ್ತ ಈ ವಿಧಾನ ಸಭಾ ಕ್ಷೇತ್ರದಲ್ಲಿ ಸಿಪಿಐ(ಎಂ) ಜನಪರ ಹೋರಾಟಗಳನ್ನು ನಡೆಸುತ್ತ ಬಂದಿದೆ, ಪಕ್ಷದ ರಾಜಿರಹಿತ ಹೋರಾಟದಿಂದಾಗಿ ಜಿಲ್ಲೆಯಲ್ಲಿ ಪಕ್ಷದ ಪ್ರಭಾವ, ಪ್ರಚಾರ ಹೆಚ್ಚಿದೆ. ಒಟ್ಟಿನಲ್ಲಿ ಜಿಲ್ಲೆಯ ಬಡವರ ಹಿತವನ್ನು ಕಾಯುವ ಏಕೈಕ ಪಕ್ಷವೇ ಸಿಪಿಐ(ಎಂ) ಎಂದು ಅವರು ಹೇಳಿದರು.

ಸಿಪಿಐ(ಎಂ) ಪಕ್ಷಕ್ಕಿರುವ ಪ್ರಭಾವ ಪ್ರಚಾರದ ಜೊತೆ ಈ ಬಾರಿಯ ಅಭ್ಯರ್ಥಿ ಸುನೀಲ್ ಕುಮಾರ್ ಬಜಾಲ್ ಕೂಡ ಈ ಕ್ಷೇತ್ರದಲ್ಲಿ ಚಿರಪರಿಚಿತರು. ಜಿಲ್ಲೆಯಲ್ಲಿ ನಡೆದ ಹಲವು ಗಂಭೀರ ಸಮಸ್ಯೆಗಳಿಗೆದುರಾಗಿ ನಡೆದ ಹೋರಾಟಕ್ಕೆ ನೇತೃತ್ವ ವಹಿಸಿದವರು. ಕಳೆದ 25 ವರ್ಷ ತನ್ನ ವಿದ್ಯಾರ್ಥಿ ದೆಸೆಯಿಂದಲೂ ವಿದ್ಯಾರ್ಥಿ ಯುವಜನರ ಮಧ್ಯೆ ನಿರಂತರವಾಗಿ ಅವರ ಸಮಸ್ಯೆಗಳಿಗೆದುರಾಗಿ ಧ್ವನಿ ಎತ್ತಿದ್ದಾರೆ. ಅದರಲ್ಲಿ ಇತ್ತೀಚೆಗೆ ನಡೆದ ಬೀದಿಬದಿ ವ್ಯಾಪಾರಸ್ಥರ ಹೋರಾಟ, ನಿವೇಶನರಹಿತರ ಹೋರಾಟಗಳಿಗೆ ಸುನೀಲ್ ಕುಮಾರ್ ಬಜಾಲ್ ನೇತೃತ್ವದಲ್ಲಿ ನಡೆದ ಯಶಸ್ವಿ ರಾಜಿರಹಿತ ಹೋರಾಟದಿಂದಾಗಿ ಬೀದಿಬದಿ ವ್ಯಾಪಾರಸ್ಥರಿಗೆ ಸರಿಯಾದ ಮೂಲಭೂತ ಸೌಕರ್ಯ ಹಾಗೂ ನಿವೇಶನರಹಿತರಿಗೆ ನಿವೇಶನ ಒದಗಿಸುವ ಸರ್ಕಾರದ ತೀರ್ಮಾನದ ಹಿಂದೆ ಸುನಿಲ್ ಕುಮಾರ್ ಬಜಾಲ್ ಬೆಂಬಿಡದೆ ಹೋರಾಟ ನಡೆಸಿರುತ್ತಾರೆ. ಸಿಪಿಐ(ಎಂ) ಬಡವರ ಜನಸಾಮಾನ್ಯರ ಧ್ವನಿಯಾಗಿದೆ. ಸಿಪಿಐ(ಎಂ) ಪಕ್ಷದ ಕಚೇರಿ ಇದು ಸಮಾಜದಲ್ಲಿ ಅನ್ಯಾಯಗೊಳಗಾದ, ಜನಸಾಮಾನ್ಯರ ಸಮಸ್ಯೆಗಳನ್ನು ಚರ್ಚಿಸುವ ವೇದಿಕೆ ಇಂತಹ ಪಕ್ಷದ ಕಚೇರಿ ಉದ್ಘಾಟಿಸಲು ಹೆಮ್ಮೆ ಎನಿಸಿದೆ. ಈ ನಿಟ್ಟಿನಲ್ಲಿ ಪಕ್ಷದ ಅಭ್ಯರ್ಥಿಯಾಗಿ ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ ಸುನಿಲ್ ಕುಮಾರ್ ಬಜಾಲ್‌ರವರನ್ನು ವಿಧಾನಸಭೆಗೆ ಆರಿಸುವ ಮೂಲಕ ವಿಧಾನಸೌಧದಲ್ಲೂ ಜನಸಾಮಾನ್ಯರ ಪರವಾದ ಧ್ವನಿ ಮೊಳಗಬೇಕೆಂದು ಮರೋಳಿಯವರು ಹೇಳಿದರು.

ಈ ವೇಳೆ ವೇದಿಕೆಯಲ್ಲಿ ಸಿಪಿಐ(ಎಂ) ಪಕ್ಷದ ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಸುನಿಲ್ ಕುಮಾರ್ ಬಜಾಲ್, ಚುನಾವಣಾ ಸಮಿತಿ ಕಾರ್ಯದರ್ಶಿ ಸಂತೋಷ್ ಬಜಾಲ್, ಪಕ್ಷದ ಜಿಲ್ಲಾ ಮುಖಂಡರಾದ ಯೋಗೀಶ್ ಜಪ್ಪಿನಮೊಗರು ಉಪಸ್ಥಿತರಿದ್ದರು.

ವರದಿ: ಸಂತೋಷ್ ಬಜಾಲ್

ಈಗ ನೋಟುರದ್ದತಿ ಇಲ್ಲದೆಯೇ ನಗದಿಗಾಗಿ ಪರದಾಟ:

ಅಯೋಗ್ಯತೆಯೋ ಅಥವ ನಗದುಹೀನತೆಗೆ ಮತ್ತೊಂದು ದಬಾವಣೆ!



ವೇದರಾಜ ಎನ್.ಕೆ.

ಮತ್ತೆ ಜನಗಳು ನಗದಿಗಾಗಿ ಪರದಾಡುವ 'ಒಳ್ಳೆಯ ದಿನ'ಗಳನ್ನು ಕಾಣುತ್ತಿದ್ದಾರೆಯೇ? ದಿಲ್ಲಿ, ಮುಂಬೈಯಲ್ಲಿ ಮಾತ್ರವಲ್ಲ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ಗುಜರಾತ್, ರಾಜಸ್ತಾನ , ಉತ್ತರಪ್ರದೇಶ, ಮಧ್ಯಪ್ರದೇಶ, ಛತ್ತೀಸ್‌ಗಡ ಹೀಗೆ ಹಲವು ರಾಜ್ಯಗಳ ಹಲವೆಡೆಗಳಲ್ಲಿ 'ನೋ ಕ್ಯಾಶ್' ಭೀತಿ ಆವರಿಸಿದೆ ಎಂದು ವರದಿಯಾಗಿದೆ. ಇದು ಒಮ್ಮೆಲೇ ಉದ್ಭವವಾಗಿರುವ ಸಮಸ್ಯೆ ಅಲ್ಲ. ಅಂದರೆ 'ಕನಿಷ್ಟ ಸರಕಾರ'ದ ಇನ್ನೊಂದು ಉದಾಹರಣೆಯಾಗಿ ಜನಗಳನ್ನು ಕಾಡಲಾರಂಭಿಸಿದೆ.

ನೋಟುರದ್ದತಿಯ ನಂತರ ಸುಮಾರಾಗಿ ಎಲ್ಲ ನೋಟುಗಳೂ ಚಲಾವಣೆಗೆ ಬಂದಿವೆ ಎಂದು ತಿಂಗಳ ಹಿಂದೆಯಷ್ಟೇ ವರದಿಯಾಗಿತ್ತು. ಅರ್ಧರಾತ್ರಿ ನೋಟುರದ್ದತಿ ಫರ್ಮಾನ್‌ನ ಸ್ವಲ್ಪವೇ ಮೊದಲು 17.74ಲಕ್ಷ ಕೋಟಿ ರೂ. ಚಲಾವಣೆಯಲ್ಲಿದ್ದದ್ದು, ಈಗ ಎಪ್ರಿಲ್ 6, 2018ರಂದು ಮತ್ತೆ 18.17 ಲಕ್ಷ ಕೋಟಿ ರೂ. ತಲುಪಿದೆ ಎಂದು ರಿಝರ್ವ್ ಬ್ಯಾಂಕ್ ಹೇಳಿದೆ.

ಆದರೂ ಏಕೆ ಈಗ ನೋಟುರದ್ದತಿ ಇಲ್ಲದೆಯೇ ನೋಟಿಗಾಗಿ ಮತ್ತೆ ಅದೇ ಪರದಾಟ? ಸರಕಾರ ಮತ್ತು ರಿಝರ್ವ್ ಬ್ಯಾಂಕ್ ಪರಸ್ಪರ ಬೊಟ್ಟು ಮಾಡುತ್ತಿವೆ. ಎರಡು ಕಾರಣಗಳನ್ನು ವಿಶ್ಲೇಷಕರು ಹೇಳುತ್ತಾರೆ. ಒಂದು, ಕರೆನ್ಸಿ ನೋಟುಗಳ ಸರಿಯಾದ ಸಾಗಾಟ ಮಾಡಲಾಗದ ಅದಕ್ಷತೆ. ಇನ್ನೊಂದು 1000ರೂ.ರದ್ದು ಮಾಡಿ 2000ರೂ. ನೋಟುಗಳನ್ನು ತಂದುದರ ದುಷ್ಫಲ ಎನ್ನುತ್ತಾರೆ ಇನ್ನು ಕೆಲವರು. ಒಂದು ರೀತಿಯಲ್ಲಿ ಇದೂ ಅದಕ್ಷ ಆಳ್ವಿಕೆಯ ಪರಿಣಾಮವೇ ತಾನೇ? ಆದರೆ ವಿಷಯ ಅಷ್ಟೇ ಅಲ್ಲ ಎನ್ನುತ್ತಾರೆ ಇನ್ನು ಕೆಲವು ವಿಶ್ಲೇಷಕರು.

ಕಪ್ಪು ಹಣ ತಡೆಯುವುದೇ ನೋಟುರದ್ದತಿಯ ಉದ್ದೇಶವಾಗಿದ್ದರೆ 1000ರೂ. ಬದಲು 2000ರೂ. ನೋಟುಗಳನ್ನು ತಂದದ್ದಾರೂ ಏಕೆ ಎಂಬ ಪ್ರಶ್ನೆ ಈಗ ಮತ್ತೆ ತಲೆಯೆತ್ತಿದೆ. ಈ ದೊಡ್ಡ ಮೊತ್ತದ ನೋಟುಗಳು ಬಹುಪಾಲು ಜನಗಳಿಗೆ ತಲೆನೋವು ತರುತ್ತಿದ್ದರೆ, ಬಹುಶಃ ಕಪ್ಪು ಹಣದ ವ್ಯವಹಾರ ನಡೆಸುವವರಿಗೆ ಅದು ನೆರವಾಗಿದೆ ಎನ್ನಲಾಗುತ್ತಿದೆ.

ಈಗ ಮತ್ತೆ ನಗದು ಸಮಸ್ಯೆ ಉಂಟಾಗಿರುವುದು, ಅಥವ ಉಂಟಾಗುವಂತೆ ಮಾಡಿರುವುದು ನಗದು ರಹಿತತೆಯನ್ನು ಜನಸಾಮಾನ್ಯರ ಮೇಲೆ ಹೇರುವ ಇನ್ನೊಂದು ಪ್ರಯತ್ನ ಎಂದೂ ಕೆಲವರಿಗೆ ಅನಿಸುತ್ತಿದೆ.

ನೋಟುರದ್ದತಿಯ ನಂತರ ಪೇಟಿಎಂ ಪೂರ್ಣಪುಟದ 'ಕೃತಜ್ಞತೆ'ಯ ಜಾಹೀರಾತುಗಳು ಪ್ರಧಾನಿಗಳ ಫೋಟೋದಿಂದ ವಿವಾದಾಸ್ಪದವಾದದ್ದನ್ನು ನೆನಪಿಸಿಕೊಳ್ಳಬಹುದು. ಈ ಬಾರಿಯೂ ಜನಗಳ ಪರದಾಟದ ಫಲಾನುಭವಿಗಳು ಯಾರೋ ದೊಡ್ಡ ಕುಳಗಳು ಇರಬಹುದು ಎಂಬ ಗುಮಾನಿ ಸಹಜವಾಗಿ ಹರಡಿದೆ (ನ್ಯೂಸ್‌ಕ್ಲಿಕ್. ಇನ್, ಎಪ್ರಿಲ್ 17).

ಈಗ ಹೊಸದಾಗಿ ಆರಂಭವಾಗಿರುವ ಪೇಮೆಂಟ್ ಬ್ಯಾಂಕುಗಳ ಸರದಿ ಎನ್ನಲಾಗಿದೆ. ಇತ್ತೀಚೆಗೆ ಅಂಬಾನಿ ಗುಂಪಿನ ಜಿಯೊ ಪೇಮೆಂಟ್ಸ್ ಬ್ಯಾಂಕ್ ಆರಂಭವಾಗಿದೆ. ಇದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಮತ್ತು ರಿಲಯನ್ಸ್ ಇಂಡಸ್ಟ್ರಿಸ್ ನಡುವಣ 70:30 ಪಾಲುದಾರಿಕೆಯ ಕಂಪನಿ. ಈ ಎರಡು ದೈತ್ಯ ಕಂಪನಿಗಳ ಪ್ರವೇಶ ಈ ಕ್ಷೇತ್ರದಲ್ಲಿ ಇತರ ಕಂಪನಿಗಳನ್ನು ಕುಬ್ಜರಾಗಿಸಿದೆಯಂತೆ. ಆದ್ದರಿಂದ ಜನಗಳ ಈ ಬಾರಿಯ ಪರದಾಟ ಯಾರ ಕಲ್ಯಾಣಕ್ಕಾಗಿ ಇರಬಹುದು ಎಂಬುದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವ ಅಗತ್ಯ ಇಲ್ಲ ಎನ್ನುತ್ತಾರೆ ವಿಶ್ಲೇಷಕರು. ಕೊನೆಗೂ ಚಮಚಾ ಬಮಡವಾಳಶಾಹಿಗೆ ಬೆಲೆ ತೆರಬೇಕಾದವರು ಜನಸಾಮಾನ್ಯರೇ ತಾನೇ? ಅದರಲ್ಲೂ ಅಚ್ಛೆದಿನ್‌ಗಳು ನಿಜವಾಗಿ ಯಾರಿಗೆ ಎಂದು ಈಗ ನಾಲ್ಕು ವರ್ಷಗಳಾಗುವಾಗ ಯಾವ ಸಂದೇಹವೂ ಉಳಿಯದಿರುವಾಗ.

ದುರ್ಬಲಗೊಂಡಿರುವ ದೌರ್ಜನ್ಯ ತಡೆ ಕಾಯ್ದೆ: ನ್ಯಾಯಾಲಯಕ್ಕೆ ಎಡ ಸರಕಾರದ ಸವಾಲು, ಅಚ್ಛೇ ದಿನ್ ಸರಕಾರಗಳ ತರಾತುರಿಯ ಪಾಲನೆ!

ದೌರ್ಜನ್ಯ ತಡೆ ಕಾಯ್ದೆ ಕುರಿತ ಇತ್ತೀಚಿನ ಸುಪ್ರಿಂ ಕೋರ್ಟ್ ತೀರ್ಪಿಗೆ ದೇಶಾದ್ಯಂತ ವ್ಯಕ್ತವಾದ ಹಿನ್ನೆಲೆಯಲ್ಲಿ ಕೊನೆಗೂ ಕೇಂದ್ರ ಸರಕಾರ ಅದರ ಮರು ಪರಿಶೀಲನೆಗೆ ಅರ್ಜಿ ಸಲ್ಲಿಸಿತು. ಎಪ್ರಿಲ್ 14 ರಂದು ಕೇರಳದ ಎಲ್‌ಡಿಎಫ್ ಸರಕಾರ ಒಂದು ಪ್ರತ್ಯೇಕ ಮರುಪರಿಶೀಲನೆ ಅರ್ಜಿಯನ್ನು ಸುಪ್ರಿಂ ಕೋರ್ಟ್ ಮುಂದೆ ಸಲ್ಲಿಸಿದ ಮೊದಲ ರಾಜ್ಯ ಸರಕಾರವಾಗಿದೆ. ಈ ತೀರ್ಪು ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳಲ್ಲಿ ಅಭದ್ರತೆಯ ಮೂಲವಾಗಿ ಬಿಟ್ಟಿದೆ ಎಂದು ಕೇಂದ್ರ ಸರಕಾರದ ಅರ್ಜಿಯಲ್ಲಿನ ಅಂಶಗಳನ್ನು ಬೆಂಬಲಿಸುತ್ತಲೇ ಕೇರಳದ ಅರ್ಜಿ ಹೇಳಿದೆ. ಕೇಂದ್ರ ಸರಕಾರದ ಅರ್ಜಿ ಈ ತೀರ್ಪು ಅಸಾಮರಸ್ಯ ಉಂಟು ಮಾಡುತ್ತಿದೆ, "ದೊಡ್ಡ ಹಾನಿ" ಉಂಟು ಮಾಡಿದೆ ಎಂದಿತ್ತು. ಕೇರಳದ ಅರ್ಜಿ ಈ ಹಿಂದೆ ಸ್ವತಃ ಸುಪ್ರಿಂ ಕೋರ್ಟ್ ಈ ಕಾಯ್ದೆಯ ಅಂಶಗಳು ಕಟ್ಟುನಿಟ್ಟಾಗಿ ಜಾರಿಯಾಗಬೇಕು ಎಂದಿತ್ತು ಎಂದು ನೆನಪಿಸುತ್ತ ಸಮಾಜದ ದುರ್ಬಲ ವಿಭಾಗವೊಂದರ ರಕ್ಷಣೆಗೆ ಸಂಸತ್ತು ಅಂಗೀಕರಿಸಿರುವ ಒಂದು ಕಾಯ್ದೆಯನ್ನು ಸುಪ್ರಿಂ ಕೋರ್ಟ್ ದುರ್ಬಲಗೊಳಿಸುವಂತಿಲ್ಲ ಎಂದೂ ಹೇಳಿದೆ.

ಅತ್ತ ಕನಿಷ್ಟ ಮೂರು ರಾಜ್ಯ ಸರಕಾರಗಳು ಈ ಕಾಯ್ದೆಯನ್ನು ದುರ್ಬಲಗೊಳಿಸುವ ಸುಪ್ರಿಂ ಕೋರ್ಟ್ ಆದೇಶವನ್ನು ಜಾರಿಗೆ ತರುವ ವಿಧ್ಯುಕ್ತ ಆದೇಶಗಳನ್ನು ಹೊರಡಿಸಿವೆ ಎಂದು ವರದಿಯಾಗಿದೆ. ಈ ಮೂರೂ ರಾಜ್ಯಗಳು ಮಧ್ಯಪ್ರದೇಶ, ರಾಜಸ್ತಾನ ಮತ್ತು ಛತ್ತೀಸ್‌ಗಡ ಅಚ್ಛೇ ದಿನ್ ಪಕ್ಷದ ಸರಕಾರಗಳಾಗಿರುವುದು ಮತ್ತು ಈ ಆದೇಶವನ್ನು ಪ್ರಶ್ನಿಸಿರುವುದು ಒಂದು ಎಡನೇತೃತ್ವದ ರಾಜ್ಯ ಸರಕಾರವಾಗಿರುವುದು ಕೇವಲ ಕಾಕತಾಳೀಯ ಎನ್ನಬೇಕೇ?

ಅಚ್ಛೇ ದಿನ್ ಸರಕಾರ ಇರುವ ಹಿಮಾಚಲಪ್ರದೇಶದಲ್ಲಿ ಪೋಲೀಸ್ ಅಧಿಕಾರಿಗಳ ನಡುವೆ ಅನೌಪಚಾರಿಕ ಆದೇಶಗಳು ಹರಿದಾಡುತ್ತಿವೆಯಂತೆ. ಛತ್ತೀಸ್‌ಗಡ ಸರಕಾರ ಇದು ಅದರ ಹುಸಿ ದಲಿತ ಪ್ರೇಮವನ್ನು ಪ್ರದರ್ಶಿಸಿದೆಯೆಂದು ಕಾಂಗ್ರೆಸ್ ಟೀಕಿಸಿದಾಗ ವಿಧ್ಯುಕ್ತ ಆದೇಶವನ್ನು ಹಿಂತೆಗೆದುಕೊಂಡಿದೆಯಂತೆ. ಅದರೆ ಅದೇ ಕಾಂಗ್ರೆಸ್ ಆಳ್ವಿಕೆಯ ಕರ್ನಾಟಕದಲ್ಲೂ ಅನೌಪಚಾರಿಕವಾಗಿ ಈ ಆದೇಶ ಪೋಲೀಸ್ ಅಧಿಕಾರಿಗಳ ನಡುವೆ ಸುತ್ತುತ್ತಿದೆಯಂತೆ.

ನ್ಯಾಯಾಲಯದಲ್ಲಿ ಈ ತೀರ್ಪಿನ ಬಗ್ಗೆ ಮರು ಪರಿಶೀಲನೆ ಅರ್ಜಿ ವಿಚಾರಣೆಯಲ್ಲಿರುವಾಗ ದಲಿತರು, ಬುಡಕಟ್ಟುಗಳ ನಡುವೆ ಸಂಕಟ ಉಂಟು ಮಾಡಿರುವ ಒಂದು ಆದೇಶವನ್ನು ಪಾಲಿಸುವ ತರಾತುರಿ ಈ ರಾಜ್ಯಗಳಿಗೆ ಏಕೆ ಎಂದು ನಿವೃತ್ತ ಹಿರಿಯ ಅಧಿಕಾರಿಯೊಬ್ಬರು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ (ನ್ಯೂಸ್‌ಕ್ಲಿಕ್. ಇನ್, ಎಪ್ರಿಲ್ 17). ಜತೆಗೇ ತಮ್ಮ ಸರ್ವೋಚ್ಚ ನಾಯಕನ ನೇತೃತ್ವದ ಸರಕಾರವೇ ಮರುಪರಿಶೀಲನೆಯ ಅರ್ಜಿ ಹಾಕಿರುವಾಗ ಇವರ ತರಾತುರಿಯೂ ಆಶ್ಚರ್ಯಕರ ಅಲ್ಲವೇ ಅಥವ ಕೇವಲ ಒತ್ತಡದಿಂದಾಗಿ ಆ ಅರ್ಜಿ ಹಾಕಿದ್ದು ಎಂದು ಇದರಿಂದ ಅರ್ಥಮಾಡಿಕೊಳ್ಳಬೇಕೆ ಎಂಬ ಪ್ರಶ್ನೆಯೂ ಸಹಜ.

ಇನ್ನೆಷ್ಟು ದಿನ ಈ ಮೌನವ್ರತ, ಆಪದ್ಬಾಂದವಗಿರಿ, ಸಾರ್!


ಕೊನೆಗೂ ಪ್ರಧಾನಿಗಳು ದೇಶದ ಹೆಣ್ಣು ಮಕ್ಕಳಿಗೆ ನ್ಯಾಯ ಸಿಗುತ್ತದೆ ಎಂದು ತಮ್ಮ ಮೌನವ್ರತ ಮುರಿದಿದ್ದಾರೆ. ಅದರೆ ಈಗ ಇದೂ ಒಂದು ಪ್ಯಾಟರ್ನ್ ಆಗಿಬಿಟ್ಟಿದೆ ಎಂಬುದು ಹಲವರ ಗಮನಕ್ಕೆ ಬಂದಿದೆ. ಆದ್ದರಿಂದ ಈ ಮೌನಭಂಗ ಎಷ್ಟು ಪ್ರಾಮಾಣಿಕವಾದ್ದು ಎಂಬ ಸಂದೇಹ ಹಲವರಿಗೆ. ಪ್ರಧಾನಿಗಳು ಇರುಸುಮುರುಸು ಮಾಡುವ ಸಾಮಾಜಿಕ ಪ್ರಶ್ನೆಗಳು ಬಂದಾಗ ಅವನ್ನು ಎದುರಿಸಲು ಒಂದು ಅಸಾಮಾನ್ಯ ದಾರಿ ಹುಡುಕಿಕೊಂಡಂತೆ ಕಾಣುತ್ತದೆ. ಮೌನವ್ರತ ಅದರ ಮುಖ್ಯ ಭಾಗ. ಅವರ ಭಕ್ತರು ಗಮನ ಬೇರೆಡೆಗೆ ತಿರುಗಿಸಲು ಪ್ರತಿಪಕ್ಷಗಳ ಮೇಲೆ ದಾಳಿ ಮಾಡುತ್ತಾರೆ. ಹೇಗೂ ನೆಚ್ಚಿಕೆಯ ಟಿವಿ ಚಾನೆಲ್‌ಗಳು ಅವರ ನೆರವಿಗೆ ಇರುತ್ತವೆ. ಜನಗಳ ಆಕ್ರೋಶ ಮೇರೆ ಮೀರುತ್ತಿದೆ ಎಂದು ಕಂಡು ಬಂದಾಗ ಆಪದ್ಬಾಂಧವನಂತೆ ಅವತರಿಸುತ್ತಾರೆ. ಸಮಾಧಾನ ಹೇಳುತ್ತಾರೆ. ಎಲ್ಲವೂ ಸುಖಾಂತ.

ಆಳುವ ಪಕ್ಷ ಮತ್ತು ಸರಕಾರದ ಮಂದಿಗಳೇ ಪಾತ್ರಧಾರಿಗಳಾಗಿರುವ ಉನ್ನಾವ್ ಮತ್ತು ಕಥುವಾ ಪ್ರಕರಣಗಳಲ್ಲಿ ಈ ತಂತ್ರ ಎದ್ದು ಕಂಡಿದೆ, ಆದರೆ ಅದು ಕೇವಲ ತಂತ್ರ ಎಂದೂ ಹೆಚ್ಚೆಚ್ಚು ಮಂದಿಗೆ ಅರ್ಥವಾಗಲಾರಂಭಿಸಿದೆ.

ಈ ಬಾರಿಯ ಅವರ ಸಮಾಧಾನದ ಮಾತುಗಳಲ್ಲಿ ಕಥುವ ಅಥವ ಉನ್ನಾವ್ ಎಂಬ ಪದಗಳು ಬಾಯಿ ತಪ್ಪಿಯೂ ಬರಲಿಲ್ಲ, ಅವರಿಗೆ ಇವು ಎರಡು 'ಇತ್ತೀಚಿನ ಪ್ರಕರಣಗಳು' ಮಾತ್ರವೇ ಎಂದೊಬ್ಬ ಹಿರಿಯ ಪತ್ರಕರ್ತರು ಆತಂಕದಿಂದ ಪ್ರಶ್ನಿಸಿದ್ದಾರೆ.

49 ನಿವೃತ್ತ ಐಎಎಸ್/ಐಪಿಎಸ್ ಇತ್ಯಾದಿ ಆಡಳಿತಗಾರರು ಇಂತಹ ಭೀಕರ ಘಟನೆಗಳಿಗೆ ನೀವೇ ಹೊಣೆಗಾರರು ಎಂದು ನೇರವಾಗಿಯೇ ಬಹಿರಂಗ ಪತ್ರ ಬರೆದಿದ್ದಾರೆ. ಇಂತಹ ವಿಳಂಬದ ನಿವೇದನೆಗಳು, ಆಶ್ವಾಸನೆಗಳು ಇನ್ನು ಸಾಕು, ಕೋಮು ದಳ್ಳುರಿಯನ್ನು ಸದಾ 'ಜ್ವಲಂತ'ವಾಗಿ ಇಡುವ ಮಂದಿ ಸಂಘ ಪರಿವಾರದಲ್ಲೇ ಗೂಡು ಕಟ್ಟಿಕೊಂಡಿರುವಾಗ ಇವೆಲ್ಲ ಅರ್ಥಹೀನ ಎಂದಿರುವ ಈ ಹಿರಿಯ ಆಡಳಿತಗಾರರು ಪ್ರಧಾನಿಗಳು ಉನ್ನಾವ್ ಮತ್ತು ಕಥುವಾದ ಕುಟುಂಬಗಳ ಬಳಿ ಹೋಗಿ ಕ್ಷಮೆ ಕೇಳಬೇಕು ಎಂದು ಹೇಳಿದ್ದಾರೆ.

ತ್ರಿಪುರಾದ ಹೊಸ ಅಚ್ಛೇ ದಿನ್ ಮುಖ್ಯಮಂತ್ರಿಗಳು, ಮಾಜಿ ಪ್ರಚಾರಕರು, ಹೊಸದೊಂದು ಆವಿಷ್ಕಾರವನ್ನು ಮುಂದಿಟ್ಟಿದ್ದಾರೆ. ಯುರೋಪಿಯನ್ನರು ಇಂಟರ್ನೆಟ್ ಮತ್ತು ಉಪಗ್ರಹಗಳನ್ನು ಕಂಡು ಹಿಡಿದವರು ತಾವೇ ಎನ್ನುತ್ತಾರೆ. ಅದರೆ ಅದು ನಮ್ಮಲ್ಲಿ ಬಹಳ ಮೊದಲೇ ಇತ್ತು. ಮಹಾಭಾರತ ಕಾಲದಲ್ಲೇ ಇತ್ತು ಎಂದು ಮುಖ್ಯಮಂತ್ರಿಗಳು ಕಂಪ್ಯೂಟರ್‌ಗೆ ಸಂಬಂಧಪಟ್ಟ ಒಂದು ಸಮಾರಂಭದಲ್ಲಿ ಹೇಳಿದ್ದಾರೆ. ಈ ಬಗ್ಗೆ ಪ್ರತಿಕೂಲ ಪ್ರತಿಕ್ರಿಯೆಗಳು ಬಂದಾಗ ಅದನ್ನು ಮತ್ತೆ ಸಮರ್ಥಿಸಿಕೊಂಡಿದ್ದಾರೆ – ಸುದ್ದಿ



ವ್ಯಂಗ್ಯಚಿತ್ರ: ಸಂದೀಪ ಅಧ್ವರ್ಯು, ಟೈಮ್ಸ್‌ಆಫ್ ಇಂಡಿಯ

ಈ ಸೆಸ್‌ಗಳನ್ನು ಹಾಕುವುದೇಕೆ, ಅದನ್ನು ಬಳಸದಿರುವುದೇಕೇ?

ಸೆಸ್ ಅಂದರೆ ಉಪಕರ, ತೆರಿಗೆಯ ಮೇಲಿನ ತೆರಿಗೆ, ಸರಕಾರಗಳು ಜನರಿಂದ ಸಂಪನ್ಮೂಲ ವಸೂಲಿಗೆ ಕಂಡುಕೊಂಡಿರುವ ಇನ್ನೊಂದು ದಾರಿ. ಕೆಲವು ಉನ್ನತ ಗುರಿಗಳನ್ನು ತೋರಿಸಿ ಈ ಸೆಸ್‌ಗಳನ್ನು ಹಾಕಲಾಗುತ್ತದೆ. ಆದರೆ ಆ ಗುರಿಗಳಿಗೆ ಅದರ ಬಳಕೆಯಾಗುವುದಿಲ್ಲ . ಇದು ಕಾಂಗ್ರೆಸ್–ಮುಕ್ತತೆಯ , ಗರಿಷ್ಠ ಆಳ್ವಿಕೆಯ ಘೋಷಣೆ ಕೊಟ್ಟಿರುವ ಅಚ್ಛೇ ದಿನ್‌ಗಳಲ್ಲಿ ಹಿಂದೆಂದಿಗಿಂತಲೂ ಹೆಚ್ಚಾಗಿದೆ ಎಂದು ಅಧ್ಯಯನ ವೊಂದು (ರವಿ ಕೌಶಲ್, ನ್ಯೂಸ್‌ಕ್ಲಿಕ್.ಇನ್, ಎ.17) ಹೇಳುತ್ತದೆ.

ಅಚ್ಛೇದಿನ್ ಸರಕಾರ ಸ್ವಚ್ಛ ಭಾರತ್ ಸೆಸ್, ಕೃಷಿ ಕಲ್ಯಾಣ ಸೆಸ್ ಇತ್ಯಾದಿ ಅದಾಗಲೇ ಇದ್ದ ಸೆಸ್‌ಗಳ ಭಂಡಾರಕ್ಕೆ ಇನ್ನೂ ಹಲವನ್ನು ಸೇರಿಸಿತು. ರಾಜ್ಯಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರಿಸುತ್ತ ಸರಕಾರವೇ ಕೊಟ್ಟಿರುವ ಮಾಹಿತಿ ಹೀಗಿದೆ: 2014ರಿಂದ 2017ರ ನಡುವೆ 4,.04 ಲಕ್ಷ ಕೋಟಿ ರೂ.ಗಳನ್ನು ಈ ಮೂಲಕ ಸಂಗ್ರಹಿಸಿದೆ. ಆದರೆ ಬಳಸಿರುವುದು 2.3ಲಕ್ಷ ಕೋಟಿ ರೂ.ಗಳಷ್ಟು ಮಾತ್ರವೇ, ಅಂದರೆ 57%ದಷ್ಟು.

ಈ ಮೂರು ವರ್ಷಗಲಲ್ಲಿ ಈ ಸರಕಾರ 31,228 ಕೋಟಿ ರೂ.ಗಳಷ್ಟು ಉನ್ನತ ಶಿಕ್ಷಣ ಸೆಸ್ ಸಂಗ್ರಹಿಸಿದೆ. ಆದರೆ ಇದರಲ್ಲಿ ಒಂದು ರೂಪಾಯಿ ಕೂಡ ಬಳಸಿಕೊಂಡಿಲ್ಲ, ಆದರೆ ಅತ್ತ ಐಐಟಿ ಸೇರಿದಂತೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ 50% ದಷ್ಟು ಶಿಕ್ಷಕ ಹುದ್ದೆಗಳು ಖಾಲಿ ಇವೆ,

ಇನ್ನೂ ಗಂಭೀರ ಸಂಗತಿಯೆಂದರೆ ಕಟ್ಟಡ ಕಾರ್ಮಿಕರ ಕಲ್ಯಾಣಕ್ಕೆಂದು 29,000 ಕೋಟಿ ರೂ. ಸಂಗ್ರಹವಾಗಿದೆ,ಅದರಲ್ಲಿ 10% ಕೂಡ ಖರ್ಚು ಮಾಡಿಲ್ಲ. ಈ 10% ಖರ್ಚು ಕೂಡ ಕಾರ್ಮಿಕರ ಕಲ್ಯಾಣಕ್ಕೆ ಆದದ್ದು ಅಲ್ಲ ಎಂದು ಸುಪ್ರಿಂ ಕೋರ್ಟ್ ಕೂಡ ಸರಕಾರವನ್ನು ತರಾಟೆಗೆ ತಗೊಂಡಿದೆ ಎನ್ನುತ್ತಾರೆ ರವಿ ಕೌಶಲ್.

ಟೀಕೆ ಎಂಬುದು ಪ್ರಜಾಪ್ರಭುತ್ವದ ಸೌಂದರ್ಯ, ಆದರೆ ಅದು ಸಾಕಷ್ಟು ಸಂಶೋಧನೆ ಮತ್ತು ಸರಿಯಾದ ನಿಜಸಂಗತಿಗಳನ್ನು ಆಧರಿಸಿರಬೇಕು, ಎಂದು ಲಂಡನ್ನಿನಲ್ಲಿ ಸಂದರ್ಶನವೊಂದರಲ್ಲಿ ಪ್ರಧಾನಿಗಳು ಹೇಳಿದ್ದಾರೆ, ಈ ಮೂಲಕ ತಮ್ಮ ವಿರುದ್ಧದ ಟೀಕೆಗಳು ಕೇವಲ ಆಪಾದನೆಗಳಷ್ಟೇ ಎಂದು ಸೂಚಿಸಿದ್ದಾರೆ. ಅವರ ಲಂಡನ್ ಭೇಟಿಯ ವೇಳೆಯಲ್ಲೇ ಜಮ್ಮು ಬಾಲಕಿಯ ಅತ್ಯಾಚಾರ ಮತ್ತು ಕೊಲೆಯ ವಿರುದ್ಧ ಪ್ರತಿಭಟನೆಗಳು ನಡೆದಿವೆ–ಸುದ್ದಿ



ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ನಿಗದಿತ ಅವಧಿಯ ಉದ್ಯೋಗ



ಉದ್ಯೋಗ ಭದ್ರತೆಯ ಮೇಲಿನ ದಾಳಿ. ಮಾಲೀಕರಿಗೆ ನೀಡಿದ ಉಡುಗೊರೆ

ತ್ರಿಪಕ್ಷೀಯ ಸಂಧಾನಗಳ ಪರಂಪರೆಯನ್ನು ಕಾಲ ಕೆಳಗಿನ ಕಸದಂತೆ ಕಂಡು, ಈ ಪ್ರಕಟಣೆ ಹೊರಡಿಸಿರುವ ಸರ್ಕಾರದ ರೀತಿಯನ್ನು ಮತ್ತು ಈ ಕ್ರಮವನ್ನು ಭಾಜಪ ಪರಿವಾರದ ಒಂದು ಅಂಗವಾಗಿರುವ ಭಾರತೀಯ ಮಜ್ದೂರ್ ಸಂಘವೂ ಸೇರಿದಂತೆ ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳೂ ತೀವ್ರವಾಗಿ ವಿರೋಧಿಸಿವೆ, ಆದರೆ, ಉದ್ಯಮಗಳ ಮಾಲೀಕರು ಈ ಕ್ರಮವನ್ನು ಸ್ವಾಗತಿಸಿದ್ದಾರೆ.

ಇದೊಂದು, ವಾಸ್ತವವಾಗಿ, ಕೆಲಸಗಾರರ ಉದ್ಯೋಗ ಭದ್ರತೆಯ ಮೇಲಿನ ದಾಳಿ. ಇದು, ಕೆಲಸಗಾರರು ದುರ್ಬಲಗೊಳ್ಳುವಂತೆ ಮಾಲೀಕರು ಮಾಡುವ ಒಂದು ಕ್ರಮ. ಕೆಲಸಗಾರರಿಗೆ ಸಿಗಬೇಕಿದ್ದ ಎಲ್ಲ ಶಾಸನಬದ್ಧ ಸವಲತ್ತುಗಳನ್ನು ನಿರಾಕರಿಸುವ ಒಂದು ಏರ್ಪಾಡು. ಇದೊಂದು, ಎಂತಹ ಕ್ರಮ ಬೇಕಾದರೂ ಕೈಗೊಳ್ಳುವ ಅಧಿಕಾರವನ್ನು ಮಾಲೀಕರಿಗೆ ನೀಡಿದ ಉಡುಗೊರೆ ಎನ್ನುತ್ತಾರೆ

ಸಿಐಟಿಯು ಅಧ್ಯಕ್ಷರಾದ ಡಾ. ಕೆ. ಹೇಮಲತಾ ಅನುವಾದ: ಕೆ.ಎಂ. ನಾಗರಾಜ್

ವಿಶ್ವ ಬ್ಯಾಂಕಿನ ವ್ಯವಹಾರಗಳ ಸುಗಮತೆಯ ಸೂಚ್ಯಂಕದ ಪ್ರಕಾರ, ಒಂದು ವರ್ಷದ ಹಿಂದೆ 130ನೇ ಸ್ಥಾನದಲ್ಲಿದ್ದ ಭಾರತವು 2018ರಲ್ಲಿ 100ನೇ ಸ್ಥಾನಕ್ಕೆ ಜಿಗಿದಿದೆ. ಈ ವರದಿಯಿಂದ ಉತ್ತೇಜಿತವಾಗಿರುವ ಭಾಜಪ ಸರ್ಕಾರವು, ಮೇಲಿನ 50ನೇ ಸ್ಥಾನಕ್ಕೆ ಜಿಗಿಯುವ ಉದ್ದೇಶದಿಂದ 90 ಸುಧಾರಣೆಗಳನ್ನು ಕೈಗೆತ್ತಿಕೊಂಡಿದೆ. ನಿಗದಿತ ಅವಧಿಯ ಉದ್ಯೋಗ ವ್ಯವಸ್ಥೆಯನ್ನು ಎಲ್ಲಾ ವಲಯಗಳಿಗೂ ವಿಸ್ತರಿಸುವ ಯೋಜನೆ ಅವುಗಳಲ್ಲೊಂದು. ಭಾರತ ಸರ್ಕಾರವು ತನ್ನ ಅಧಿಕೃತ ಪತ್ರಿಕೆಯಲ್ಲಿ ಕಳೆದ ಮಾರ್ಚ್ 16ರಂದು, ಕೈಗಾರಿಕಾ ಉದ್ಯೋಗ (ಸ್ಥಾಯಿ ಆದೇಶ) ನಿಯಮಗಳು, 1946, ಸಂಬಂಧಿಸಿ ಒಂದು ಪ್ರಕಟಣೆ ಹೊರಡಿಸಿ, ನಿಗದಿತ ಅವಧಿಯ ಉದ್ಯೋಗ ವ್ಯವಸ್ಥೆಯನ್ನು ಎಲ್ಲಾ ವಲಯಗಳಿಗೂ ವಿಸ್ತರಿಸಲು ಅನುಮತಿ ನೀಡಿದೆ. ಈ ಸಂಬಂಧವಾಗಿ, ಹಣಕಾಸು ಸಚಿವ ಅರುಣ್ ಜೇಟ್ಲಿ ಈ ವರ್ಷದ ಮುಂಗಡ ಪತ್ರದಲ್ಲಿ ಮಾಡಿದ್ದ ಘೋಷಣೆಯನ್ನು ಈಗ ಜಾರೀ ಮಾಡಲಾಗಿದೆ.

ವಾಸ್ತವವಾಗಿ, ವಾಜಪೇಯಿ ಸರ್ಕಾರದ ಅವಧಿಯಲ್ಲಿ, ಖಾಯಂ ಉದ್ಯೋಗಗಳಿಗೆ ಬದಲಾಗಿ ಎಲ್ಲಾ ವಲಯಗಳಲ್ಲೂ ನಿಗದಿತ ಅವಧಿಯ ಉದ್ಯೋಗ ವ್ಯವಸ್ಥೆಯನ್ನು ಜಾರಿಗೊಳಿಸುವ ಪ್ರಯತ್ನಗಳು ನಡೆದಿದ್ದವು. ಈ ಸಂಬಂಧವಾಗಿ, ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳ ವಿರೋಧವನ್ನು ಧಿಕ್ಕರಿಸಿ, 2003ರಲ್ಲಿ, ವಾಜಪೇಯಿ ಸರ್ಕಾರವು ಒಂದು ಅಧಿಕೃತ ಪ್ರಕಟಣೆ ಹೊರಡಿಸಿ ನಿಗದಿತ ಅವಧಿಯ ಉದ್ಯೋಗ ವ್ಯವಸ್ಥೆಯನ್ನು ಎಲ್ಲಾ ವಲಯಗಳಿಗೂ ವಿಸ್ತರಿಸಲು ಅನುಮತಿ ನೀಡಿತ್ತು. ನಂತರ, ಕೇಂದ್ರ ಕಾರ್ಮಿಕ ಸಂಘಟನೆಗಳ ತೀವ್ರ ಪ್ರತಿಭಟನೆಗಳಿಗೆ ಮಣಿದ ಯುಪಿಎ–1 ಸರ್ಕಾರವು ಈ ಪ್ರಕಟಣೆಯನ್ನು ವಾಪಸ್ ಪಡೆದಿತ್ತು.

ಅಧಿಕಾರಕ್ಕೆ ಬಂದ ತಕ್ಷಣದಲ್ಲೇ ಶ್ರಮ ಸುಧಾರಣೆಗಳ ಅಂಗವಾಗಿ ನಿಗದಿತ ಅವಧಿಯ ಉದ್ಯೋಗ ವ್ಯವಸ್ಥೆಯನ್ನು ಜಾರಿಗೊಳಿಸುವುದು ಮೋದಿ ಸರ್ಕಾರದ ಒಂದು ಆದ್ಯತೆಯಾಗಿತ್ತು. ಈ ಸಂಬಂಧವಾಗಿ, ಎಪ್ರಿಲ್ 2015ರಲ್ಲಿ ಹೊರಡಿಸಿದ್ದ ಕರಡು ಪ್ರಕಟಣೆಯು ಕೇಂದ್ರ ಕಾರ್ಮಿಕ ಸಂಘಟನೆಗಳ ವಿರೋಧದಿಂದಾಗಿ ಸ್ಥಗಿತಗೊಂಡಿತ್ತು. ಆದರೆ, ಅಕ್ಟೋಬರ್ 2016ರಲ್ಲಿ, ಕೇಂದ್ರ ಕಾರ್ಮಿಕ ಸಂಘಟನೆಗಳ ವಿರೋಧವನ್ನು ತಳ್ಳಿಹಾಕಿ, ಉಡುಪು ತಯಾರಿಕಾ ವಲಯದಲ್ಲಿ ನಿಗದಿತ ಅವಧಿಯ ಉದ್ಯೋಗ ವ್ಯವಸ್ಥೆಯನ್ನು ಜಾರಿಗೊಳಿಸಿತ್ತು. 2017ರಲ್ಲಿ, ಸಿದ್ಧ ಉಡುಪುಗಳ ಜೊತೆಗೆ, ಟವೆಲ್, ಬೆಡ್‌ಶೀಟ್ ಮುಂತಾದ ವಸ್ತ್ರ ತಯಾರಿಕೆ ಮಾಡುವ ಕೇಂದ್ರಗಳಿಗೂ ನಿಗದಿತ ಅವಧಿಯ ಉದ್ಯೋಗ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿತ್ತು. ಈ ಎಲ್ಲ ಹಂತಗಳಲ್ಲೂ ಸಿಐಟಿಯು ಭಾಜಪ ಸರ್ಕಾರದ ಕ್ರಮವನ್ನು ವಿರೋಧಿಸಿತ್ತು. ಉಳಿದ ಕಾರ್ಮಿಕ ಸಂಘಟನೆಗಳೂ ವಿರೋಧಿಸಿದ್ದವು. 2018ರಲ್ಲಿ, ಕೇಂದ್ರ ಕಾರ್ಮಿಕ ಸಂಘಟನೆಗಳ ಜೊತೆ ಯಾವ ಸಮಾಲೋಚನೆಯನ್ನೂ ಮಾಡದೆ, ಭಾಜಪ ಸರ್ಕಾರವು ನಿಗದಿತ ಅವಧಿಯ ಉದ್ಯೋಗ ವ್ಯವಸ್ಥೆಯನ್ನು ಎಲ್ಲಾ ವಲಯಗಳಿಗೂ ಜಾರಿಗೊಳಿಸಿದೆ.

ತ್ರಿಪಕ್ಷೀಯ ಸಂಧಾನಗಳ ಪರಂಪರೆಯನ್ನು ಕಾಲ ಕೆಳಗಿನ ಕಸದಂತೆ ಕಂಡು, ಈ ಪ್ರಕಟಣೆ ಹೊರಡಿಸಿರುವ ಸರ್ಕಾರದ ರೀತಿಯನ್ನು ಮತ್ತು ಈ ಕ್ರಮವನ್ನು ಭಾಜಪ ಪರಿವಾರದ ಒಂದು ಅಂಗವಾಗಿರುವ ಭಾರತೀಯ ಮಜ್ದೂರ್ ಸಂಘವೂ ಸೇರಿದಂತೆ ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳೂ ತೀವ್ರವಾಗಿ ವಿರೋಧಿಸಿವೆ, ಆದರೆ, ಉದ್ಯಮಗಳ ಮಾಲೀಕರು ಈ ಕ್ರಮವನ್ನು ಸ್ವಾಗತಿಸಿದ್ದಾರೆ. ಈಗಾಗಲೇ ಆಚರಣೆಯಲ್ಲಿರುವ ಬೇಕಾದಾಗ ಕೆಲಸಕ್ಕೆ ನೇಮಿಸಿಕೊಳ್ಳುವ ಮತ್ತು ಬಢವಾದಾಗ ಕೆಲಸದಿಂದ ಕಿತ್ತುಹಾಕುವುದನ್ನು ಕ್ರಮಬದ್ಧಗೊಳಿಸುವ ಮತ್ತು ಕಾನೂನುಬದ್ಧಗೊಳಿಸುವ ಈ ಕ್ರಮವು ವ್ಯವಹಾರ ಮನೋಭಾವವನ್ನು ಉತ್ತೇಜಿಸುತ್ತದೆ ಎಂಬುದಾಗಿ ಸಿಐಐನ ಕೈಗಾರಿಕಾ ಸಂಬಂಧಗಳ ರಾಷ್ಟ್ರ ಸಮಿತಿಯ ಅಧ್ಯಕ್ಷರಾದ ಪ್ರದೀಪ್ ಭಾರ್ಗವ ಹೇಳಿದ್ದಾರೆ. ಮಾಲೀಕರ 'ವ್ಯವಹಾರಗಳ ಸುಗಮತೆ'ಗಾಗಿ ಶ್ರಮ ನೀತಿಯ ಸುಧಾರಣೆಗಳ ಹೆಸರಿನಲ್ಲಿ ಮಾಡಿರುವ ಭಾಜಪ ಸರ್ಕಾರದ ಈ ಕ್ರಮವು, ಪ್ರಸಕ್ತ ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸುತ್ತಿದ್ದ ಮಾಲೀಕರ ಕೃತ್ಯಗಳನ್ನು ಕಾನೂನುಬದ್ಧಗೊಳಿಸುತ್ತದೆ.

ನಿಗದಿತ ಅವಧಿಯ ಉದ್ಯೋಗ ಅಂದರೆ, ಒಬ್ಬ ಕೆಲಸಗಾರನ ಉದ್ಯೋಗದ ಅವಧಿ ನಿಗಧಿತವಾಗಿರುತ್ತದೆ. ಒಂದು ಗೊತ್ತು ಪಡಿಸಿದ ಅವಧಿಗೆ ಕೆಲಸಗಾರ ಮತ್ತು ಮಾಲೀಕ ಇಬ್ಬರೂ ಒಪ್ಪಂದಕ್ಕೆ ಸಹಿ ಹಾಕುತ್ತಾರೆ. ಆ ಒಪ್ಪಂದವನ್ನು ನವೀಕರಿಸಿಕೊಳ್ಳದಿದ್ದರೆ, ಅವನ/ಅವಳ ಸೇವೆ ತನ್ನಷ್ಟಕ್ಕೆ ತಾನೇ ಕೊನೆಗೊಳ್ಳುತ್ತದೆ, ತಾತ್ಕಾಲಿಕ ಮತ್ತು ಬದಲಿ ನೌಕರರ ರೀತಿಯಲ್ಲಿ. ಇಲ್ಲಿ, ಕೆಲಸದಿಂದ ತೆಗೆಯುವ ನೋಟೀಸ್ ಅಥವಾ ನೋಟೀಸ್ ಬದಲಾಗಿ ಸಂಬಳ ಕೊಡುವ ಅವಶ್ಯಕತೆಯೇ ಇಲ್ಲ. ಗುತ್ತಿಗೆದಾರನ ಅಗತ್ಯವೂ ಇಲ್ಲದೆ, ಒಬ್ಬ ಮಾಲೀಕನು ನೇರವಾಗಿ ತನಗೆ ಬೇಕಾಗುವಷ್ಟು ಕೆಲಸಗಾರರನ್ನು ಒಂದು ನಿಗದಿತ ಅವಧಿಗೆ ನೇಮಿಸಿಕೊಳ್ಳಬಹುದು.

ಅಸಮರ್ಪಕ ಕೆಲಸ, ಮೋಸ, ವಂಚನೆ ಮುಂತಾದ ಕಾರಣಗಳ ಮೇಲೆ ಅವಧಿ ಮುಗಿಯುವ ಮುನ್ನವೇ ಮಾಲೀಕನು ಒಪ್ಪಂದವನ್ನು/ಗುತ್ತಿಗೆಯನ್ನು ಕೊನೆಗೊಳಿಸಬಹುದು. ಆದರೆ, ಕೆಲವು ತಿಂಗಳ ಮಟ್ಟಿಗೊ ಅಥವಾ ಒಂದು ವರ್ಷಕ್ಕೊ ಮಾಡಿಕೊಂಡಿರುವ ವೈಯುಕ್ತಿಕ ಒಪ್ಪಂದದ ಅವಧಿಯಲ್ಲಿ, ತನ್ನ ಮೇಲೆ ಹೊರಿಸಿದ ಅಸಮರ್ಪಕ ಸೇವೆಯ ಆಪಾದನೆಗಳ ಸತ್ಯಾಸತ್ಯತೆಯನ್ನು ಸಾದರಪಡಿಸಲು ಒಬ್ಬ ಕೆಲಸಗಾರನಿಗೆ ಸಾಧ್ಯವಿಲ್ಲ ಎಂಬ ಒಂದು ಅಂಶವನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಅಂದರೆ, ಇಂತಹ ಪರಿಸ್ಥಿತಿಗಳ ಇತ್ಯರ್ಥಕ್ಕಾಗಿಯೇ ಇರುವ ಕೈಗಾರಿಕಾ ವಿವಾದಗಳ ಕಾಯ್ದೆಗೆ ಯಾವ ತಿದ್ದುಪಡಿಯ ಅವಶ್ಯಕತೆಯೂ ಇಲ್ಲದೆ ಮಾಲೀಕರು ಮನಬಂದಂತೆ ಕೆಲಸಕ್ಕೆ ನೇಮಿಸಿಕೊಳ್ಳುವ ಮತ್ತು ಕೆಲಸದಿಂದ ಕಿತ್ತುಹಾಕುವ ಆಳ್ವಿಕೆಯಾಗುತ್ತದೆ, ಇದು.

ಸಿದ್ಧ ಉಡುಪು ತಯಾರಿಕಾ ವಲಯದಲ್ಲಿ ನಿಗದಿತ ಅವಧಿಯ ಉದ್ಯೋಗ ವ್ಯವಸ್ಥೆಯನ್ನು ಅಕ್ಟೋಬರ್ 2016ರಲ್ಲಿ ಜಾರಿಗೊಳಿಸಿದ ಪ್ರಕಟಣೆಯ ನಂತರ, ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು ಒಂದು ಪತ್ರಿಕಾ ಹೇಳಿಕೆ ನೀಡಿತ್ತು. "ಜವಳಿ ವಲಯದ ಕಾಲಿಕತೆಯಿಂದಾಗಿ, ಕೆಲಸಗಾರರ ಮೇಲಿನ ಬೇಡಿಕೆಯಲ್ಲಿ ಏರು ಪೇರುಗಳಾಗುತ್ತವೆ, ಆದ್ದರಿಂದ, ಕೆಲಸಗಾರರನ್ನು ನೇಮಿಸಿಕೊಳ್ಳುವ ಪ್ರಕ್ರಿಯೆಯು ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಳ್ಳುವ ರೀತಿಯಲ್ಲಿರಬೇಕಾಗುತ್ತದೆ" ಎಂಬ ಸಮರ್ಥನೆಯನ್ನು ಆಗ ಕೊಡಲಾಗಿತ್ತು. ಇದು ಸಂಪೂರ್ಣವಾಗಿ ತಪ್ಪು. ಅದೇನೇ ಇರಲಿ, ಎಲ್ಲ ವಲಯಗಳಿಗೂ ನಿಗದಿತ ಅವಧಿಯ ಉದ್ಯೋಗ ವ್ಯವಸ್ಥೆಯ ವಿಸ್ತರಣೆಯನ್ನು ಈಗ ಸರ್ಕಾರ ಹೇಗೆ ಸಮರ್ಥಿಸಿಕೊಳ್ಳುತ್ತದೆ? ಎಲ್ಲ ವಲಯಗಳೂ ಈಗ ಕಾಲಿಕವಾಗಿವೆಯೇ? ಇಲ್ಲ. ನಿಜ ಕಾರಣ ಈಗ ಹೊರಬಂದಿದೆ. ಈ ವರ್ಷ ಹೊರಡಿಸಿದ ಪ್ರಕಟಣೆಯಲ್ಲಿ, ಉದ್ದೇಶಗಳನ್ನು ವಿವರಿಸುವಾಗ "ಜಾಗತೀಕರಣದ ಸವಾಲುಗಳನ್ನು ಎದುರಿಸುವ ಸಲುವಾಗಿ, ವ್ಯವಹಾರಗಳು ಸಲೀಸಾಗಿ ಜರುಗಲು ಪೂರಕವಾಗಿ ತಮ್ಮ ವ್ಯವಹಾರ ಪದ್ಧತಿಯ ಮಾರ್ಪಾಡಿಗೆ ಮತ್ತು ಅದಕ್ಕೆ ಹೊಂದಿಕೊಳ್ಳುವ ಏರ್ಪಾಡುಗಳನ್ನು ಕಲ್ಪಿಸಿಕೊಳ್ಳುವ ಅವಕಾಶವನ್ನು ಮಾಲೀಕರಿಗೆ ಒದಗಿಸುವುದು" ಎಂಬುದಾಗಿ ಹೇಳಲಾಗಿದೆ.

ಈ ಪ್ರಕಟಣೆಯ ಪ್ರಕಾರ, "ಒಬ್ಬ ಖಾಯಂ ಕೆಲಸಗಾರನಿಗೆ ದಿನಕ್ಕೆ ಎಷ್ಟು ಗಂಟೆಗಳ ದುಡಿಮೆ, ಕೂಲಿ, ಭತ್ಯೆಗಳು ಮತ್ತು ಇತರ ಸೌಲಭ್ಯಗಳು ಇವೆಯೊ, ನಿಗದಿತ ಅವಧಿಯ ಕೆಲಸಗಾರನಿಗೂ ಅಷ್ಟೇ ಇರುತ್ತವೆ" ಅವನಿಗೆ/ಅವಳಿಗೆ, ಒಬ್ಬ ಖಾಯಂ ಕೆಲಸಗಾರನಿಗೆ ಕಾನೂನು ಸಮ್ಮತವಾಗಿ ದೊರಕುವ ಎಲ್ಲ ಸೌಲಭ್ಯಗಳೂ, ಅವರ ಉದ್ಯೋಗದ ಅವಧಿಗೆ ಅನುಗುಣವಾಗಿ ದೊರೆಯುತ್ತವೆ ಮತ್ತು ಅವನ/ಅವಳ ಕೆಲಸದ ಅವಧಿಯು ಆ ಸೌಲಭ್ಯಗಳನ್ನು ಪಡೆಯಲು ಕಾನೂನಿನಲ್ಲಿ ವಿಧಿಸಿರುವ ಅರ್ಹತಾ ಕನಿಷ್ಠ ಸೇವೆ ಅವಶ್ಯಕತೆಗಿಂತ ಒಂದು ವೇಳೆ ಕಡಿಮೆ ಇದ್ದರೂ, ಅವರು ಸೇವೆ ಸಲ್ಲಿಸಿದ ಅವಧಿಗೆ ಅನುಗುಣವಾಗಿ ಆ ಸೌಲಭ್ಯಗಳು ದೊರೆಯುತ್ತವೆ.

ಇವೆಲ್ಲವೂ ನ್ಯಾಯಸಮ್ಮತವಾಗಿ ಕಾಣುತ್ತವೆ ಮತ್ತು ಸ್ವಾಗತಾರ್ಹವಾಗಿವೆ. ಆದರೆ, ನಮ್ಮ ಕಣ್ಣಿಗೆ ರಾಚುವ ವಾಸ್ತವಾಂಶಗಳನ್ನು ಗಮನಿಸಿದರೆ, ಇದು ಹಾಸ್ಯಾಸ್ಪದವಾಗಿಯೂ ಮತ್ತು ಕಪಟವಾಗಿಯೂ ಕಾಣುತ್ತದೆ. ಏಕೆಂದರೆ, ಸಂಘಟಿತ ವಲಯದ – ಎಲ್ಲಿ ಕೆಲಸಗಾರರು ಯೂನಿಯನ್‌ಗಳನ್ನು ಕಟ್ಟಿಕೊಂಡಿಲ್ಲವೊ ಅಂತಹ ಪರಿಸ್ಥಿತಿಯಲ್ಲಿ – ಬಹು ದೊಡ್ಡ ಸಂಖ್ಯೆಯ ಕೆಲಸಗಾರರಿಗೆ ಶಾಸನಬದ್ಧವಾಗಿ ದೊರಕಬೇಕಿದ್ದ ಕನಿಷ್ಠ ಕೂಲಿ, ಪಿ.ಎಫ್, ಇ.ಎಸ್.ಐ, ಹೆರಿಗೆ ರಜೆ ಮುಂತಾದ ಸವಲತ್ತುಗಳು ಸಿಗುತ್ತಿಲ್ಲ. ಬಹುರಾಷ್ಟ್ರೀಯ ಕಂಪೆನಿಗಳು ಮತ್ತು ಖಾಸಗಿ ಸಂಸ್ಥೆಗಳಲ್ಲಿ ದುಡಿಯುವ ಖಾಯಂ ಕೆಲಗಾರರು ಯೂನಿಯನ್ ಕಟ್ಟಿಕೊಳ್ಳಲು ಮುಂದಾದ ಕೂಡಲೇ ಅವರನ್ನು ಹೆದರಿಸಿ ಕೆಲಸದಿಂದ ಕಿತ್ತೊಗೆಯುವುದನ್ನು ನಾವಿಂದು ಕಣ್ಣಾರೆ ಕಾಣುತ್ತಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ, ಕೆಲವು ತಿಂಗಳ ಮಟ್ಟಿಗೊ ಅಥವಾ ಒಂದೊ ಎರಡೊ ವರ್ಷಗಳ ನಿಗದಿತ ಅವಧಿ ಉದ್ಯೋಗದ ಒಪ್ಪಂದ ಮಾಡಿಕೊಂಡಿರುವ ಕೆಲಗಾರರು ಒಗ್ಗಟ್ಟಾಗಿ ಈ ಎಲ್ಲ ಸೌಲಭ್ಯಗಳನ್ನು ಪಡೆಯಲು ಹೋರಾಡುತ್ತಾರೆ ಎಂದು ನಿರೀಕ್ಷಿಸಲಾಗದು. ಕೆಲವು ಕಂಪೆನಿಗಳಲ್ಲಿ, ಖಾಯಂ ಕೆಲಗಾರರಿಗೆ ಸಿಗುವ ಪಿ.ಎಫ್, ಇ.ಎಸ್.ಐ, ಹೆರಿಗೆ ರಜೆ ಮುಂತಾದ ಸವಲತ್ತುಗಳು ಅದೇ ಕಂಪೆನಿಯಲ್ಲಿ ಕೆಲಸ ಮಾಡುವ ಗುತ್ತಿಗೆ ಕೆಲಸಗಾರರಿಗೆ ಸಿಗುತ್ತಿಲ್ಲ. ಉದಾಹರಣೆಗೆ, ಏರ್ ಇಂಡಿಯಾದ ಅಂಗ ಸಂಸ್ಥೆಯಾದ ಅಲಿಯನ್ಸ್ ಏರ್‌ನಲ್ಲಿ ದೀರ್ಘಕಾಲದಿಂದ ದುಡಿಯುತ್ತಿರುವ ಗುತ್ತಿಗೆ ಕೆಲಸಗಾರರಿಗೆ, ಅವರ ಗುತ್ತಿಗೆಯನ್ನು ಕಾಲ ಕಾಲಕ್ಕೆ ನವೀಕರಿಸಿದ್ದರೂ, ಏರ್ ಇಂಡಿಯಾದ ಖಾಯಂ ಕೆಲಸಗಾರರಿಗಿಂತ ತೀರಾ ಕಡಿಮೆ ಸಂಬಳ ಮತ್ತು ಕಡಿಮೆ ಸವಲತ್ತುಗಳು ಸಿಗುತ್ತಿವೆ. ಈ ಸಮಸ್ಯೆಯನ್ನು ಸಿಐಟಿಯು ಪ್ರಧಾನ ಕಾರ್ಯದರ್ಶಿಗಳು ಪದೇ ಪದೇ ಪ್ರಸ್ತಾಪಿಸಿದ್ದರೂ ಏರ್ ಇಂಡಿಯಾ ಉತ್ತರ ಕೊಡುವ ಗೋಜಿಗೆ ಹೋಗಿಲ್ಲ.

ನಿಗದಿತ ಅವಧಿಯ ಉದ್ಯೋಗಗಳಿಂದಾಗಿ ಉದ್ಯೋಗ ಸೃಷ್ಟಿಯಾಗುತ್ತದೆ ಮತ್ತು ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ ಉದ್ಯೋಗ ದೊರಕುವುದರಿಂದಾಗಿ ಸಾಮಾಜಿಕ ಪರಿವರ್ತನೆಯಾಗುತ್ತದೆ ಎಂದು ಸರ್ಕಾರ ವಾದಿಸುತ್ತಿರುವುದು ನಗೆಪಾಟಲಾಗಿ ಕಾಣುತ್ತದೆ! ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದ 2016ರ ಪತ್ರಿಕಾ ಪ್ರಕಟಣೆಯಲ್ಲಿ, ಸಿದ್ಧ ಉಡುಪು ಕೈಗಾರಿಕೆಯಲ್ಲಿ ಸೃಷ್ಟಿಯಾಗುವ ಉದ್ಯೋಗಗಳು ಅಲ್ಲಿ ದುಡಿಯುವ 70%ಗಿಂತಲೂ ಹೆಚ್ಚು ಮಂದಿ ಮಹಿಳೆಯರ ಸಬಲೀಕರಣವಾಗುತ್ತದೆ ಎಂಬುದಾಗಿ ಸಮರ್ಥಿಸಿಕೊಳ್ಳಲಾಗಿತ್ತು.

ವಿಶ್ವದಲ್ಲಿ ಕಂಡು ಬಂದ ಅನುಭವಗಳೇನು?

ಒಂದು ಅಧ್ಯಯನದ ವರದಿಯ ಪ್ರಕಾರ, ಯೂರೋಪಿನಲ್ಲಿ ಮತ್ತು ನಿರ್ಧಿಷ್ಟವಾಗಿ ಸ್ಪೇನ್ ದೇಶದಲ್ಲಿ ಶೇ.50ಕ್ಕಿಂತ ಹೆಚ್ಚು ಮಂದಿ ಯುವ ಜನತೆ ನಿಗದಿತ ಅವಧಿಯ ಗುತ್ತಿಗೆ ಕೆಲಸಗಾರರಾಗಿದ್ದಾರೆ. ಹೊಸ ಒಪ್ಪಂದಗಳಲ್ಲಿ ಶೇ.94ರಷ್ಟು ಒಪ್ಪಂದಗಳು ನಿಗದಿತ ಅವಧಿ ಕೆಲಸದ ಒಪ್ಪಂದಗಳಾಗಿವೆ. ದೀರ್ಘಾವಧಿಯಲ್ಲಿ, ಯುವ ಕೆಲಸಗಾರರ ಕೂಲಿಯ ಮಟ್ಟ ಮತ್ತು ಉದ್ಯೋಗಾವಕಾಶಗಳು ಇಳಿಯುತ್ತವೆ ಎಂಬುದನ್ನು ಅಧ್ಯಯನದ ವರದಿ ತಿಳಿಸಿದೆ. ನಿಗದಿತ ಅವಧಿಯ ಗುತ್ತಿಗೆ ಕೆಲಸಕ್ಕೆ ಅನೇಕ ಮಂದಿ ಲಭ್ಯವಿದ್ದಾರೆ ಎಂಬ ಅಂಶವು, ತಗ್ಗಿದ ಉತ್ಪಾದಕತೆಯ ಮತ್ತು ಕಡಿಮೆ ಸಂಬಳದ ಕೆಲಸಗಳನ್ನು ಸೃಷ್ಟಿಸಲು ಮಾಲೀಕರಿಗೆ ಉತ್ತೇಜನ ನೀಡುತ್ತದೆ ಎಂದು ವರದಿ ಹೇಳುತ್ತದೆ. "ದೂರ ದೃಷ್ಟಿಯಿಂದ ನೋಡಿದಾಗ, ನಿಗದಿತ ಅವಧಿಯ ಗುತ್ತಿಗೆ ಕೆಲಸಗಳು ಯುವ ಜನತೆಗೆ ಒಂದು ಮೆಟ್ಟುಗಲ್ಲಾಗುವ ಬದಲು ಒಂದು ವಿಘ್ನವಾಗಿ ಪರಿಣಮಿಸುತ್ತದೆ" ಎಂದು ಹೇಳುತ್ತಾ ವರದಿ ಸಮಾಪ್ತಿಯಾಗುತ್ತದೆ.

2011 ಮತ್ತು 2013 ರ ಅವಧಿಯಲ್ಲಿ, ಯೂರೋಪಿನ ಅನೇಕ ದೇಶಗಳಲ್ಲಿ ನಿಗದಿತ ಅವಧಿಯ ಗುತ್ತಿಗೆ ಕೆಲಸಗಳು ಹೆಚ್ಚಿದವು ಎಂಬುದನ್ನು ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಯು (ಐಎಲ್‌ಓ) ಕೈಗೊಂಡ ಒಂದು ಅಧ್ಯಯನವೂ ತಿಳಿಸುತ್ತದೆ. ನಿಗದಿತ ಅವಧಿಯ ಗುತ್ತಿಗೆ ಕೆಲಸಕ್ಕೆ ಸೇರಿದ ಅನೇಕ ಮಂದಿ ತರುವಾಯ ನಿರುದ್ಯೋಗಿಗಳಾಗುವ ದರವೂ ಹೆಚ್ಚಿನ ಮಟ್ಟದಲ್ಲಿರುತ್ತದೆ. ಉದಾಹರಣೆಗೆ, 2008ರ ಕೊನೆಯ ತ್ರೈಮಾಸಿಕದಲ್ಲಿ, ಸ್ಪೇನ್‌ನಲ್ಲಿ, ಶೇ.2.5 ಮಂದಿ ಖಾಯಂ ಕೆಲಸಗಾರರು ತಮ್ಮ ಕೆಲಸ ಕಳೆದುಕೊಂಡರು. ಅದೇ ಸಮಯದಲ್ಲಿ, ಕೆಲಸ ಕಳೆದುಕೊಂಡ ನಿಗದಿತ ಅವಧಿಯ ಗುತ್ತಿಗೆ ಕೆಲಸಗಾರರ ಸಂಖ್ಯೆ ಶೇ.15ರಷ್ಟಿತ್ತು. ಆರ್ಥಿಕ ಸಂಕಷ್ಟಗಳು ಎದುರಾದಾಗ, ತಮ್ಮ ಖರ್ಚುವೆಚ್ಚಗಳನ್ನು ಇಳಿಸುವ ಸಲುವಾಗಿ ಮಾಲೀಕರು ಮೊದಲು ಗುರಿ ಮಾಡುವುದು ನಿಗದಿತ ಅವಧಿಯ ಗುತ್ತಿಗೆ ಕೆಲಸಗಾರರನ್ನೇ. ಇತ್ತೀಚಿನ ಜಾಗತಿಕ ಹಣಕಾಸು ಮುಗ್ಗಟ್ಟಿನ ಸಂದರ್ಭದಲ್ಲಿ, ಅನೇಕ ದೇಶಗಳಲ್ಲಿ, ಕೂಲಿ ವೆಚ್ಚಗಳನ್ನು ತಗ್ಗಿಸುವ ಉದ್ದೇಶದಿಂದ, ಖಾಯಂ ನೌಕರರನ್ನು ನೇಮಿಸಿಕೊಳ್ಳುವುದರ ಬದಲು ಕಡಿಮೆ ಕೂಲಿಯ ನಿಗದಿತ ಅವಧಿಯ ಗುತ್ತಿಗೆ ಕೆಲಸಗಾರರನ್ನು ನೇಮಿಸಿಕೊಳ್ಳಲಾಯಿತು ಎಂಬುದು ಗಮನಾರ್ಹವಾಗಿದೆ.

ಇದೊಂದು, ವಾಸ್ತವವಾಗಿ, ಕೆಲಸಗಾರರ ಉದ್ಯೋಗ ಭದ್ರತೆಯ ಮೇಲಿನ ದಾಳಿ. ಇದು, ಕೆಲಸಗಾರರು ದುರ್ಬಲಗೊಳ್ಳುವಂತೆ ಮಾಲೀಕರು ಮಾಡುವ ಒಂದು ಕ್ರಮ. ಕೆಲಸಗಾರರಿಗೆ ಸಿಗಬೇಕಿದ್ದ ಎಲ್ಲ ಶಾಸನಬದ್ಧ ಸವಲತ್ತುಗಳನ್ನು ನಿರಾಕರಿಸುವ ಒಂದು ಏರ್ಪಾಡು. ಇದೊಂದು, ಎಂತಹ ಕ್ರಮ ಬೇಕಾದರೂ ಕೈಗೊಳ್ಳುವ ಅಧಿಕಾರವನ್ನು ಮಾಲೀಕರಿಗೆ ನೀಡಿದ ಉಡುಗೊರೆ. ಹಾಗಾಗಿ, ನಿಗದಿತ ಅವಧಿಯ ಉದ್ಯೋಗಗಳಿಂದಾಗಿ ಉದ್ಯೋಗ ಸೃಷ್ಟಿಯಾಗುತ್ತದೆ ಎನ್ನುವ ಸರ್ಕಾರದ ಸಮರ್ಥನೆಯು ಒಂದು ವಿಡಂಬನೆಯೇ ಸರಿ.

ರೋಣ ವಿಧಾನಸಭಾ ಕ್ಷೇತ್ರ: ಸಿಪಿಐ(ಎಂ) ಅಭ್ಯರ್ಥಿಯಾಗಿ ಎಂ.ಎಸ್.ಹಡಪದ ನಾಮಪತ್ರ ಸಲ್ಲಿಕೆ



ರೋಣ ವಿಧಾನಸಭಾ ಕ್ಷೇತ್ರದಿಂದ ಸಿಪಿಐ(ಎಂ) ಅಭ್ಯರ್ಥಿಯಾಗಿ ಎಂ.ಎಸ್. ಹಡಪದ ಎಪ್ರಿಲ 19 ರಂದು ನಾಮಪತ್ರ ಸಲ್ಲಿಸಿದರು. ಹಲವು ವರ್ಷಗಳಿಂದ ಈ ಭಾಗದ ಕಾರ್ಮಿಕರು, ರೈತರು, ವಿದ್ಯಾರ್ಥಿ ಯುವ ಜನರ ಹಾಗೂ ನಾಗರಿಕರ ಸಮಸ್ಯೆಗಳ ಪರಿಹಾರಕ್ಕಾಗಿ ನಿರಂತರವಾಗಿ ಯಶಸ್ವಿ ಹೋರಾಟಗಳನ್ನು ನಡೆಸುವ ಮುಖಾಂತರ ಸಿಪಿಐ(ಎಂ) ಜನರ ಮಧ್ಯೆ ಕೆಲಸ ಮಾಡಿದೆ. ಕಾಂಗ್ರೆಸ್ ಮತ್ತು ಬಿಜೆಪಿಯಿಂದ ಆಯ್ಕೆಯಾದ ಶಾಸಕರ ನಿಷ್ಕಾಳಜಿಯಿಂದಾಗಿ ರೋಣ ಕ್ಷೇತ್ರ ಯಾವುದೇ ವಿಶೇಷ ಅಭಿವೃದ್ಧಿ ಕಾಣದೇ ವಂಚಿತವಾಗಿದೆ. ಜನತೆಯ ಅಭಿವೃದ್ಧಿಗಿಂತ ಶ್ರೀಮಂತರ ಪಕ್ಷಗಳಿಗೆ ತೋಳಬಲ, ಹಣಬಲ ಜಾತಿರಾಜಕಾರಣವೇ ಮುಖ್ಯವಾಗಿದೆ. ಇದನ್ನು ನೋಡಿ ಬೇಸತ್ತಿರುವ ಕ್ಷೇತ್ರದ ಮತದಾರರು ಹೊಸ ಮುಖ ಬಯಸಿದ್ದಾರೆ. ಈ ಬಾರಿ ಸಿಪಿಐ(ಎಂ)ಗೆ ಗೆಲವು ಖಚಿತ ಎಂದು ತಮ್ಮ ನಾಮಪತ್ರ ಸಲ್ಲಿಸಿದ ನಂತರ ಅವರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಹೇಶ ಪತ್ತಾರ ನಮ್ಮ ಪಕ್ಷ ಸಮಗ್ರ ಅಭಿವೃದ್ಧಿಯ ಜನಪರ ಪರ್ಯಾಯದ ಮತ್ತು ಸಹಬಾಳ್ವೆಯ ಪ್ರಣಾಳಿಕೆಯನ್ನು ಜನರ ಮುಂದಿಟ್ಟಿದೆ. ಈಗಾಗಲೇ ಒಂದು ಹಂತದ ಪ್ರಚಾರ ನಡೆಸಲಾಗಿದ್ದು ಮತದಾರರು ಸ್ಪಂದಿಸಿ ಬೆಂಬಲಿಸುತ್ತಿದ್ದಾರೆ. ಈ ಚುನಾವಣೆ ತೋಳಬಲ, ಹಣಬಲ ಜಾತಿ ರಾಜಕಾರಣ ಮತ್ತು ಸಮಗ್ರ ಅಭಿವೃದ್ಧಿ ಬಯಸುವ ದುಡಿಯುವ ಜನರ ಮಧ್ಯದ ಹೋರಾಟವಾಗಿ ಮಾರ್ಪಟ್ಟಿದೆ. ರೈತ ಕಾರ್ಮಿಕರ ಪಕ್ಷವಾದ ಸಿಪಿಐ(ಎಂ)ನಿಂದ ಮಾತ್ರ ಸಮಗ್ರ ಜನಾಭಿವೃದ್ಧಿ ಸಾಧ್ಯ ಹೀಗಾಗಿ ಕ್ಷೇತ್ರದ ಮತದಾರರು ಯುವ ಹೋರಾಟಗಾರ ಸಮರ್ಥ ಅಭ್ಯರ್ಥಿಯಾಗಿರುವ ಎಂ.ಎಸ್. ಹಡಪದ ಅವರನ್ನು ಗೆಲ್ಲಿಸಬೇಕೆಂದು ಮತದಾರರಲ್ಲಿ ಮನವಿ ಮಾಡಿಕೊಂಡರು.

ನಾಮಪತ್ರ ಸಲ್ಲಿಸುವ ಮೊದಲು ಪಟ್ಟಣದ ಸಿದ್ದಾರೂಡ ಮಠದಿಂದ ಕೆಂಬಾವುಟಗಳನ್ನು ಹಿಡಿದ ನೂರಾರು ಬೆಂಬಲಿಗರೊಂದಿಗೆ ಮೆರವಣಿಗೆ ಮುಖಾಂತರ ಬರಲಾಯಿತು. ಮುಖಂಡರಾದ ಬಿ.ಎಸ್.ಸೊಪ್ಪಿನ, ಎಂ.ಬಿ.ನಾಡಗೌಡ, ಬಸವರಾಜ ಮಂತೂರ, ಬಾಲು ರಾಠೋಡ, ಮಾರುತಿ ಚಿಟಗಿ, ಪೀರು ರಾಠೋಡ, ಪಯಾಜ್ ಅಹ್ಮದ ತೋಟದ, ಎಂ.ಬಿ.ಸೋಂಪುರ, ವಿನಾಯಕ ಕುರುಬರ, ಸಂಕಪ್ಪ ಕುರಹಟ್ಟಿ, ಹನಮಂತ ತಾಳಿ, ಕರಿಯಮ್ಮ ಗುರಿಕಾರ, ಜನತ್ತಭೀ ಮುಲ್ಲಾ ಮುಂತಾದವರು ಉಪಸ್ಥಿತರಿದ್ದರು. ■

ರೋಣ ವಿಧಾನಸಭಾ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಎಂ.ಎಸ್. ಹಡಪದ

ಮಹೇಶ್ ಪತ್ತಾರ್



ಗಜೇಂದ್ರಗಡ ನಗರದ ಬಡ ಕ್ಷೌರಿಕ ಕುಟುಂಬದ ಶರಣಪ್ಪ ಮತ್ತು ರೇಣಮ್ಮ ಅವರ ಹಿರಿಯ ಮಗನಾಗಿ ಜನಿಸಿದ ಮಲ್ಲಿಕಾರ್ಜುನ ಹಡಪದ ಅವರು ಕುಟುಂಬದ ಸಂಕಷ್ಟದ ಪರಿಸ್ಥಿತಿಯಲ್ಲಿಯೂ ಕಾನೂನು ಪದವಿಯನ್ನು ಪಡೆದವರು. ವಿದ್ಯಾರ್ಥಿ ದೆಸೆಯಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ ಸಂಘಟನೆಯಲ್ಲಿ ಗುರುತಿಸಿಕೊಂಡು ಸಂಘಟನೆಯ ಜಿಲ್ಲಾ ಮುಖಂಡರಾಗಿ ದಶಕಗಳ ಕಾಲ ಶೈಕ್ಷಣಿಕ ಸಮಸ್ಯೆಗಳ ವಿರುದ್ಧ ಹಲವಾರು ಹೋರಾಟ ನಡೆಸಿದ್ದಾರೆ. ಮುಖ್ಯವಾಗಿ 2000ನೇ ಇಸ್ವಿಯಲ್ಲಿ ನಡೆದ ಗ್ರಾಮೀಣ ಕೃಪಾಂಕ ಹೋರಾಟ, ಗಜೇಂದ್ರಗಡದ ಪದವಿ ಕಾಲೇಜು ಉಳಿವಿಗಾಗಿ, ಹಾಸ್ಟೆಲ್ ವಿದ್ಯಾರ್ಥಿಗಳ ಮೂಲಭೂತ ಸೌಕರ್ಯಗಳು ಮುಂತಾದ ಹೋರಾಟಗಳಿಗೆ ನೇತೃತ್ವನ್ನು ನೀಡಿದ್ದರು. ದುಷ್ಕರ್ಮಿಗಳು ನಡೆಸಿದ ಅತ್ಯಾಚಾರದಿಂದ ಆತ್ಮಹತ್ಯೆ ಮಾಡಿಕೊಂಡ ರೋಣದ ರೇಷ್ಮಾಬಾನು ಬೇಟಗೇರಿ ಪ್ರಕರಣದಲ್ಲಿ ಹಲವು ಬೆದರಿಕೆಗಳನ್ನು ಎದುರಿಸಿ ಆತ್ಮಹತ್ಯೆಗೆ ಕಾರಣರಾದ ಆರೋಪಿಗಳನ್ನು ಬಂಧಿಸುವಂತೆ ಮಾಡುವಲ್ಲಿ ನೆಡೆಸಿದ ಯಶಸ್ವಿ ಹೋರಾಟ ಪ್ರಮುಖವಾದದ್ದು.

ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾಗಿರುವ ಮತ್ತು ವಕೀಲ ವೃತ್ತಿಯಲ್ಲಿ ತೊಡಗಿಕೊಂಡಿರುವ 37 ವರ್ಷದ ಎಂ.ಎಸ್.ಹಡಪದ ಅವರು ನಾಲ್ಕು ವರ್ಷಗಳ ಕಾಲ ಸಿಐಟಿಯು ಜಿಲ್ಲಾಧ್ಯಕ್ಷರಾಗಿ ಗ್ರಾಮ ಪಂಚಾಯತಿ, ಬಿಸಿಯೂಟ, ಅಂಗನವಾಡಿ, ಹಮಾಲಿ ಮುಂತಾದ ಕಾರ್ಮಿಕರ ನ್ಯಾಯ ಸಮ್ಮತವಾದ ಬೇಡಿಕೆಗಳಿಗಾಗಿ ಹೋರಾಟ ನಡೆಸಿದ್ದಾರೆ.


ರೋಣ ತಾಲೂಕಿನ 10 ಗ್ರಾಮಗಳ 10 ಸಾವಿರ ಎಕರೆಗೆ ನೀರುಣಿಸುವ ಕೃಷ್ಣಾ ಬಿ ಸ್ಕೀಮ್ ನೀರಾವರಿ ಯೋಜನೆಯ ಜಾರಿಗಾಗಿ ರೈತರನ್ನು ಸಂಘಟಿಸಿ ಪ್ರಮುಖ ಹೋರಾಟವನ್ನು ನಡೆಸುತ್ತಿದ್ದಾರಲ್ಲದೇ ಮಹದಾಯಿ ಹೋರಾಟದಲ್ಲಿಯೂ ಮುಂಚೂಣಿಯಲ್ಲಿದ್ದಾರೆ. ಕಳೆದ ಐದಾರು ವರ್ಷಗಳಿಂದ 10 ಗ್ರಾಮಗಳ ಬಗರಹುಕಂ ಸಾಗುವಳಿದಾರರಿಗೆ ಹಕ್ಕು ಪತ್ರ ನೀಡಲು ಒತ್ತಾಯಿಸಿ ನಡೆಯುತ್ತಿರುವ ಹೋರಾಟದ ನೇತೃತ್ವವಹಿಸಿದ್ದಾರೆ. ಹಲವು ಗ್ರಾಮಗಳಲ್ಲಿ ಉದ್ಯೋಗ ಖಾತ್ರಿ ಯೋಜನೆಯನ್ನುಸಮರ್ಪಕವಾಗಿ ಜಾರಿಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ದಲಿತ-ಪ್ರಗತಿಪರ ಸಂಘಟನೆಗಳ ಜೊತೆಗೆ ಸೇರಿಕೊಂಡು ಈ ಭಾಗದಲ್ಲಿ ನಡೆದ ಹಲವಾರು ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಮಧ್ಯಪ್ರವೇಶಿಸಿ ರಾಜಿರಹಿತ ಹೋರಾಟಗಳನ್ನು ನಡೆಸಿದ್ದಾರೆ. ಮರಳು ಮಾಫಿಯಾ ತಡೆಗಟ್ಟಲು ಕಟ್ಟಡ ಕಾರ್ಮಿಕರು ಮತ್ತು ಮನೆ ಕಟ್ಟಿಕೊಳ್ಳುವವರ ಹಿತಕಾಪಾಡಲು ನಿರ್ಣಾಯಕ ಹೋರಾಟದ ನೇತೃತ್ವ ವಹಿಸಿದ್ದಲ್ಲದೆ ಗಜೇಂದ್ರಗಡದ ಪಾರಂಪರಿಕ ಉದ್ಯೋಗವಾದ ನೇಕಾರರ ಸಮಸ್ಯೆಗಳು ಉಲ್ಬಣವಾದಾಗ ಅವರ ಹೋರಾಟಕ್ಕೂ ಬೆಂಬಲವಾಗಿ ನಿಂತಿದ್ದಾರೆ.

ನಾಗರಿಕ ಸೌಲಭ್ಯಗಳು, ಮನೆ ನಿವೇಶನ ಹಕ್ಕುಪತ್ರ, ಬೀದಿಬದಿ ವ್ಯಾಪಾರಿಗಳ, ಆಟೋರಿಕ್ಷಾ ಚಾಲಕರ ಸಮಸ್ಯೆ, ವೃದ್ಧಾಪ್ಯ ವೇತನ, ಪಡಿತರ ಚೀಟಿ ಮುಂದಾದ ಸಮಸ್ಯೆಗಳಿಗಾಗಿ ಸಾರ್ವಜನಿಕನ್ನು ಸಂಘಟಿಸಿ ನಿರಂತರ ಯಶಸ್ವಿ ಹೋರಾಟಗಳನ್ನು ಪಕ್ಷದ ನೇತೃತ್ವದಲ್ಲಿ ನಡೆಸಿದ್ದಾರೆ.

ಯುವ ಹೋರಾಟಗಾರನಾಗಿ ಜನರ ಸಮಸ್ಯೆಗಳಿಗೆ ಧ್ವನಿಯಾಗಿ ಕೆಲಸ ಮಾಡುತ್ತಿರುವ ಎಂ.ಎಸ್. ಹಡಪದ ಅವರು 2013ರಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಗಜೇಂದ್ರಗಡ ಪುರಸಭೆ ಸದಸ್ಯರಾಗಿ ಆಯ್ಕೆಯಾಗಿದ್ದು ಪುರಸಭೆಯ ಒಳಗೂ ಹಾಗೂ ಹೊರಗು ನಿರಂತರ ಹೋರಾಟ ನಡೆಸುತ್ತಿರುವ ಅವರು ತಮ್ಮ ವಾರ್ಡಿನಲ್ಲಿ ಯಾವುದೇ ಭ್ರಷ್ಟಾಚಾರಕ್ಕೆ ಅವಕಾಶ ನೀಡದೇ 60ಕ್ಕೂ ಹೆಚ್ಚು ಕುಟುಂಬಗಳಿಗೆ ವಸತಿ ಮತ್ತು ಲಕ್ಷಾಂತರ ರೂಪಾಯಿಗಳ ಅಭಿವೃದ್ಧಿ ಕೆಲಸಗಳನ್ನು ಮಾಡಿರುವುದು ಜನಮನ್ನಣೆ ಗಳಿಸಿದೆ. ■

ಹಳಿಯಾಳ ವಿಧಾನಸಭಾ ಕ್ಷೇತ್ರದಿಂದ ಯಮುನಾ ಗಾಂವ್ಕರ್ ನಾಮಪತ್ರ ಸಲ್ಲಿಕೆ

ಹಳಿಯಾಳ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಕಾಂ.ಯಮುನಾ ಗಾಂವ್ಕರ ರವರ ಚುನಾವಣಾ ಠೇವಣಿ ಮೊತ್ತವನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ಹಳಿಯಾಳ ಮತ್ತು ಜೋಯಡಾ ತಾಲುಕ ಸಮಿತಿಯಿಂದ ನೀಡಲಾಯಿತು. ಹಳಿಯಾಳ ಕ್ಷೇತ್ರದಿಂದ ಯಮುನಾ ಗಾಂವ್ಕರ ಸಿ.ಪಿ.ಐ.ಎಂ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. ಈ ಸಂದರ್ಭದಲ್ಲಿ ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಶಾಂತಾರಾಮ್ ನಾಯಕ, ಹರಿಶ ನಾಯ್ಕ, ಪ್ರೇಮಾನಂದ ವೇಳಿಪ, ಡಿ ಶ್ಯಾಮಸನ್ನ, ಹಾಜರಿದ್ದರು. ■





ಮಂಗಳೂರು ನಗರ ಉತ್ತರ ವಿಧಾನಸಭಾ ಕ್ಷೇತ್ರದಿಂದ ಮುನೀರ್ ಕಾಟಿಪಳ್ಳ ನಾಮಪತ್ರ ಸಲ್ಲಿಕೆ

ಏಪ್ರಿಲ್ 19 ರಂದು ಬೆಳಿಗ್ಗೆ 10ಕ್ಕೆ ಪಿ.ವಿ.ಎಸ್ ವೃತ್ತದಿಂದ ಮಹಾನಗರಪಾಲಿಕೆ ಕಚೇರಿ ವರೆಗೆ ಮುನೀರ್ ಕಾಟಿಪಳ್ಳರವರು ಅವರ ಅಭಿಮಾನಿಗಳು ಹಾಗೂ ಪಕ್ಷದ ಕಾರ್ಯಕರ್ತರೊಂದಿಗೆ ಮೆರವಣಿಗೆಯಲ್ಲಿ ಬಂದು ಮಂಗಳೂರು ನಗರ ಉತ್ತರ ವಿಧಾನಸಭಾ ಕ್ಷೇತ್ರದಿಂದ ಸಿ.ಪಿ.ಐ.ಎಂ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ.

"ರಿಯಲ್ ಎಸ್ಟೇಟ್, ಶಿಕ್ಷಣ, ಆರೋಗ್ಯದ ವ್ಯಾಪಾರಿಗಳ, ಕಪ್ಪುಹಣದ ಕುಬೇರರ ವಿರುದ್ಧದ ಜನಸಾಮಾನ್ಯರ ಚುನಾವಣಾ ಸಮರವನ್ನು ಗೆಲ್ಲಿಸುವ ಜವಾಬ್ದಾರಿಯಿಂದ ಹೆಜ್ಜೆ ಹಾಕೋಣ ಬನ್ನಿ", "ಬನ್ನಿ, ಜೊತೆಗೂಡಿ. ಹಣದ ರಾಜಕಾರಣದ ಮುಂದೆ ಜನರಾಜಕಾರಣದ ಸ್ಪರ್ಧೆಗೆ ಇಳಿದಿರುವ ಮುನೀರ್ ಕಾಟಿಪಳ್ಳರನ್ನು ಬೆಂಬಲಿಸಿ", "ಭ್ರಷ್ಟಾಚಾರವಿಲ್ಲ ರಾಜಿ ಇಲ್ಲ". "ಮಂಗಳೂರು ಉತ್ತರಕ್ಕೆ ಮುನೀರ್ ಉತ್ತರ", "ಹಣ ರಾಜಕಾರಣದ ಮುಂದೆ ಜನ ರಾಜಕಾರಣ ಗೆಲ್ಲಲಿ" ಮುಂತಾದ ಘೋಷಣೆಗಳು ಮುನೀರ್ ಅವರ ಚುನಾವಣಾ ಪ್ರಚಾರದಲ್ಲಿ ಜನಜನಿತವಾಗುತ್ತಿವೆ. ■

ಮಾಜಿ ಅಧ್ಯಕ್ಷ ಲೂಲಾ ಗೆ 12 ವರುಷ ಜೈಲು ಶಿಕ್ಷೆ

ಬ್ರೆಜಿಲ್‌ನಲ್ಲಿ ಪ್ರತಿರೋಧದ ಹೊಸ ಘಟ್ಟ ಆರಂಭ

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಕಳೆದ ಶನಿವಾರ (07.04.2018) ರಂದು ಸಾವೊ ಬರ್ನಾರ್ಡೊಡೆ ಕ್ಯಾಂಪೋದಲ್ಲಿನ ಮೆಟಲ್ ವರ್ಕರ್ಸ್ಸ್ ಯೂನಿಯನ್ ಪ್ರಧಾನ ಕಛೇರಿಯ ಹೊರಗೆ ಸಾವಿರಾರು ಕಾರ್ಯಕರ್ತರನ್ನು ಉದ್ದೇಶಿಸಿ ಐತಿಹಾಸಿಕ ಭಾಷಣ ನೀಡಿದ ನಂತರ, ಲೂಯಿಜ್ ಇನ್ಯಾಸಿಯಾ ಲೂಲಾ ಡಿ ಸಿಲ್ವಾ ರವರು ಬ್ರೆಜಿಲ್‌ನ ದಕ್ಷಿಣ ಭಾಗದಲ್ಲಿರುವ ಪರಾನಾ ರಾಜಧಾನಿಯಾದ 'ಕುರಿಟೈಬಾ'ಕ್ಕೆ ಸ್ವತಃ ಅವರೆ ಬಂದರು. ಫೆಡರಲ್ ಪೊಲೀಸ್ ಕೋರ್ಟ್‌ಗೆ ಶರಣಾದರು. ಆಗ ಅಲ್ಲಿ ನೆರೆದಿದ್ದ ಸಾವಿರಾರು ಪ್ರತಿಭಟನಕಾರರ ಮೇಲೆ ಅಶ್ರುವಾಯು ಮತ್ತು ರಬ್ಬರ್ ಬುಲೆಟ್‌ಗಳಿಂದ ಪೊಲೀಸರು ದಾಳಿ ನಡೆಸಿದರು.

ಲೂಲಾ ಬಿಡುಗಡೆಗೆ ವಕೀಲರಿಂದ ಮನವಿ – ಪ್ರತಿಭಟನಕಾರರಿಂದ ನಿರಂತರ ಒತ್ತಡ:

ಲೂಲಾ ಪರ ವಕೀಲರು ಪ್ರಕರಣದ ವಿರುದ್ಧ ಮನವಿ ಸಲ್ಲಿಸುವ ನಿಟ್ಟಿನಲ್ಲಿ ನಿರತರಾಗಿದ್ದಾರೆ. ಪ್ರಮುಖವಾಗಿ ಕುರಿಟೈಬಾದಲ್ಲಿನ ಫೆಡರಲ್ ಕಛೇರಿಯ ಕೋರ್ಟಿನ ಮುಂದೆಯೇ ಒತ್ತಡ ಹೇರುವ ಹೋರಾಟದ ಶಿಬಿರವನ್ನು ನಿರ್ಮಿಸಿದ್ದಾರೆ. ಇಲ್ಲಿಯೇ ಲೂಲಾ ಜೈಲಿನೊಳಗಿದ್ದಾರೆ. ವಕೀಲರು ತುಂಬ ವಿಶ್ವಾಸದಿಂದ ಲೂಲಾರ ಬಿಡುಗಡೆಯಾಗುವರೆವಿಗೂ ನಿರಂತರವಾದ ಪ್ರಯತ್ನ ಮುಂದುವರಿಸುತ್ತೇವೆ ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ಎಷ್ಟರ ಮಟ್ಟಿಗೆ ಇದೆಯೆಂದರೆ ಎಡಪಂಥೀಯ ಸಾಮಾಜಿಕ ಚಳುವಳಿಗಾರರ ದಂಡು ಒಂದು ಕಡೆ ಒಗ್ಗಟ್ಟಿನಿಂದ ಒತ್ತಡ ಹೇರುತ್ತಿದ್ದಾರೆ. ಮತ್ತೊಂದು ಕಡೆ ವಕೀಲರು ತಮ್ಮ ಮನವಿ ಸಲ್ಲಿಸುವ ಕಾರ್ಯದಲ್ಲಿದ್ದಾರೆ. ಒಟ್ಟಾರೆಯಾಗಿ ಒಂದು ಹೊಸ ಬಗೆಯ ಹೋರಾಟ ಅಲ್ಲಿ ಮೂಡಿಬಂದಿದೆ. ಇದು ಬಲಪಂಥೀಯರ ಒಂದು ಸಣ್ಣ ಗುಂಪಿಗೆ ಕಿರಿಕಿರಿ ತಂದಿದೆ.

ಸುಳ್ಳು ಆರೋಪ:

ಲೂಲಾ ರ ಮೇಲಿರುವ ಭ್ರಷ್ಟಾಚಾರಕ್ಕೆ ಸಂಬಂಧಪಟ್ಟಂತ ಅವರು ಅಧ್ಯಕ್ಷರಾಗಿದ್ದಾಗ ಬೀಚ್ ಬಳಿಯಿರುವ 'ಅಪಾರ್ಟ್‌ಮೆಂಟ್' ಒಂದನ್ನು 'ಒ.ಎ.ಎಸ್.' ಎಂಬ ಕಟ್ಟಡ ನಿರ್ಮಾಣ ಸಂಸ್ಥೆಯಿಂದ ಲಂಚ ರೂಪದಲ್ಲಿ ಪಡೆದಿದ್ದಾರೆ ಎಂಬ ಸುಳ್ಳು ಆರೋಪಕ್ಕೆ ಒಳಗಾಗಿದ್ದಾರೆ. ಈ ಪ್ರಕರಣದ ಹಿಂದೆ ಅಮೆರಿಕಾದವರ ಕೈವಾಡವಿರುವಂತಿದೆ ಎಂಬ ಅಭಿಪ್ರಾಯವಿದೆ. ಏಕೆಂದರೆ ಲೂಲಾ ರು 'ಅಪರಾಧಿಯಲ್ಲ' ಅವರು ಲಂಚ ಪಡೆದಿಲ್ಲ, ಅವರು ಮುಗ್ಧರು ಎಂದು 73 ಸಾಕ್ಷಿಗಳ ವಿಚಾರಣೆಯಿಂದ ತಿಳಿದು ಬಂದಿದೆ. ಆದರೆ ಕೋರ್ಟು ಈ ಸಾಕ್ಷಿಗಳನ್ನು ಪರಿಗಣನೆಗೆ ತೆಗೆದುಕೊಂಡಿಲ್ಲವೆಂದು ನ್ಯಾಯವಾದಿ ವ್ಯಾಲೆಸ್ಕಾ ಜನಿನ್ ಹೇಳಿದ್ದಾರೆ.

ಹೇಬಿಯಸ್ ಕಾರ್ಪಸ್ ಅರ್ಜಿ:

ಇದೊಂದು ಅಧ್ಯಕ್ಷ ಲೂಲಾ ಬಿಡುಗಡೆಗೆ ಇರುವ ಕಾನೂನು ಮಾರ್ಗ. ಇವರ ಪರ ವಕೀಲರುಗಳು ಎರಡು ರೀತಿಯಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದಾರೆ. ಒಂದು ಎಸ್.ಟಿ.ಜೆ – ಸುಪೀರಿಯರ್ ಕೋರ್ಟ್ ಆಫ್ ಜಸ್ಟೀಸ್ ಹಾಗೂ ಮತ್ತೊಂದು ಎಸ್‌ಎಫ್.ಸಿ – ಸುಪ್ರೀಂ ಫೆಡರಲ್ ಕೋರ್ಟ್. ಈ ಎರಡೂ ಕೋರ್ಟ್‌ಗಳಲ್ಲಿ ಅರ್ಜಿಗಳನ್ನು ವಿಚಾರಣೆಗೆ ಎತ್ತಿಕೊಳ್ಳಬೇಕೆಂದರೆ, 'ಜನರಿಂದ ಚಳುವಳಿಯ ಪ್ರಬಲ ಒತ್ತಡ ಬೇಕಾಗುತ್ತದೆ ಹಾಗೆಯೇ, ವಿಶ್ವದ ಇತರೆ ದೇಶಗಳಿಂದ ಸೌಹಾರ್ದಯುತ ಬೆಂಬಲದ ಅಗತ್ಯವಿರುತ್ತದೆ. ಈ ನಿಟ್ಟಿನಲ್ಲಿ ಲೂಲಾ ವಿಶ್ವ ಪ್ರಸಿದ್ಧ ನಾಯಕನಾಗಿರುವುದರಿಂದ ವಿದೇಶಗಳಲ್ಲಿ ಇವರ ಬಗ್ಗೆ ಅಪಾರ ಬೆಂಬಲ ವ್ಯಕ್ತವಾಗುವುದರಲ್ಲಿ ಸಂಶಯವಿಲ್ಲ, ಹಾಗೆಯೇ ಬ್ರೆಜಿಲ್‌ನಲ್ಲಿ ಪ್ರಬಲ ಹೋರಾಟ ನಡೆಯುತ್ತುವುದರಿಂದ ಲೂಲಾ ರ ಬಿಡುಗಡೆಯ ಸಾಧ್ಯತೆ ಹೆಚ್ಚಾಗಿದೆ ಎನ್ನುತ್ತಾರೆ ವಕೀಲ ಪ್ಯಾಟ್ರಿಕ್ ಮೇರಿಯಾನೋ, ಇವರು ಸಂವಿಧಾನಿಕ ಕಾನೂನು ಪದವಿಯನ್ನು ಪಡೆದಿರುವವರು ವಿಶ್ವಾಸದಿಂದ ಹೇಳುತ್ತಾರೆ.

ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿ ಮಾರ್ಕೊ ಔರೆಲಿಯೊ ಮೆಲ್ಲೊ ರವರು ನ್ಯಾಷನಲ್ ಇಕೋಲಾಜಿಕಲ್ ಪಾರ್ಟಿ (ಪಿಇಎನ್) ಅರ್ಜಿಯ ಆಧಾರದಲ್ಲಿ ಲೂಲಾ ಬಿಡುಗಡೆಗೆ ಸಲ್ಲಿಸಿರುವ ಮನವಿ ಅರ್ಜಿಗಳನ್ನು ತಿರಸ್ಕರಿಸುವ ಕುರಿತಂತೆ 'ಪ್ರಾಥಮಿಕ ಇಂಜಕ್ಷನ್' ತರುವ ಸಾಧ್ಯತೆ ಇದ್ದು, ಲೂಲಾ ಗೆ ಆಗಿರುವ ಶಿಕ್ಷೆಯನ್ನು ಮಂಜೂರು ಮಾಡುವ ನಿಟ್ಟಿನಲ್ಲಿ ಮುಂದಾಗಿದ್ದಾರೆ. ಏಕೆಂದರೆ, ಮುಂಬರುವ ಬ್ರೆಜಿಲ್ ಅಧ್ಯಕ್ಷೀಯ ಚುನಾವಣೆಯ ಆಕಾಂಕ್ಷಿಯಾಗಿದ್ದಾರೆ 'ಮೆಲ್ಲೋರವರು. ಹಾಗಾಗಿ ಬ್ರೆಜಿಲ್‌ನ ಬಾರ್ ಅಸೋಷಿಯನ್ ಮೂಲಕ ಎ.ಡಿ.ಸಿ. ಸಲ್ಲಿಸಿರುವ ಅರ್ಜಿಯನ್ನು ಕೂಡ ಪರಿಗಣಿಸಿ, ಲೂಲಾರ ಬಿಡುಗಡೆಗೆ ತಡೆಯೊಡ್ಡುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಆದರೆ, ಮುಖ್ಯ ನ್ಯಾಯಾಧೀಶರು ಲೂಲಾ ಪರವಾದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಎ.ಡಿ.ಸಿ. ಗೆ ಮುಂಚೆಯೇ ವಿಚಾರಣೆಗೆ ಎತ್ತಿಕೊಳ್ಳುವ ಸಂಭವವಿದೆ. ಏಕೆಂದರೆ ಎ.ಡಿ.ಸಿ. ಯ ಅರ್ಜಿಯು ಡಿಸೆಂಬರ್ 2017 ರಿಂದಲೇ ಬಾಕಿಯಿದೆ. ಆದ್ದರಿಂದ ಮೊದಲು ಮನವಿಗಳಿಗೆ ಸಂಬಂಧಪಟ್ಟ ಹೇಬಿಯಸ್ ಕಾರ್ಪಸ್ ಅರ್ಜಿಗಳನ್ನು ವಿಚಾರಣೆಗೆ ತೆಗೆದುಕೊಳ್ಳುತ್ತಾರೆ ಇದಕ್ಕೆ ಮತ್ತೊಂದು ಬಲವಾದ ಕಾರಣ, ಕೋರ್ಟಿನ ಮುಂದೆಯೇ ನಡೆಯುತ್ತಿರುವ ಪ್ರಬಲ ಹೋರಾಟದ ಒತ್ತಡ ಎಂಬ ಅಭಿಪ್ರಾಯವನ್ನು ಲೂಲಾ ಪರ ವಕೀಲರು ಹೊಂದಿದ್ದಾರೆ.



ವಕೀಲರಾದ ದೇಯ್ ಸ್ಟ್ರೋಜಾಕೆ ಪ್ರಕಾರ ಸಂವಿಧಾನದ ಆಶಯಗಳಂತೆ ನೇರವಾಗಿ ತೀರ್ಪು ನೀಡಬೇಕಾಗುತ್ತದೆ. ಏಕೆಂದರೆ ಈ ಬಾರಿ 6–5 ಮತಗಳ ಅಂತರವಿರುವುದು, ಅದು ಲೂಲಾರ ಪರವಾಗಿ ಬಿಡುಗಡೆಯ ಮನವಿಗೆ ಮತಗಳ ಹೊಸದಾದ ನಿಯಮ ಜಾರಿಗೆ ತರಬೇಕಾಗುತ್ತದೆ. ಆದ್ದರಿಂದ ಇದು ಒಂದು ರೀತಿಯ 'ಚದುರಂಗ' ಆಟದಂತಿದೆ. ಏನು ಬೇಕಾದರೂ ಆಗಬಹುದು, ಆದರೆ ನಮ್ಮ ಪರವಾಗಿ ಒಳ್ಳೆಯದೆ ಆಗಲೆಂದು ಭರವಸೆ ಇಡೋಣ ಎನ್ನುತ್ತಾರೆ.

ಇದೇ ಸಮಯದಲ್ಲಿ ವಿವಿಧ ಸಾಮಾಜಿಕ ಚಳುವಳಿಗಳ ಸಾವಿರಾರು ಕಾರ್ಯಕರ್ತರು ಲೂಲಾ ಬಿಡುಗಡೆಗೊಳ್ಳುವವರೆಗೂ ನಿರಂತರ ಪ್ರತಿರೋಧ ಒಡ್ಡುವ ಶಿಬಿರಗಳನ್ನು ನಿರ್ಮಿಸಿಕೊಂಡು ಪೊಲೀಸ್ ಪ್ರಧಾನ ಕಛೇರಿ ಹೊರಗೆ ಹೋರಾಡುತ್ತಿದ್ದಾರೆ.

ಈ ಮಧ್ಯೆ ರೆಸಿನಾ ಕ್ರೂಕ್ ಸೆಂಟ್ರಲ್ ಲುನಿಕಾ ಡಾಸ್ ಟ್ರಬಲಾಡೋರೆಸ್ (ಸಿ.ಯು.ಟಿ.) – ಯುನಿಫೈಡ್ ವರ್ಕರ್ಸ್ ಸೆಂಟ್ರಲ್ ನ ರಾಜ್ಯಮಟ್ಟದ ಅಧ್ಯಕ್ಷರು ಈ ರೀತಿ ಹೇಳಿಕೆ ಕೊಟ್ಟಿದ್ದಾರೆ. ಪ್ರತಿರೋಧ ಶಿಬಿರದಲ್ಲಿ ಭಾಗವಹಿಸಿರುವ ಸಂಘಟನೆಗಳು ಶಾಶ್ವತ ಜಾಗರಣೆ ನಿರ್ವಹಿಸಲು ಸಜ್ಜಾಗಿಯೇ ಬಂದಿದ್ದಾರೆ. ಅನೇಕ ಆಶ್ರಯ ತಾಣಗಳನ್ನು ನಿರ್ಮಿಸಿ ಅಲ್ಲಿ ನೀರು, ಆಹಾರ ಸರಬರಾಜನ್ನು ಖಾತ್ರಿಪಡಿಸಲಾಗಿದೆ. ಪ್ರತಿರೋಧಕ್ಕೆ ಕೊನೆ ಎಂಬುದು ನಿಗಧಿಯಾಗಿಲ್ಲ. ಅನಿರ್ದಿಷ್ಟ ಕಾಲದವರೆಗೂ ಮುಂದುವರಿಯುತ್ತದೆ. ಅದು ಲೂಲಾ ಬಿಡುಗಡೆ ಘೋಷಣೆ ಹೊರ ಬರುವವರೆಗೂ ಮುಂದುವರಿಯುತ್ತದೆ. ಇದು ಲೂಲಾ ರ ಮುಗ್ಧತೆಗೆ ಹಿಡಿದ ಕನ್ನಡಿಯಾಗಿದೆ ಇದೊಂದು ವೈವಿಧ್ಯಮಯ ಎಡ ಮತ್ತು ಸಾಮಾಜಿಕ ಚಳವಳಿ ಹಾಗೂ ಅಭೂತಪೂರ್ವ ಏಕತೆ ಮತ್ತು ಹೋರಾಟದ ಬದ್ಧತೆಯ ಪ್ರತೀಕವಿದಾಗಿದೆ. ಲೂಲಾ ಎಂದರೆ, ಪ್ರಜಾಪ್ರಭುತ್ವದ ಆಶಯದ ಹೋರಾಟ ಹಾಗೂ ಸ್ವಾತಂತ್ರ್ಯಕ್ಕಾಗಿ ಈ ದಂಗೆ ಹೀಗೆಯೇ ಮುಂದುವರಿಯುತ್ತದೆ ಎಂದಿದ್ದಾರೆ.

ಲೂಲಾ ಪ್ರಕರಣವು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಗಣನೀಯ ಗಮನವನ್ನು ಸೆಳೆದಿದೆ. ಅರ್ಜೆಂಟೈನಾ, ವೆನುಜುವೆಲಾ, ಅಮೆರಿಕ, ಕ್ಯಾಟಿಲೋನಿಯ, ಕೊಲಂಬಿಯಾ, ಮೆಕ್ಸಿಕೊ, ಉರುಗ್ವೆ, ಫ್ರಾನ್ಸ್ ಮತ್ತು ಇತರ ದೇಶಗಳು ಬ್ರೆಜಿಲ್ ನಲ್ಲಿರುವ ಅವರವರ ರಾಯಭಾರ ಕಚೇರಿಗಳು – ಸಾರ್ವಜನಿಕ ಸ್ಥಳಗಳ ಮುಂದೆ ಲೂಲಾ ಬಿಡುಗಡೆಗೆ ಆಗ್ರಹಿಸುತ್ತಿದ್ದಾರೆ. ಲೂಲಾ ಡಿ ಸಿಲ್ವಾ ರವರು ಟ್ರೇಡ್ ಯೂನಿಯನ್ ಚಳುವಳಿಯ ಅಗ್ರಗಣ್ಯ, ಅವರೊಬ್ಬ ಪ್ರಬುದ್ಧ ಪ್ರಾಮಾಣಿಕ ರಾಜಕೀಯ ನಾಯಕನಾಗಿ, ಸಾಮಾಜಿಕ ಬದ್ಧತೆಯೊಂದಿಗೆ ಈ ಅಸಮಾನತೆಯ ಜಗತ್ತಿನ ಭಾಗವಾದ ಬ್ರೆಜಿಲ್ ನ ಜನತೆಯ ಬಡತನ ಮತ್ತು ಹಸಿವು ಗಳ ನಿರ್ಮೂಲನೆಯ ಗುರಿಯೊಂದಿಗೆ ಸಾರ್ವಜನಿಕ ನೀತಿಗಳನ್ನು ರೂಪಿಸಿ ಜಾರಿಗೆ ತಂದವರು. 2018 ರ ನೊಬೆಲ್ ಶಾಂತಿ ಪ್ರಶಸ್ತಿಗಾಗಿ ಲೂಲಾ ರ ಹೆಸರನ್ನು ನಾಮ ನಿರ್ದೇಶನ ಮಾಡಲು 1980 ರ ನೋಬೆಲ್ ಪ್ರಶಸ್ತಿ ವಿಜೇತರಾದ ಅಡಾಲ್ಫ್ ಪೆರೆಜ್ ಎಸ್ಕ್ವೆಲಿನ್ ರವರು ಅಂತರಾಷ್ಟ್ರೀಯ ಅಭಿಯಾನವನ್ನು ಕೈಗೊಂಡಿದ್ದಾರೆ. ಇವೆಲ್ಲಾ ಲೂಲಾ ರ ಪ್ರಾಮಾಣಿಕತೆಯ ಜನಸೇವೆಗೆ ಸಾಕ್ಷಿಯಾಗಿವೆ.

ವೆನಿಜುವೆಲಾದ ಅಧ್ಯಕ್ಷ ನಿಕೋಲಸ್ ಮಡುರೊ, ಬೊಲಿವಿಯ ಅಧ್ಯಕ್ಷ ಇವೊ ಮಾರೇಲ್ಸ್, ಈಕ್ವೆಡಾರ್ ನ ಮಾಜಿ ಅಧ್ಯಕ್ಷ ರಾಫೆಲ್ ಕೊರಿಯಾ ಮತ್ತು ಉರುಗ್ವೆಯ ಪ್ರಸಕ್ತ ಉಪಾಧ್ಯಕ್ಷ ಲೂಸಿಯಾ ಟೋಪೋಲಾನಿಸ್ಕಿ, ಮೊದಲಾದವರು ಮಾಜಿ ಅಧ್ಯಕ್ಷ ಹಾಗೂ ಟ್ರೇಡ್ ಯೂನಿಯನ್ ನಾಯಕ ಲೂಲಾ ರ ಬಿಡುಗಡೆಗೆ ನಡೆಯುತ್ತಿರುವ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ.

ಇದೀಗ ಬ್ರೆಜಿಲ್ ನಲ್ಲಿ ಹೊಸ ಅವಧಿಯ ಹೋರಾಟಗಳಲ್ಲಿ ಐಕ್ಯತೆಯು ಮೂಡಿಬಂದಿದೆ. ಇದು ಬಲಪಂಥೀಯ ಪಕ್ಷಗಳಿಗೆ ಬಿಕ್ಕಟ್ಟಿನ ಕ್ಷಣವಾಗಿದೆ. ಅವರ ಹತಾಶೆ ಮುಂದವರಿದಿದೆ. ಲೂಲಾರನ್ನು ಜೈಲಿಗೆ ಕಳುಹಿಸಿರಬಹುದು ಅವರನ್ನು ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಿದಂತೆ ಹೂಡಿರುವ ಒಳಸಂಚು ಇದಾಗಿದೆ. ಆದರೆ, ಈಗ ಎಡಪಂಥೀಯರಿಗೆ ಸಮಯ ಬಂದಿದೆ ಪರಿಸ್ಥಿತಿಯಲ್ಲಿ ಸೂಕ್ತ ಮಧ್ಯ ಪ್ರವೇಶಿಸಿ, ಎದುರಾಗಿರುವ ಪ್ರಕ್ಷುಬ್ಧ ಸವಾಲುಗಳನ್ನು ಅದರ ಬಿಕ್ಕಟ್ಟನ್ನು ಪರಿಹರಿಸುವ ಹೊಸದೊಂದು ಮಾರ್ಗದ ಅನ್ವೇಷಣೆಯ ಸಾಧ್ಯತೆ ಮೂಡಿ ಬಂದಿದೆ, ಕಾದು ನೋಡೋಣ.



JANASHAKTHI KANNADA VARA PATRIKE APRIL 23-29, 2018 Price: Rs. 10/- Date of Publication: 20 APRIL 2018 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಸಿಪಿಐ(ಎಂ) ರಾಜಕೀಯ ಸಮಾವೇಶ

"ಶ್ರೀಮಂತರ ನಡುವಿನ ಸಂಘರ್ಷ ಈ ಬಾರಿಯ ಚುನಾವಣೆಯಲ್ಲಿ ಮತವಾಗಿ ಪರಿವರ್ತನೆ ಆಗಬೇಕು" – ಮುನೀರ್ ಕಾಟಿಪಳ್ಳ

ಮಂಗಳೂರಿನ ಡಾನ್ ಬಾಸ್ಕೋ ಸಭಾಂಗಣದಲ್ಲಿ ನಡೆದ ಸಿಪಿಐಎಂ ಪಕ್ಷದ ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರದ ನಡೆದ ರಾಜಕೀಯ ಸಮಾವೇಶದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆದಿದೆ. ಮಂಗಳೂರು ಉತ್ತರ ವಿಧಾನ ಸಭಾ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಮುನೀರ್ ಕಾಟಿಪಳ್ಳ ಈ ಸಮಾವೇಶವನ್ನು ಉದ್ದೇಶಿಸಿ ಮಾತಾಡುತ್ತ ಈ ಬಾರಿಯ ಚುನಾವಣೆ ಹಿಂದೂ ಮುಸ್ಲಿಮ್ ಧರ್ಮಗಳ ನಡುವಿನ ಚುನಾವಣೆ ಅಲ್ಲ ಬದಲಾಗಿ ಬಡವರು ಹಾಗೂ ಶ್ರೀಮಂತ ವರ್ಗಗಳ ನಡುವಿನ ಚುನಾವಣೆ ಎಂದು ಹೇಳಿದರು. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಮಂಗಳೂರಿನಿಂದ ದುಡಿಯುವ ವರ್ಗದ ಅಭ್ಯರ್ಥಿಯಾದ "ಸುನೀಲ್ ಕುಮಾರ್ ಬಜಾಲ್" ಗೆಲ್ಲಿಸುವ ಮೂಲಕ ರಾಜ್ಯಕ್ಕೆ ಒಂದು ಸಂದೇಶವನ್ನು ರವಾನೆ ಮಾಡಬೇಕು ಎಂದು ಮತದಾರಿಗೆ ಕರೆ ನೀಡಿದರು.



ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳ ಪಾಲಿಗೆ ಚುನಾವಣೆ ಎಂಬುವುದು ಒಂದು ವ್ಯಾಪಾರವಾಗಿದೆ. ಈ ಬಾರಿಯ ಚುನಾವಣೆಯಲ್ಲಿ ದುಡ್ಡು ಖರ್ಚು ಮಾಡಲು ಸಾಧ್ಯವಿರುವ ಅಭ್ಯರ್ಥಿಗಳಿಗೆ ಟಿಕೆಟ್ ನೀಡುವ ತಕರಾರಿನ ಪರಿಣಾಮವಾಗಿ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳಿಗೆ ಹಲವು ಕ್ಷೇತ್ರಗಳಲ್ಲಿ ತಮ್ಮ ಅಭ್ಯರ್ಥಿಗಳನ್ನು ಘೋಷಣೆ ಮಾಡಲು ಇದುವರೆಗೂ ಸಾಧ್ಯವಾಗಿಲ್ಲ ಎಂದರು. ಶ್ರೀಮಂತರ ಟಿಕೆಟ್ ಆಕಾಂಕ್ಷಿಗಳಿಗೆ ಪಕ್ಷ ನಿಷ್ಠೆಯೂ ಇಲ್ಲ ಜನ ನಿಷ್ಠೆಯೂ ಇಲ್ಲ ಎಂದು ಲೇವಡಿ ಮಾಡಿದ ಮುನೀರ್, ಸಿಪಿಐ(ಎಂ) ಅಭ್ಯರ್ಥಿಗಳ ಪ್ರಚಾರ ವೈಖರಿ ನೋಡಿ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳಿಗೆ ನಡುಕ ಹುಟ್ಟಿದೆ ಎಂದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದುಡಿಯುವ ಬಡ ಜನರು ಅಧಿಕ ಸಂಖ್ಯೆಯಲ್ಲಿದ್ದಾರೆ. ಇದು ಬಡವರ ಹಾಗೂ ಶ್ರೀಮಂತ ವರ್ಗಗಳ ನಡುವಿನ ಚುನಾವಣೆ ಆಗಿರುವುದರಿಂದ ಶೇಕಡಾ 90 ರಷ್ಟಿರುವ ಬಡ ಜನರ ಕುರಿತಾಗಿ ಯೋಚಿಸುವ ಅಭ್ಯರ್ಥಿಯನ್ನು ಚುನಾವಣೆಯಲ್ಲಿ ಗೆಲ್ಲಿಸಿ ಎಂದು ಕರೆ ನೀಡಿದರು.



ಇಂದಿನ ದಿನಗಳಲ್ಲಿ ಚುನಾವಣೆಯಲ್ಲಿ ಗೆಲ್ಲುವವರು ಶ್ರೀಮಂತರರು. ಗೆದ್ದ ಬಳಿಕ ಇವರು ಶ್ರೀಮಂತರ ಪರವಾಗಿ ಕೆಲಸ ಮಾಡ್ತಾರೆ. ಚುನಾವಣೆ ಘೋಷಣೆಯಾದ ಬಳಿಕವಷ್ಟೇ ಬಡವರ ನೆನಪಾಗುತ್ತದೆ. ಆಡಳಿತದಲ್ಲಿರುವ ಕಾಂಗ್ರೆಸ್ ಹಾಗೂ ಬಿಜೆಪಿ ಶಾಸಕರು ಸಂಸದರಿಗೆ ಜಿಲ್ಲೆಗೆ ಒಂದೇ ಒಂದು ಸರ್ಕಾರಿ ಮೆಡಿಕಲ್ ಕಾಲೇಜು ತರಲು ಸಾಧ್ಯವಾಗಿಲ್ಲ. ಇರುವ ಸರ್ಕಾರಿ ಜಿಲ್ಲಾಸ್ಪತ್ರೆಯನ್ನು ಖಾಸಗಿಯವರಿಗೆ ಮಾರಾಟ ಮಾಡಲು ಹೊರಟಿದ್ದಾರೆ. ಇಂದು ವೆನ್ಲಾಕ್ ಸರ್ಕಾರಿ ಜಿಲ್ಲಾಸ್ಪತ್ರೆ ಖಾಸಗಿ ವ್ಯಕ್ತಿಗಳ ಪಾಲಾಗದೆ ಉಳಿದುಕೊಳ್ಳಲು ಸಾಧ್ಯವಾಗಿರುವುದು ಸಿಪಿಐ(ಎಂ) ನಡೆಸಿದ ಹೋರಾಟದಿಂದಾಗಿ ಎಂದರು. ಇಂದು ಶಿಕ್ಷಣ ವ್ಯವಸ್ಥೆ ದುಬಾರಿಯಾಗಿದೆ. ಬಡವರು ಗುಣಮಟ್ಟದ ಶಿಕ್ಷಣ ಪಡೆಯಲು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ನಮ್ಮನ್ನಾಳುವ ಜನಪ್ರತಿನಿಧಿಗಳು ಜನಸಾಮಾನ್ಯರ ಪ್ರತಿನಿಧಿಗಳಲ್ಲ, ಬದಲಾಗಿ ರಿಯಲ್ ಎಸ್ಟೇಟ್ ವ್ಯಾಪಾರಿಗಳ ಪ್ರತಿನಿಧಿಗಳು ಎಂದು ಕಾಂಗ್ರೆಸ್ ಹಾಗೂ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು. ಇದೇ ವೇಳೆ, ತುಳುನಾಡಿಗೆ ಚಳುವಳಿಯ ಹೋರಾಟದ ಇತಿಹಾಸ ಇದೆ, ಕೋಟಿ ಚೆನ್ನಯ್ಯರಂತಹಾ ಆದರ್ಶ ಪುರುಷರು ಪಾಳೇಗಾರರ ವಿರುದ್ಧ ಹೋರಾಟ ಮಾಡಿದ ಇತಿಹಾಸವಿದ್ದು ಅವರು ನೆತ್ತರು ಹರಿಸಿದ ಭೂಮಿ ಇದು ಎಂದು ನೆನಪಿಸಿಕೊಂಡ ಮುನೀರ್ ಈ ಎಲ್ಲಾ ಕಾರಣಕ್ಕಾಗಿ ಬಡವರ ಹಾಗೂ ಶ್ರೀಮಂತರ ನಡುವಿನ ಸಂಘರ್ಷ ಈ ಬಾರಿಯ ಚುನಾವಣೆಯಲ್ಲಿ ಮತವಾಗಿ ಪರಿವರ್ತನೆ ಆಗಬೇಕು ಎಂದ ಮತದಾರರಲ್ಲಿ ವಿನಂತಿಸಿದರು.

ಈ ರಾಜಕೀಯ ಸಮಾವೇಶಕ್ಕೆ ವ್ಯಾಪಕ ಜನಬೆಂಬಲ ದೊರಕಿದೆ. ಸಭಾಂಗಣದಲ್ಲಿ ಸಿಪಿಐ(ಎಂ) ಝಿಂದಾಬಾದ್, ಸುನೀಲ್ ಕುಮಾರ್ ಬಜಾಲ್ ಝಿಂದಾಬಾದ್, ಸೌಹಾರ್ದತೆಯಿಂದ ಅಭಿವೃದ್ಧಿ. ಎಂಬಿತ್ಯಾದಿ ಘೋಷಣೆಗಳು ಮೊಳಗಿದವು.



ಹೈದರಬಾದ್‌ನಲ್ಲಿ ನಡೆಯುತ್ತಿರುವ 22ನೇ ಸಿಪಿಐ(ಎಂ) ಮಹಾಧಿವೇಶನದಲ್ಲಿ ಕರ್ನಾಟಕದ ಪ್ರತಿನಿಧಿಗಳು



ಯಾರಿಗೆ ಬಂತು ಎಲ್ಲಿಗೆ ಬಂತು ಅಚ್ಛೇದಿನ??

– ಬಿ.ಎಂ. ಬಷೀರ್

ಯಾರಿಗೆ ಬಂತು, ಎಲ್ಲಿಗೆ ಬಂತು
ನರೇಂದ್ರ ಮೋದಿಯ ಅಚ್ಛೇದಿನ್
ಮೋದಿ, ಮಲ್ಯರ ಜೇಬಿಗೆ ಬಂತು
ಬ್ಯಾಂಕನ್ನು ಮುಕ್ಕುವ ಬಾಯಿಗೆ ಬಂತು

ಪತಂಜಲಿ ಬಾಬನ ಕೋಣೆಗೆ ಬಂತು
ಪ್ರಧಾನಿ ಮೋದಿಯ ಅಚ್ಛೇ ದಿನ್
ಬಡವನ ಮನೆಗೆ ಬರಲಿಲ್ಲ
ಬೆಳಕಿನ ಕಿರಣ ತರಲಿಲ್ಲ

ಸ್ವಿಸ್ ಬ್ಯಾಂಕಿನ ಖಾತೆಗಳಿಂದ
ಕಪ್ಪು ಹಣವನು ತರಲಿಲ್ಲ
ಬೆವರನು ಸುರಿಸಿ ಕೂಡಿದ ಹಣವನು
ಕಿತ್ತುಕೊಂಡವರು ಇವರೆಲ್ಲ
ನೋಟು ನಿಷೇಧದ ಘೋಷಣೆಯಲ್ಲಿ
ಬ್ಯಾಂಕಿನ ಮುಂದೆ ಸತ್ತು ಮಲಗಿತು
ಯಾರೂ ಕಾಣದ ಅಚ್ಛೇ ದಿನ್
ನರೇಂದ್ರ ಮೋದಿಯ ಅಚ್ಛೇದಿನ್

ಸಾವಿರಾರು ಜನ ಗೋರಿಯಾದರು
ಲಕ್ಷ ಲಕ್ಷ ಜನ ಬೀದಿಗೆ ಬಿದ್ದರು
ರೈತ ಕಾರ್ಮಿಕರು ನೇಣಿಗೇರಿದರು
ಯಾರಿಗೆ ಬಂತು ಅಚ್ಛೇದಿನ್?
ನರೇಂದ್ರ ಮೋದಿಯ ಅಚ್ಛೇದಿನ್

ಗೋರಕ್ಷಕರ ಚೂರಿಗೆ ಬಂತು
ಆರೆಸ್ಸೆಸ್‌ನ ಲಾಠಿಗೆ ಬಂತು
ಖಾಕಿ, ಕಾವಿಯ ದರ್ಪಕೆ ಬಂತು
ನರೇಂದ್ರ ಮೋದಿಯ ಅಚ್ಛೇ ದಿನ್

ರಾಮನ ಹೆಸರಲಿ ರಾವಣರೆಲ್ಲರೂ
ಹಸು ಗೂಸನ್ನು ಹರಿದು ಮುಕ್ಕಿದರು
ದೊರೆಯೋ ಮೌನವ ಮುರಿಯಲೇ ಇಲ್ಲ
ಗೋವಿನ ಹೆಸರಲಿ ಗದ್ದಲ ಎಬ್ಬಿಸಿ
ರೈತ ವರ್ಗದ ರಕ್ತವ ಕುಡಿದು
ಏಳಲೇ ಇಲ್ಲ ಅಚ್ಛೇ ದಿನ್
ನರೇಂದ್ರ ಮೋದಿಯ ಅಚ್ಛೇದಿನ್

ಪೆಟ್ರೋಲ್ ಬೆಲೆಗಳು ಇಳಿಯಲೇ ಇಲ್ಲ
ಬಡವರ ಬವಣೆಯು ಮುಗಿಯಲೇ ಇಲ್ಲ
ಆಸ್ಪತ್ರೆಯಲ್ಲಿ ಸತ್ತು ಮಲಗಿದ
ಹಸುಗೂಸುಗಳ ಮೆರವಣಿಗೆಯಲಿ
ಸವಾರಿ ಹೊರಟಿದೆ ಅಚ್ಛೇ ದಿನ್
ನರೇಂದ್ರ ಮೋದಿಯ ಅಚ್ಛೇ ದಿನ್

(ಕವಿ ಸಿದ್ದಲಿಂಗಯ್ಯ ಅವರ ಕ್ಷಮೆ ಕೋರಿ)

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**